ಪುಸ್ತಕ ಪ್ರಪಂಚ

ಸಂಪುಟ ೫೦ ಮಾರ್ಚಿ ೨೦೦೦ ಸಂಚಿಕೆ ೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6, Price : Rupees Ten

ಬಿಡಿಪ್ರತಿ: ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ: ರೂ. ೬೦೦

ಸಂಸ್ಥೆಗೆ: ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ದ್ರಾವಿಡ ವಿಶ್ವವಿದ್ಯಾನಿಲಯದ ಸ್ಥಾಪಕ ದಿನಾಚರಣೆ

೨೪.೧೦.೧೯೯೯ ರಂದು ಆಂಧ್ರಪ್ರದೇಶದ ಕುಪ್ಪಮ್‌ನಲ್ಲಿ ದ್ರಾವಿಡ ವಿಶ್ವವಿದ್ಯಾನಿಲಯದ ಸ್ಥಾಪಕ ದಿನಾಚರಣೆ. ಆ ದಿನ ಮುಖ್ಯ ಅತಿಥಿಯಾಗಿ ಭಾಷಣ ಮಾಡಿದವರು ಭಾರತರತ್ನ ಶ್ರೀ ಸಿ.ಸುಬ್ರಮಣಿಯಂ ಅವರು. ಅವರ ಭಾಷಣದ ಪೂರ್ಣ ಪಾಠ ತಿರವಾಂಕೂರಿನ ಡಿಎಲ್‌ಎ ಪ್ರಕಟಿಸುವ ಜನವರಿ ತಿಂಗಳ (೨೦೦೦) ಮಾಸಿಕ ವಾರ್ತಾ ಪತ್ರಿಕೆಯಲ್ಲಿ ಅಚ್ಚಾಗಿದೆ. ಅವರ ಭಾಷಣದಲ್ಲಿ ಪ್ರಸ್ತಾಪಗೊಂಡಿರುವ ಸಂಗತಿಗಳಿವು: ೧) ಈಗಿನ ಭಾಷಾವಾರು ಪ್ರಾಂತಗಳಿಗೆ ಬದಲಾಗಿ ಇಂಡಿಯಾವನ್ನು ಐದು ವಿಭಾಗಗಳನ್ನಾಗಿ ವಿಭಜನೆ ಮಾಡತಕ್ಕದ್ದು. ೨) ಅಹಿಂದಿ ರಾಜ್ಯಗಳು ಬೇಕೆನ್ನುವವರೆಗೆ ಇಂಗ್ಲಿಷನ್ನು ದ್ವಿತೀಯ ಭಾಷೆಯಾಗಿ ಮುಂದುವರಿಸತಕ್ಕದ್ದು. ೩) ಕಂಪ್ಯೂಟರ್ ಯುಗಕ್ಕೆ ಹೊಂದಿಕೊಳ್ಳುವಂತೆ ಭಾರತೀಯ ಭಾಷೆಗಳನ್ನು ಬೆಳೆಸತಕ್ಕದ್ದು. ೪) ಗದ್ಯಗ್ರಂಥಗಳ ಆಧಾರದ ಮೇಲೆ ವ್ಯಾಕರಣಗಳನ್ನು ಬರೆಸತಕ್ಕದ್ದು. ೫) ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಪದಗಳನ್ನು ಬಳಸಿಕೊಳ್ಳತಕ್ಕದ್ದು. ೬) ದೇಶೀಯ ಲಿಪಿಯೊಡನೆ ರೋಮನ್ ಲಿಪಿಯನ್ನು ಉಪಯೋಗಿಸತಕ್ಕದ್ದು. ೭) ದ್ರಾವಿಡ ವಿಶ್ವವಿದ್ಯಾನಿಲಯದಲ್ಲಿ ಭಾಷೆ ಮತ್ತು ಸಂಸ್ಕೃತಿಗಳ ಅಧ್ಯಯನ ಮಾತ್ರ ನಡೆಯತಕ್ಕದ್ದು ೮) ಬೇರೆ ಕಡೆಗಳಿಂದ ವಿದ್ವಾಂಸರನ್ನು ಕರೆಯತಕ್ಕದ್ದು. ೯) ಉತ್ತಮಿಕೆಯನ್ನು ಸ್ಥಾಪಿಸತಕ್ಕದ್ದು. ೧೦) ವಿವೇಕಾನಂದರ ಸಲಹೆಯಂತೆ ವಿಜ್ಞಾನ ಮತ್ತು ಅಧ್ಯಾತ್ಮಗಳ ಸಾಮರಸ್ಯವನ್ನು ಸಾಧಿಸತಕ್ಕದ್ದು. ಈ ಸಲಹೆಗಳನ್ನು ನೀಡುವಾಗ ಭಾರತರತ್ನರು ತಮಿಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡಿದ್ದಾರೆಂಬುದು ಸುಸ್ಪಷ್ಟ.

ಈ ದಶಾಂಶ ಸಲಹೆಗಳ ಪೈಕಿ, ಮೊದಲನೆಯದು ವ್ಯವಹಾರ ಕೌಶಲ್ಯ ಬಾಹಿರವಾದ ಸಲಹೆ. ಜಗತ್ತಿನ ಎಲ್ಲ ರಾಷ್ಟ್ರಗಳು ಭಾಷೆಗಳ ಆಧಾರದ ಮೇಲೆ ನಿರ್ಮಾಣಗೊಂಡಿವೆಯೆಂಬುದನ್ನು ಮರೆಯಲಾಗದು. ಅವರ ಕನಸಿನ ದಕ್ಷಿಣ ಪ್ರದೇಶದಲ್ಲಿ ಒಂದು ಭಾಷೆಯ ಜನ ಪ್ರಬಲರಾಗುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಇಂಗ್ಲಿಷನ್ನು ಇಂಡಿಯಾದಿಂದ ದಬ್ಬಲಾಗದು; ದಬ್ಬುವುದು ಮೂರ್ಖತನ. ಅದನ್ನು ಇಂಡಿಯನ್ ಇಂಗ್ಲಿಷನ್ನಾಗಿ ರೂಪಿಸಿಕೊಳ್ಳಬೇಕು. ಗಾಂಧೀಜಿ ಸಲಹೆಯಂತೆ ಹಿಂದಿಗೆ ಬದಲಾಗಿ ಹಿಂದೂಸ್ಥಾನಿ ಇರಬೇಕಾಗಿತ್ತು. ಈಗಲೂ ಕೆಲವು ವ್ಯಾಕರಣ ನಿಯಮಗಳನ್ನು ಸಡಿಲಿಸಿ, ದ್ರಾವಿಡ ಭಾಷೆಗಳ ಶಬ್ದಗಳನ್ನು ಸೇರಿಸಿಕೊಂಡು ಹಿಂದಿಯನ್ನು ಬೆಳೆಸುವುದು ಸೂಕ್ತ. ಪೂರ್ಣವಾಗಿ ವಿಕಾಸಗೊಂಡಿರುವ ಹದಿನಾಲ್ಕು ಭಾರತೀಯ ಭಾಷೆಗಳು ಕೂಡಲೇ ರಾಜ್ಯ-ಕೇಂದ್ರಗಳ ಆಡಳಿತ ಭಾಷೆಗಳಾಗಬೇಕು, ಸ್ವಿಟ್ಜರ್‌ಲೆಂಡಿನಲ್ಲಿರುವಂತೆ ಆಗ ಎಲ್ಲ ಭಾಷೆಗಳು ಸಮಾನ ರೀತಿಯಲ್ಲಿ ಸಾಮರಸ್ಯದಿಂದ ಸುಪುಷ್ಟವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಬೇರೆ ಭಾಷೆಗಳ ಸ್ಥಿತಿ ಹೇಗಿದೆಯೋ, ಕನ್ನಡದಲ್ಲಂತು ಗದ್ಯ ಗ್ರಂಥಗಳ ಆಧಾರದ ಮೇಲೆ ವ್ಯಾಕರಣಗಳು ರಚನೆಯಾಗುತ್ತಿವೆ. ಇದೇನೂ ದೊಡ್ಡ ಸಮಸ್ಯೆಯಲ್ಲ. ಸಂಸ್ಕೃತ ಮಾತ್ರವಲ್ಲ, ತಮಿಳು ಸಹ ಭಾರತೀಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಮಾನ ಪಾತ್ರ ವಹಿಸಿದೆ ಎನ್ನುವ ಸುಬ್ರಮಣಿಯವರ ಮಾತಿನಲ್ಲಿ ಪಾರ್ಶ್ವಿಕ ಸತ್ಯವಿದೆ. ಹಾಗೆ ಅದ್ದರಲ್ಲಿ ತಪ್ಪಿಲ್ಲ. ಏಕೆಂದರೆ ಅವರಿಗೆ ಬೇರೆ ಭಾಷೆಗಳು ಗೊತ್ತಿಲ್ಲವಾದ್ದರಿಂದ ತಮಿಳಿನ ದೃಷ್ಟಿಯಿಂದ ಮಾತಾಡಿದ್ದಾರೆ. ರಾಷ್ಟ್ರದ ಎಲ್ಲ ಭಾಷೆಗಳು ಬಂಗಾಳಿ ಸೇರಿಕೊಂಡು ಭಾರತೀಯ ಸಂಸ್ಕೃತಿಯನ್ನು ಬೆಳೆಸಿವೆ ಎಂದು ಹೇಳಿ ವಸ್ತುದೃಷ್ಟಿಯನ್ನೂ ಔದಾರ್ಯವನ್ನೂ ಅವರು ಮೆರೆಯಬಹುದಿತ್ತು. ಮೂರು, ಏಳು, ಎಂಟು, ಒಂಬತ್ತು ಮತ್ತು ಹತ್ತನೆಯ ಸಲಹೆಗಳ ಬಗ್ಗೆ ಪ್ರಾಯಶಃ ಯಾರಲ್ಲಿಯೂ ಭಿನ್ನಾಭಿಪ್ರಾಯವಿರಲಾರದು. ದ್ರಾವಿಡ ವಿಶ್ವವಿದ್ಯಾನಿಲಯದ ಹೆಸರು ಸಾರ್ಥಕವಾಗಬೇಕಾದರೆ, ದ್ರಾವಿಡ ಸಂಸ್ಕೃತಿಯನ್ನು ಪ್ರಬಲವಾಗಿ ಬೆಳೆಸಿ, ಮೆರೆಸುವುದಾದರೆ ಎಲ್ಲ ಪ್ರಮುಖ ದ್ರಾವಿಡ ಭಾಷೆಗಳಿಗೂ, ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನ ಸ್ಥಾನ ನೀಡಬೇಕು.

ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಅಂತರ ರಾಷ್ಟ್ರೀಯ ಪದಗಳನ್ನು ಬಳಸಿಕೊಳ್ಳಬೇಕೆನ್ನುವು

ದರಲ್ಲಿ ಎರಡು ಮಾತಿಲ್ಲ. ಕರ್ನಾಟಕಕ್ಕೆ ಈ ಸಲಹೆ ಹೊಸದಲ್ಲ.. ಅರವತ್ತು ವರ್ಷಗಳಿಂದ ಮಹಾಕವಿ ಕುವೆಂಪು ಇದೇ ವಿಷಯದ ಬಗ್ಗೆ ಸಾಕಷ್ಟು ಬರೆದಿದ್ದಾರೆ, ಭಾಷಣ ಮಾಡಿದ್ದಾರೆ; ತಮ್ಮ ಸಲಹೆಗಳಿಗನುಗುಣವಾಗಿ ಗ್ರಂಥಗಳನ್ನು ಬರೆಯಿಸಿದ್ದಾರೆ. ಎರಡು ಪ್ರಮಾಣದ ಹೈಡ್ರೋಜನ್ ಮತ್ತು ಏಕಪ್ರಮಾಣದ ಆಕ್ಸಿಜನ್ ಸೇರಿದರೆ ನೀರಾಗುತ್ತದೆಂದು ವಿದ್ಯಾರ್ಥಿಗಳಿಗೆ ಬೋಧಿಸಬಹುದೆಂದು ಉಪಾಧ್ಯಾಯರಿಗೆ ಮಾರ್ಗದರ್ಶನ ಮಾಡಿದ್ದಾರೆ. ಪಾರಿಭಾಷಿಕ ಶಬ್ದಗಳೇನಿದ್ದರೂ ಅಂಕಿತನಾಮಗಳಷ್ಟೆ. ಹಾಲಪ್ಪ, ಹುಚ್ಚಪ್ಪ, ಕರಿಯಪ್ಪ ಮೊದಲಾದ ಹೆಸರುಗಳನ್ನು ಇಂಗ್ಲೆಂಡಿನಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿಕೊಳ್ಳುವುದುಂಟೆ? ಗಣಿತದ ಸಂಕೇತಗಳಿಗೂ ಅಂತರರಾಷ್ಟ್ರೀಯ ನೀತಿಯನ್ನೇ ಅನ್ವಯಿಸತಕ್ಕದ್ದು. ಕೊನೆಗವರೆಷ್ಟುದೂರ ಹೋದರೆಂದರೆ, ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕನ್ನಡ ವರ್ಣಮಾಲೆಯ ಜತೆಗೆ ರೋಮನ್ ಲಿಪಿಯನ್ನೂ ಕಲಿಸುವಂತೆ ಒತ್ತಿ ಹೇಳುತ್ತಾರೆ. ಕನ್ನಡ ಸ್ವೀಕರಣ ಭಾಷೆಯಾದ್ದರಿಂದ, ಮಡಿವಂತಿಕೆಗೆ ಅದರಲ್ಲಿ ಜಾಗವಿಲ್ಲದ್ದರಿಂದ, ಅದು ಸುಲಭವಾಗಿ ವಿಜ್ಞಾನ ತಂತ್ರಜ್ಞಾನ ಭಾಷೆಯಾಗಬಲ್ಲುದೆಂದು ನಿಸ್ಸಂದಿಗ್ಧವಾಗಿ ಹೇಳಬಹುದು. ಅಂತರ ರಾಷ್ಟ್ರೀಯ ಪದಗಳಿಗೆ ಸಮಾನವಾದ ಅಥವಾ ಹತ್ತಿರವಾದ ಪದ ಯಾವ ಭಾರತೀಯ ಭಾಷೆಯಲ್ಲಿದ್ದರೂ ಕನ್ನಡವೊ ತಮಿಳೋ ಎರವು ಪಡೆಯಬಹುದು. ಯಾವ ಎರವಲು ಪದವಾಗಲಿ ಪ್ರತಿಯೊಂದು ಭಾಷೆಯೂ ತನ್ನ ಜಾಯಮಾನಕ್ಕೆ ತಕ್ಕಂತೆ, ರೂಪಾಂತರ ಮಾಡಿಕೊಳ್ಳುವುದಾದರೆ ತಪ್ಪಾಗದು.

ಲಿಪಿ ಬಗ್ಗೆಯೂ ಸುಬ್ರಮಣಿಯಮ್ ಅವರು ಕೆಲವು ಮಾತುಗಳಾಡಿದ್ದಾರೆ. ಇದು ಸಹ ಹಳೆಯ ಸರಕೇ. ಅದರಲ್ಲಿ ಹೊಸದೇನೂ ಇಲ್ಲ. ಸಂಸ್ಕೃತ ಅಥವಾ ಅದನ್ನು ಹಿಂಬಾಲಿಸುವ ಕನ್ನಡ ಮತ್ತು ತೆಲುಗು ವರ್ಣಮಾಲೆಯಷ್ಟು ಪೂರ್ಣ ಸ್ವರೂಪದ ವರ್ಣಮಾಲೆ ಮತ್ತೊಂದಿರಲಾರದು. ಜಪಾನೀ ಚೀನಿ ವರ್ಣಮಾಲೆಗಳ ವಿಷಯ ನನಗೆ ಗೊತ್ತಿಲ್ಲ. ಪ್ರಾಕೃತ ಅಥವಾ ತಜ್ಜನ್ಯ ವರ್ಣಮಾಲೆಗಳಲ್ಲಿ ಎ, ಒ ಧ್ವನಿಮಾಗಳಿಲ್ಲ; ತಮಿಳಿನಲ್ಲಿ ಘೋಷ ಮತ್ತು ಮಹಾ ಪ್ರಾಣಾಕ್ಷರಗಳಿಲ್ಲ. ರೋಮನ್ ಲಿಪಿ ವ್ಯವಸ್ಥೆ ಯಂತು ಇನ್ನೂ ಅಪೂರ್ಣ. ಗೀಟು ಚುಕ್ಕಿ ಮೊದಲಾದ ಚಿಹ್ನೆಗಳನ್ನು ಬಳಸಿಕೊಂಡು, ಅದಕ್ಕೆ ಅಂತರರಾಷ್ಟ್ರೀಯ ವರ್ಣಮಾಲೆ ಎಂದು ಹೆಸರಿಡಲಾಗಿದೆ. ಅಲ್ಲಿಯ ದೀರ್ಘಸ್ವರ ಚಿಹ್ನೆಗಳು ನಮ್ಮವಕ್ಕೂ (ಾ) ಹತ್ತಿರವಿರುವುದರಿಂದ ಸುಲಭವಾಗುತ್ತವೆ. ಅದೇನೇ ಇರಲಿ ಸುಸಂಬದ್ಧವೂ, ಶಾಸ್ತ್ರೀಯವೂ, ಪರಿಪೂರ್ಣವೂ ಆದ ರಾಷ್ಟ್ರೀಯ ವರ್ಣಮಾಲೆಯೊಂದಿರುವಾಗ, ರೋಮನ್ ವರ್ಣಮಾಲೆಗೆ ಜೋತು ಬೀಳಬೇಕೆ ಎಂಬ ಭಾವುಕ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಹೆಚ್ಚೆಂದರೆ ಕುವೆಂಪು ಮತದಂತೆ ಎರಡನ್ನೂ ಮಕ್ಕಳಿಗೆ ಕಲಿಸಬಹುದೇನೋ ಎನಿಸುತ್ತದೆ.

ಕರ್ನಾಟಕದ ವಿಧಾನಸೌಧಕ್ಕೆ ತಾವೊಮ್ಮೆ ಭೇಟಿ ನೀಡಿದ್ದಾಗ, ಅಲ್ಲಿಯ ನಾಮಫಲಕಗಳೆಲ್ಲವೂ ಕನ್ನಡದಲ್ಲಿದ್ದುದರಿಂದ, ಮುಖ್ಯಮಂತ್ರಿಗಳ ಕೋಣೆಯನ್ನು ಹುಡುಕುವುದು ಸುಬ್ರಮಣಿಯವರಿಗೆ ಕಷ್ಟವಾಯಿತಂತೆ, ಸಾಮಾನ್ಯವಾಗಿ ಕರ್ನಾಟಕದಲ್ಲೆಲ್ಲಿ ಹೋದರೂ, ಕನ್ನಡದ ಫಲಕಗಳ ಜತೆಗೆ ಇಂಗ್ಲಿಷ್ ಫಲಕಗಳೂ ಇರುತ್ತವೆ. ಮೈಲಿಗಲ್ಲುಗಳು ಕನ್ನಡ, ಹಿಂದಿ, ಇಂಗ್ಲಿಷುಗಳಲ್ಲಿರುತ್ತವೆ. ತಮಿಳುನಾಡಿನಲ್ಲೊ? ಅಲ್ಲಿ ಪ್ರವಾಸ ಮಾಡಿದವರಿಗೆ ಮಾತ್ರ ಪ್ರಯಾಸದ ಪ್ರಮಾಣ ಅನುಭವಕ್ಕೆ ಬರುತ್ತದೆ. ಭಾರತರತ್ನರಿಗೆ ತಮಿಳುನಾಡಿನ ಪರಿಸ್ಥಿತಿ ಗೊತ್ತಿಲ್ಲದಿರುವುದೇ ಸೋಜಿಗ.

ದುರದೃಷ್ಟವಶಾತ್ ನಮ್ಮ ರಾಜಕೀಯ ಮುತ್ಸದ್ದಿಗಳಿಗೆ ಜಗತ್ತಿನ ವಿವಿಧ ಭಾಗಗಳಲ್ಲಿ ಭಾಷಾಂಧತೆಯ ಕಾರಣವಾಗಿ ಏನು ದುಬಾರಿ ಬೆಲೆ ತೆರಬೇಕಾಯಿತೆಂಬ ಸತ್ಯ ಮನವರಿಕೆಯಾಗಿಲ್ಲ. ಬಂಗ್ಲಾ ಪಾಕಿಸ್ತಾನದಿಂದ ಕಳಚಿ ಕೊಂಡದ್ದೇಕೆ ? ಸೋವಿಯಟ್ ಒಕ್ಕೂಟ ಒಡೆದು ಹೋದದ್ದೇಕೆ ? ಜಕೊಸ್ಲವಾಕಿಯಾ ? ಕೆನಡಾ ಸಹ ವಿಭಜನೆಯ ಸ್ಥಿತಿಯಲ್ಲಿದೆಯಲ್ಲ ಏಕೆ ? ಅವುಗಳ ಕಡೆಗೆ ಅವರ

ಗಮನಹರಿಯುವುದಿಲ್ಲವೊ? ಅರ್ಥವಾಗುವುದಿಲ್ಲವೊ ? ಇಂಡಿಯಾದ ಪ್ರಮುಖ ಭಾಷೆಗಳನ್ನು ಅಧಿಕೃತ ಆಡಳಿತ ಭಾಷೆಗಳೆಂದು ಸ್ವೀಕರಿಸದಿದ್ದಲ್ಲಿ ಪರಿಣಾಮ ಏನಾಗುತ್ತದೆಂದು ರಾಷ್ಟ್ರೈಕ್ಯ, ಭಾವೈಕ್ಯದಲ್ಲಿ ನಂಬಿಕೆಯುಳ್ಳ ನಾಯಕರು ನಿರ್ವಿಕಾರ ನಿರ್ಮಮಕಾರ ಮನೋಭಾವದಿಂದ ಯೋಚಿಸಬೇಕಾಗಿದೆ.

ದ್ರಾವಿಡ ವಿಶ್ವವಿದ್ಯಾನಿಲಯದ ಉಗಮಕ್ಕೆ ಕಾರಣರಾದ ಪ್ರವಾದಿ ಪುರುಷರ ದೂರದೃಷ್ಟಿಯನ್ನೂ, ಸಾಂಸ್ಕೃತಿಕ ಜೀವಂತಿಕೆಯನ್ನು ಜಾಣತನವನ್ನೂ ಮೆಚ್ಚಬೇಕು. ಭಾರತದ ನೆಲದಲ್ಲಿಯೇ ಹುಟ್ಟಿ ಬೆಳೆದು ಅತ್ಯಂತ ಪ್ರಾಚೀನ ವೈಭವೋಪೇತ ಸಂಸ್ಕೃತಿಯೆಂದು ಹೆಸರಾದ, ಅಂತೆಯೇ ಅನಂತರದ ಭಾರತೀಯ ಸಮ್ಮಿಶ್ರ ಸಂಸ್ಕೃತಿಗೆ ಪ್ರಾಣದಾನ ಮಾಡಿದ ವಿಶಾಲವಾಗಿ ಬೆಳೆಸಿದ ದ್ರಾವಿಡ ಸಂಸ್ಕೃತಿಯ ಅರ್ಥಪೂರ್ಣ ಸಮಗ್ರಾಧ್ಯಯನಕ್ಕೆಂದೇ ಈ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿರುವುದು ಹೆಮ್ಮೆಯ ಸಂಗತಿ. ಅದರ ಆಡಳಿತದಲ್ಲಿ, ಅಲ್ಲಿಯ ಶೈಕ್ಷಣಿಕ ಜೀವನದಲ್ಲಿ ನಾಲ್ಕು ಪ್ರಮುಖ ಭಾಷೆಗಳ ಆಡಳಿತಗಾರರು ಮತ್ತು ವಿದ್ವಾಂಸರು ಸಮಸಮವಾಗಿ ಪಾಲ್ಗೊಂಡಾಗ ಮಾತ್ರ ಆ ಮಹಾ ಸಂಸ್ಥೆ ಪ್ರತ್ಯಕ್ಷ ಹಾಗೂ ಪರೋಕ್ಷ ಗುರಿ ಯನ್ನು ಸೇರಲು ಸಾಧ್ಯವಾಗುತ್ತದೆ.

ನೆನಪುಗಳಲ್ಲಿ ಲಂಕೇಶ್

ನಲವತ್ತು ವರ್ಷಗಳ ಹಿಂದೆ: ೧೯೬೦ನೆಯ ಇಸವಿ ಜನವರಿ ಮೊದಲವಾರ. ನಾನು ಶಿವಮೊಗ್ಗಾ ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಹುದ್ದೆಯನ್ನು ವಹಿಸಿಕೊಂಡ ದಿನ. ಕಾಲೇಜಿನ ಅಧ್ಯಾಪಕರೆಲ್ಲರೂ ನನ್ನ ಕೊಠಡಿಗೆ ಬಂದು ಸ್ವಾಗತಿಸಿದರು .ಶುಭ ಹಾರೈಸಿದರು. ಒಬ್ಬರು ಮಾತ್ರ ಗೈರು ಹಾಜರು . ಇಂಗ್ಲಿಷ್ ಅಧ್ಯಾಪಕರಾದ ಶ್ರೀ ಪಿ. ಲಂಕೇಶ್ ಅಲ್ಲಿದ್ದರೆಂದು ಕೇಳಿದ್ದೆ. ನಾನಿನ್ನೂ ಹಾಜರಿ ಪುಸ್ತಕ ನೋಡಿರಲಿಲ್ಲ. ಗೈರು ಹಾಜರಾದವರು ಅವರೇ ಎಂದು ಊಹಿಸಿದೆ.

ಅವರ ಗೈರುಹಾಜರಿಗೊಂದು ಹಿನ್ನೆಲೆಯಿತ್ತು. ನಾನು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಕಾಲ. ಕುವೆಂಪು ಅವರ ಬಳಿ ಇದ್ದೆ. ಕುವೆಂಪು ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡುತ್ತ, ನಾನು ಓದಿದ ವಿಷಯದ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದೆ. ಅದು ಕೆಲವರಿಗೆ ಹಿಡಿಸುತ್ತಿರಲಿಲ್ಲ: ಲಂಕೇಶರು ಹಿಡಿಸದ ಗುಂಪಿನಲ್ಲಿದ್ದರು. ಯಾರ ಪ್ರೇರಣೆಯಿಂದಲೋ ಸ್ವಯಿಚ್ಛೆಯಿಂದಲೋ ನನ್ನ 'ಭಕ್ತಿ'(ಅವರದೇ ಮಾತು) ಯನ್ನು ಕುರಿತು'ಏನಾದರೂಮಾಡುತಿರು ತಮ್ಮ 'ಎಂಬ ತಲೆಹೆಸರಿನಲ್ಲಿ ಟೀಕೆ ಮಾಡುತ್ತಿದ್ದರು, ಪತ್ರಿಕೆಗಳಲ್ಲಿ, ಅವರಾಗ ಸೆಂಟ್ರಲ್ ಕಾಲೇಜು ವಿದ್ಯಾರ್ಥಿ. ನಾನವರನ್ನು ನೋಡಿರಲಿಲ್ಲ.

ನಾನು ಅಧಿಕಾರ ವಹಿಸಿಕೊಂಡ ಒಂದೆರಡು ದಿನಗಳನಂತರ ಅಧ್ಯಾಪಕರ ಕೊಟಡಿಗೆ ಹೋದೆ. ಅಲ್ಲಿದ್ದವರೆಲ್ಲರೂ, ಒಬ್ಬರು ವಿನಾ ಕುರ್ಚಿಗಳನ್ನೆಳೆದು ನನ್ನ ಸುತ್ತ ನೆರೆದರು 'ಅದು ಯಾರು? ಮೂಲೆಯಲ್ಲಿ ಕುಳಿತಿದ್ದಾರಲ್ಲ?' ಎಂದು ಪ್ರಶ್ನಿಸಿದೆ. 'ಅವರು ಲಂಕೇಶ್', ಎಂದು ಗೆಳೆಯರು ನುಡಿಯುತ್ತಿದ್ದಂತೆ ಅವರೇ 'ನಮಸ್ಕಾರ' ಎಂದು ಹೇಳುತ್ತ ನನ್ನ ಬಳಿ ಬಂದು ಕುಳಿತರು. 'ನೀವೇನೋ ಲಂಕೇಶ್. ನಾನು ನೋಡಿಯೇ ಇರಲಿಲ್ಲ . ಆದರೂ ನಿಮ್ಮನ್ನು ಬಲ್ಲೆ' ಎಂದೆ. ಎಲ್ಲರೂ ನಕ್ಕರು.

ಹಾಸ್ಯ ಪ್ರವೀಣರೂ ಗೆಳೆಯರೂ ಸಹೋದ್ಯೋಗಿಗಳೂ ಆದ ಶ್ರೀ ಎನ್. ಪ್ರಹ್ಲಾದ್‌ರಾಯರು ಲಂಕೇಶ್‌ರ ಏಕವಚನದ ಗೆಳೆಯ. ಬಾರೋ ಹೋಗೋ ಎಂತಲೇ ಅವರನ್ನು ಮಾತನಾಡಿಸುತ್ತಿದ್ದುದು. ಅವರಿಬ್ಬರೂ ಪ್ರತಿದಿನ ಕಾಲೇಜು ಮುಗಿಯುತ್ತಿದ್ದಂತೆ ನನ್ನ ಕೋಣೆಗೆ ಬರುತ್ತಿದ್ದರು. ಮೂವರೂ ನಗರಾಭಿಮುಖವಾಗಿ ಹೋಗುತ್ತಾ, ರಸ್ತೆಯ ಬಲಗಡೆಗಿದ್ದ ಗಣೇಶ್

ಭವನವನ್ನು ಹೊಕ್ಕು, ತಲಾ ಒಂದೊಂದು ಮಸಾಲೆ ದೋಸೆ ತಿಂದು, ಕಾಫಿ ಕುಡಿದು, ವಾಯು ಸಂಚಾರ ಮುಂದುವರಿಸುತ್ತಿದ್ದೆವು. ಅವರಿಬ್ಬರೂ ಸಿಗರೇಟ್ ಎಳೆಯುತ್ತಿದ್ದರು. ಒಂದೊಂದು ದಿನ ಪ್ರಹ್ಲಾದರಾವ್ ಪುರಿ ಕಟ್ಟಿಸಿಕೊಂಡು, ಬೆಳ್ಳುಳ್ಳಿ ಜಮಾಯಿಸಿಕೊಂಡು ಬರುತ್ತಿದ್ದರು.

ಆಗ ತುಂಗಾ ನದಿಯಲ್ಲಿ ನೀರು ಕಮ್ಮಿ. ನದಿಯ ನಡುವಿನ ಹಾಸುಬಂಡೆಯ ಮೇಲೆ ಕುಳಿತು ಪುರಿ ಮೆಲ್ಲುತ್ತಿದ್ದೆವು. ಏನಿಲ್ಲದಿದ್ದರೆಯೂ ಹರಟೆ ಇಲ್ಲದಿರುತ್ತದೆಯೆ ? ಅದೂ ಪ್ರಹ್ಲಾದರಾವ್ ಇದ್ದ ಕಡೆ . ಯಾರೂ ಇಲ್ಲದಾಗ ಅವರು ಕಲ್ಲಿನೊಡನೆಯೂ ಮಾತಾಡುತ್ತಿದ್ದರು. ನಾವು ಮಾತಾಡುತ್ತಿದ್ದ ವಿಷಯದ ವ್ಯಾಪ್ತಿ ಇಡೀ ಜಗತ್ತನ್ನೊಳಗೊಂಡಿರುತ್ತಿತ್ತು. ಸರ್ಕಾರದ ಟೀಕೆ, ಭ್ರಷ್ಟಾಚಾರ, ಸಾಹಿತ್ಯವಿಮರ್ಶೆ, ರಾಜಕಾರಣಿಗಳ ದೋಷದೌರ್ಬಲ್ಯಗಳು, ವರದಕ್ಷಿಣೆಯ ಸಾವು, ರಾಜಕೀಯ ಸಿದ್ಧಾಂತಗಳು, ಸಾಮಾಜಿಕಾರ್ಥಿಕ ಸಮಸ್ಯೆಗಳು, ಕೊನೆಗೆ ಲೈಂಗಿಕ ವಿಚಾರಗಳು ಇವು ನಮ್ಮ ಚರ್ಚೆಗೆ ಗ್ರಾಸವಾಗುತ್ತಿದ್ದುವು. ಸಾಹಿತ್ಯ ಪಂಥಗಳೂ ನಮ್ಮ ನಾಲಿಗೆಯ ಹರಿತಕ್ಕೆ ಆಹಾರವಾಗುತ್ತಿದ್ದುವು. ಪ್ರಹ್ಲಾದರಾಯರು ನವ್ಯರನ್ನು ಕುಟುಕುತ್ತಿದ್ದುದೂ ಉಂಟು . ಕಡಿತಕ್ಕೆ ಕೆರೆತ ಹಿತವಷ್ಟೆ, ಅವರ ಕುಟುಕಿನಲ್ಲಿ ವಿಷವಿರುತ್ತಿರಲಿಲ್ಲ. ಕೆಲವು ಸಾರಿ ನಾನು ತುಟಿಬಿಚ್ಚದೆ ಅವರ ವಾಗ್ವಾದವನ್ನು ಏಕಾಗ್ರತೆಯಿಂದ ಆಲಿಸುತ್ತಿದ್ದೆ. ಆ ವಾಗ್ವಾದ ಸ್ವಾದುವಾಗಿ ಮೃದು ಮಾತ್ರವಲ್ಲ, ಪುಷ್ಟಿಕರವಾಗಿರುತ್ತಿತ್ತು ಮನಸ್ಸಿಗೆ. ನನಗಾಶ್ಚರ್ಯವೆಂದರೆ ಆ ಎರಡು ತಿಂಗಳಲ್ಲಿ ಲಂಕೇಶ್ ಯಾರನ್ನಾದರೂ ನಿಂದಿಸಿದ್ದಾಗಲಿ, ಅತಿರೇಕವಾಗಿ ಹೊಗಳಿದ್ದಾಗಲೀ ನನಗೆ ನೆನಪಿಲ್ಲ. 'ಏನಾದರೂ ಮಾಡುತಿರು ತಮ್ಮ' ಮಾಲಿಕೆಯನ್ನು ಮುಂದುವರಿಸುತ್ತೀರಾ ಎಂದು ಕೇಳಿದರೆ, ಅದೊಂದು ಕಾಲ, ಮರೆತುಬಿಡಿ, ಸಾರ್ ಎನ್ನುತ್ತಿದ್ದರು. ಅವರ ಮಾತಿನಲ್ಲೆಂದೂ ಕುವೆಂಪು ಸಾಹಿತ್ಯವನ್ನು ಕುರಿತ ಅಣಕವಿರುತ್ತಿರಲಿಲ್ಲ. ಗೋಪಾಲಕೃಷ್ಣ ಅಡಿಗರನ್ನು ಬಿಟ್ಟುಕೊಟ್ಟವರೂ ಅಲ್ಲ. ದಿನಾಲೂ ಸಂಜೆ ಏಳೂವರೆ - ಎಂಟುಗಂಟೆಯ ತನಕ ನಮ್ಮ ಗೋಷ್ಠಿ ನಡೆಯುತ್ತಿತ್ತು. ನನ್ನ ಬದುಕಿನಲ್ಲಿ ಅಂಥ ಸಂತೋಷದ ದಿನಗಳು ವಿರಳವೆಂದೇ ಹೇಳಬೇಕು. ಅವರಿಬ್ಬರೂ ಹಾಸ್ಯಗಾರರು, ಪ್ರತಿಭಾವಂತರು, ನಿಶಿತಮತಿ ಸಂಪನ್ನರು . ಹಾಸ್ಯವಿದ್ದ ಕಡೆ ಜಗಳಕ್ಕೆಲ್ಲಿ ಎಡೆ ?

ನಾನು ಪ್ರಹ್ಲಾದರಾಯರೂ ಇಬ್ಬರೇ ಇದ್ದಾಗ ಲಂಕೇಶ್‌ರ ನಡೆವಳಿ ಕುರಿತು ಮಾತಾಡಿಕೊಳ್ಳುತ್ತಿದ್ದೆವು. 'ನಾನವರನ್ನು ನೋಡುವ ಮುನ್ನ ಅವರು ಮಹಾಪ್ರಚಂಡರಿರಬೇಕು, ಅಹಂಕಾರದ ಮುದ್ದೆಯಾಗಿರಬೇಕು ಆತ್ಮಸ್ತೋತ್ರಪ್ರಿಯರಾಗಿರ ಬೇಕು, ನವ್ಯ ಮೂಲಭೂತವಾದಿಯಾಗಿರಬೇಕು, ಮರ್ಯಾದೆ ಮೀರಿದವರಿರಬೇಕು 'ಎಂದುಊಹಿಸಿ ಕೊಂಡಿದ್ದೆ. ನಾನೀಗ ಕಂಡ ಲಂಕೇಶ್‌ಗೂ ನನ್ನ ಊಹೆಯ ಲಂಕೇಶ್‌ಗೂ ಏನೇನೂ ಸಂಬಂಧವಿಲ್ಲ. ಈ ಯುವಕ ಎಂಥ ಮುಗ್ಧ, ನಿಷ್ಕಪಟಿ, ಸ್ನೇಹಶೀಲ. ನಾನವರನ್ನು ಮೊದಲು ನೋಡಿದ ಕೂಡಲೇ ಕಂಡದ್ದು ಅವರ ಮುಗ್ಧ ಮಂದ ಹಾಸ' ಎಂದು ನಾನು ನನ್ನ ಭಾವನೆಗಳನ್ನು ವ್ಯಕ್ತಪಡಿಸಿದೆ. 'ನಿಮ್ಮ ಅಳತೆ ಸರಿಯಾಗಿದೆ. ಯೌವನದ ಹುರುಪು ತೀಟೆ ತಿಸರಗಳಿವೆ. ಅದಕ್ಕೆ ತಾವು ಬುದ್ಧಿವಂತರೆಂಬ ಅವರ ಆತ್ಮವಿಶ್ವಾಸವೂ ಕಾರಣ. ಇನ್ನೂ ಸ್ವಲ್ಪಮಾಗಬೇಕಾಗಿದೆ. ಇದೆ ತಾನೆ ಕಾಲೇಜಿನ ವಿದ್ಯಾರ್ಥಿದಶೆಯಿಂದ ಅಧ್ಯಾಪಕ ಸ್ಥಾನಕ್ಕೆ ಬಂದಿದ್ದಾರೆ. ಅವರು ಖಂಡಿತವಾಗಿಯೂ ಕೆಟ್ಟವರಲ್ಲ. ಅವರಿಗೆ ಒಳ್ಳೆಯ ಭವಿಷ್ಯವಿದೆ' ಎಂದು ಪ್ರಹ್ಲಾದರಾಯರು ತಮ್ಮ ಅಭಿಪ್ರಾಯವನ್ನು ವಿವರಿಸಿದರು. ಅವರ ಸತ್ಯದೂರವಾದ ಟೀಕೆ ನಿಂದೆಗಳಿಗೆ ಸುತ್ತಮುತ್ತಣ ಪರಿಸರ ಕಾರಣವಾಗಿರಬೇಕು, ಉಳಿದಂತೆ ಅವರು ಜಂಟಲ್‌ಮನ್ ಎಂದು ಇಬ್ಬರೂ ಅಂದುಕೊಂಡೆವು.

ಸದಾ ಭೋರ್ಗರೆವ ನದಿಗೆ ಅಣೆಕಟ್ಟಿ, ತೂಬು ಕಾಲುವೆಗಳನ್ನು ಏರ್ಪಡಿಸದಿದ್ದರೆ, ಕಟ್ಟಿ

ಒಡೆದು ಅನಾಹುತವಾಗುವ ಸಂಭವವುಂಟಷ್ಟೆ, ಕ್ಷಣಕ್ಷಣವೂ ಪುಟಿಯುತ್ತಿದ್ದ ಲಂಕೇಶ್‌ರ ಶಕ್ತಿ ಅದಮ್ಯ, ಅಸಾಧಾರಣ. ಆದರೂ ನಾನಾಗಲಿ, ಪ್ರಹ್ಲಾದರಾಯರಾಗಲಿ ಅವರ ನಡತೆಯಲ್ಲಿ ಅವಿನಯವನ್ನು ಕಂಡದ್ದಿಲ್ಲ. ಮನುಷ್ಯ ಕುಲದಲ್ಲಿ ಕಾಣುವ ತಾರುಣ್ಯ ಸಹಜವಾದ ದೋಷ ದೌರ್ಬಲ್ಯಗಳು ಅವರಲ್ಲಿಯೂ ಇದ್ದುವು. ಆ ದೌರ್ಬಲ್ಯಗಳನ್ನು ಸಂಯಮಿಸಿ ಕೊಳ್ಳದಿದ್ದಾಗ, ಸಮಾಜದಲ್ಲಿ ತಳಮಳವುಂಟಾಗುತ್ತದೆ. ಕಾಲೇಜಿನಲ್ಲೊಮ್ಮೆ ಅಂಥ ಪರಿಸ್ಥಿತಿ ಪ್ರಾಪ್ತವಾಗುತ್ತದೆ. ವಿದ್ಯಾರ್ಥಿಗಳು ಮುಷ್ಕರ ಹೂಡುವ ಚಿಹ್ನೆ ಕಾಣಿಸಿಕೊಳ್ಳುತ್ತವೆ. ಊರಿನ ಅಧಿಕಾರವರ್ಗದಲ್ಲಿ ಅಶಾಂತಿಯ ಲಕ್ಷಣಗಳು ತಲೆದೋರುತ್ತವೆ. ಆ ಸಂದರ್ಭದಲ್ಲಿ ಲಂಕೇಶ್ ನನ್ನೊಡನೆ ಸಹಕರಿಸಿದ ರೀತಿ ಅನನ್ಯವಾಗಿತ್ತು. ನಾನು ಹೇಳಿದಂತೆಲ್ಲ ನಡೆದುಕೊಂಡರು. ಆ ಕಾಲೇಜಿನ ನನ್ನ ಸೇವಾವಧಿ ಹ್ರಸ್ವವಾದರೂ ಅವರಿಂದಾಗಿ, ನನ್ನ ಇತರ ಸಹೋದ್ಯೋಗಿಗಳಿಂದಾಗಿ ನನ್ನ ಆಡಳಿತ ಅತ್ಯಂತ ಯಶಸ್ವಿಯಾಯಿತೆಂದೇ ನನ್ನ ನಂಬಿಕೆ. ಈಗಲೂ ನನ್ನ ಮನಸ್ಸಿನಲ್ಲಿ ಅಂದಿನ ಲಂಕೇಶ್‌ರ ಚಿತ್ರ ಅಚ್ಚಳಿಯದೆ ನಿಂತಿದೆ.

ಸುಮಾರು ಮೂವತ್ತೈದು ವರ್ಷಗಳನಂತರ-ಪ್ರಾಯಶಃ ಒಮ್ಮೆ ಅವರನ್ನು ನಡುವೆ ನೋಡಿದ್ದೆನೇನೊ-ಅವರ ಆರೋಗ್ಯ ಕೆಟ್ಟಿದೆಯೆಂದು ತಿಳಿದಾಗ, ವಿದ್ವಾನ್ ಎಂ.ಶಿವಕುಮಾರಸ್ವಾಮಿಗಳ ಜತೆಯಲ್ಲಿ ನಾನವರನ್ನು ನೋಡಲು ಹೋಗಿದ್ದೆ. ಅವರ ಶರೀರದಲ್ಲಾಗಲಿ, ಮುಖದಲ್ಲಾಗಲಿ, ಮಾತಿನಲ್ಲಾಗಲಿ ಅಂದಿನ ಆರೋಗ್ಯವಾಗಲಿ, ತೇಜಸ್ಸಾಗಲಿ, ಜೋರಾಗಲಿ ಕಾಣಲಿಲ್ಲ. ನಮ್ಮ ಕಾಲೇಜಿನ ದಿನಗಳನ್ನು ನೆನೆಸಿಕೊಂಡೆವು. ಕನ್ನಡಕ್ಕೆ ಗತಿಯಿಲ್ಲವೆಂದುಕೊಂಡೆವು. ಕನ್ನಡದ ಗುಟ್ಟು ಮೂರ್ಖರಿಗೆ ತಿಳಿಯದು; ಅರಿವಿದ್ದವರು ಅಂಜುಕುಳಿಗಳು, ಇಲ್ಲ ರಾಜಕೀಯವಾಗಿ ನಿಸ್ಸಹಾಯಕರು ಎಂದುಕೊಂಡೆವು. ಬೇಡವೆಂದರೂ ಮಹಡಿಯಿಂದಿಳಿದು ಬಂದು ಕಾರು ಹತ್ತಿಸಿ, ಬೀಳ್ಕೊಡುವ ಸೌಜನ್ಯ ಮೆರೆದರು.

ಬಹುಮುಖ ಪ್ರತಿಭೆಯ, ಅಪ್ರತಿಮ ಗರುಡಶಕ್ತಿಯ ಉಡ್ಡಯನಕ್ಕೆ ಇಂಗ್ಲಿಷ್ ಇಲಾಖೆಯ ಕಿರುಕೋಣೆ ಸಾಲದು; ಮೇರೆ ಇಲ್ಲದ ವಿಯದ್ವಿಸ್ತೀರ್ಣವೇ ಬೇಕು. ಅಂತರಂಗದಲ್ಲಿ ಕುದಿಯುವ ಅಸಂಖ್ಯಾನುಭವಗಳ, ಆಲೋಚನೆಗಳ , ಸಾಮಾಜಿಕ ಒಳನೋಟಗಳ, ರಾಜಕೀಯ ಚಿಂತನ ಮಂಥನಗಳ ಹಾಗೂ ಸಮಗ್ರ ಜೀವನ ವ್ಯಾಪಾರಗಳ ಅಭಿವ್ಯಕ್ತಿಗೆ ಅಧ್ಯಾಪಕ ಹುದ್ದೆಯಾಗಲಿ, ಸಾಹಿತ್ಯ ಕ್ಷೇತ್ರವಾಗಲಿ ಸಾಲದೆ, ಮಾನವನ ಸ್ವಪ್ನ ಸಾಹಸಗಳಿಗನುಗುಣವಾಗಿ ವಿಶ್ವದಂತೆ ಸದಾ ವಿಸ್ತಾರಗೊಳ್ಳುವ ಪತ್ರಿಕಾ ಪ್ರಪಂಚವನ್ನು ಪ್ರವೇಶಿಸುತ್ತಾರೆ. ತಮ್ಮ ವ್ಯಕ್ತಿತ್ವಾಭಿವ್ಯಕ್ತಿಗೆ ಮಾಧ್ಯಮವಾದ ಪತ್ರಿಕೆಗೆ ಮಾತಾಪಿತೃಗಳಿಟ್ಟ ತಮ್ಮ ಹೆಸರಲ್ಲದೆ ಬೇರೆ ಹೆಸರೇಕೆ ? ಅವರು ಪತ್ರಿಕಾರಂಗವನ್ನು ಪ್ರವೇಶಿಸಿದ್ದು ಅವರ ಜೀವನದ ಮಾತ್ರವಲ್ಲ, ಪತ್ರಿಕಾಪ್ರಪಂಚದ ಐತಿಹಾಸಿಕ ಘಟನೆ. ತುರ್ತು ಪರಿಸ್ಥಿತಿಗೆ, ರೈತ-ದಲಿತ-ಗೋಕಾದಿ ಚಳುವಳಿಗಳಿಗೆ ಪ್ರಸ್ಫುರಿಸಿದ ಸ್ಪಂದನ; ರಾಜಕೀಯ ಜೀವನದ ಹೊಲಸಿಗೆ, ಸಾಮಾಜಿಕ ಅನ್ಯಾಯ ಅಧರ್ಮಗಳಿಗೆ ಪ್ರತಿಕ್ರಿಯಿಸಿದ ಬೌದ್ಧಿಕ ಕಂಪನ-ಅವರ ಸಾಹಸಾರ್ಜುನ ವಿಜಯಯಾತ್ರೆಗೆ ಪ್ರೇರಣೆಯನ್ನೊದಗಿಸುತ್ತವೆ. ೧೯೮೦ರಲ್ಲಿ ಶಕಪುರುಷನಂತೆ ಪತ್ರಿಕಾ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಣೆ ಮಾಡಿಕೊಂಡಾಗಿನಿಂದ ಹೊಸಮನ್ವಂತರ ಪ್ರಾರಂಭವಾಗುತ್ತದೆ. ಭ್ರಷ್ಟಾಚಾರದ ಭಾರದಿಂದ, ನೀತಿ ಬಾಹಿರವಾದ ಮೌಲ್ಯ ದೂರವಾದ ರಾಜಕಾರಣ ಮಾಲಿನ್ಯದಿಂದ, ಪುಡಾರಿಗಳ ಶನಿಕಾಟದಿಂದ, ರಾಜಕೀಯ ನಾಯಕರ ದುರಾಡಳಿತದಿಂದ ಉಸಿರುಕಟ್ಟಿ, ಅಸಹಾಯಕತೆಯಿಂದ ಮಿಳ್ಳಿಳನೆ ಕಣ್ಣು ಬಿಡುತ್ತಿದ್ದ ಅಮಾಯಕರಿಗವರು ದೊಂದಿ ದೀಪವಾಗುತ್ತಾರೆ. ಊರೆಗೋಲಾಗುತ್ತಾರೆ , ದಿಕ್ಕು ದೆಸೆಯಾಗುತ್ತಾರೆ. ರಾಜಕೀಯ ನಾಯಕರ ಅನಾಚಾರ ಅತ್ಯಾಚಾರಗಳನ್ನು ಊಹೆಗೂ ಮೀರಿದ ಅವರ ಪಾಪಪೂರಿತ ಹಗರಣಗಳನ್ನು

ನಗ್ನಗೊಳಿಸುವ ಮೂಲಕ, ಅವರ ಕೊಳಕು ಬದುಕನ್ನು ಮಾರ್ಕೆಟ್ ಚೌಕದಲ್ಲಿ ಜಾಲಾಡಿಸುವ ಮೂಲಕ, ದುಷ್ಟ ಸರ್ಕಾರಗಳ ಪತನಕ್ಕೆ ಗುಂಡಿ ತೋಡುವ ಮೂಲಕ , ದೇಶಕ್ಕೂ ಯುವಕರಿಗೂ ಅವರ ಪತ್ರಿಕೆ ಆಶಾಕಿರಣವಾಗುತ್ತದೆ; ಚಾಟಿಯಾಗುತ್ತದೆ, ಕಸಬರಿಗೆಯಾಗುತ್ತದೆ, ಮಾರಿ ಹಲುಬೆಯಾಗುತ್ತದೆ.

ಒಬಿರಾಯನಕಾಲದ ಮುತ್ತೆತ್ತುಗಳಂತೆ ತೂಕಡಿಸುತ್ತ, ತೂರಾಡುತ್ತ ಸಮೆದ ಹಳೆಯ ಜಾಡಿನಲ್ಲಿ ಸಾಗುತ್ತಿದ್ದ ಪತ್ರಿಕೆಗಳಿಗೆ ಲಂಕೇಶ್ ಪತ್ರಿಕೆ ಚುರುಕು ಮುಟ್ಟಿಸುತ್ತದೆ; ಹಳೆಯದನ್ನೆಲ್ಲ ಕೊಡವಿ, ವಿನೂತನ ಮಾರ್ಗವನ್ನು ಹಿಡಿಯುವಂತೆ , ಆಧುನಿಕ ವಾತಾವರಣಕ್ಕೆ ಸಜ್ಜಾಗುವಂತೆ ಎಚ್ಚರಿಸುತ್ತದೆ. ವಾರ್ತಾಪ್ರಸಾರಕ್ಕಿಂತ ಮಿಗಿಲಾಗಿ, ರಾಜಕೀಯ ಮತ್ತು ಸಾಮಾಜಿಕ ಹೊಣೆಗಾರಿಕೆಯೂ ಪತ್ರಿಕೆಗಳಿಗಿದೆ ಎಂಬ ಮಂತ್ರವನ್ನದು ಬೋಧಿಸುತ್ತದೆ. ತಿ.ತಾ.ಶರ್ಮರ ನಂತರ, ನೆಲದ ಸೊಗಡನ್ನುಳ್ಳ ಬನಿಚೀಗ ಕಾವು ಹರಿತ ಮೊನೆ ಚೂಪುಗಳನ್ನೊಳಗೊಂಡ ಭಾಷೆಯನ್ನು ಬಳಸುವಲ್ಲಿ ಹೊಸಮಾರ್ಗವನ್ನು ನಿರ್ಮಿಸಿದ ಕೀರ್ತಿ ಲಂಕೇಶರಿಗೆ ಸಲ್ಲಬೇಕು. ಲಂಕೇಶ್ ಪತ್ರಿಕೆ ಮುನ್ನಿನ ಪತ್ರಿಕೆಗಳ ಜಾಡನ್ನು ತಿರಸ್ಕರಿಸಿದ್ದು ಮಾತ್ರವಲ್ಲ, ಮುಂದಿನ ಪೀಳಿಗೆಯ ಪತ್ರಿಕೆಗಳಿಗೆ ಮಾದರಿಯಾಯಿತೆಂಬುದನ್ನು ಪತ್ರಿಕಾ ಪ್ರಪಂಚದ ಸೂಕ್ಷ್ಮತೆಗಳನ್ನು ಬಲ್ಲವರೆಲ್ಲ ಒಪ್ಪಿಕೊಳ್ಳುತ್ತಾರೆ.

ಸತ್ಯ ಅಪ್ರಿಯವಾದರೂ ಮುಚ್ಚಬಾರದೆನ್ನುವ ಸಂಕಲ್ಪ ಲಂಕೇಶರದು. ಜಾತಿಮತಗಳ ಹಂಗು ತೊರೆದು, ಸ್ವಜಾತಿ ಸ್ವಮತವೆಂಬ ಮಮಕಾರಕ್ಕೆ ದಾಸರಾಗದೆ, ನಿಷ್ಪಕ್ಷಪಾತವಾಗಿ ನಾಡಿನ ಸಮಸ್ತರನ್ನು, ಸರ್ವಸಂಗತಿಗಳನ್ನು ಕಟು ವಿಮರ್ಶೆಗೆ ಒಳಗುಮಾಡಿದ ಧೀರ ಧೀಮಂತ ಪತ್ರಕರ್ತರಲ್ಲಿ ಅಗ್ರಗಣ್ಯರು. ಸಮಾಜ ಶುದ್ಧೀಕರಣವೊಂದೆ, ಹೆಳವ ವ್ಯವಸ್ಥೆಯ ವಿನಾಶವೊಂದೇ ಅವರ ನಿಷ್ಕಪಟ ವರ್ತನೆಯ ಗುರಿ. ಶುದ್ಧೀಕರಣ ಕಾರ್ಯದಲ್ಲಿ ಕಟು ವಿಮರ್ಶೆಯೊಂದೇ ನಮ್ಮ ಜನರಿಗೆ ಅರ್ಥವಾಗುವ ಆಯುಧ, ಬೇಗನೆ ಗುರಿ ಸೇರುವ ಮಾರ್ಗವೂ ಅದೊಂದೇ ಎಂದವರು ತಿಳಿದಿದ್ದರು. ಗಾಂಧಿಮಾರ್ಗ ಈವತ್ತಿನ ಸ್ಥಿತಿಯಲ್ಲಿ ಅನುಪಯುಕ್ತವೆಂದು ಅವರು ತಿಳಿದಿರಬೇಕು. ವಿಮರ್ಶೆಯೂ ಒಮ್ಮೊಮ್ಮೆ ಸತ್ಯದ ಆಧಾರವಿಲ್ಲದ ಪೂರ್ವಾಗ್ರಹ ದುರಾಗ್ರಹ ಪ್ರೇರಿತವಾದ ನಿಂದೆಯಾಗಿ ಪರಿಣಮಿಸುತ್ತಿತ್ತು. ಹಾಗಾಗಲು ಅಹಂ ಪ್ರಜ್ಞೆಯ, ಮಮಕಾರ ಬಂಧಿತರೂ ಆಮಿಷಪ್ರಿಯರೂ ಆದ ಅವರ ಸಿಬ್ಬಂದಿವರ್ಗ ಮತ್ತು ಬಳಗ ಕಾರಣರಾಗಿರಬೇಕು. ಒಲ್ಲದವರ ಬಗ್ಗೆ ನಿಂದೆಯ ಅತಿರೇಕ, ಓಲೈಸಿದವರ ಬಗ್ಗೆ ಓಲಗದ ಸೇವೆ ನಡೆಯುತ್ತಿತ್ತೆಂದು ಕೆಲವರು ಹೇಳಿದ್ದುಂಟು. ಅಷ್ಟಕ್ಕೂ ಸುತ್ತಮುತ್ತಣ ಪುಂಗಿ ಪಿಸುಣರು, ಕರಟಕ ದಮನಕರು ಕಾರಣರೆಂದು ತರ್ಕಿಸುಪವರೂ ಇದ್ದಾರೆ. ಏಕೆಂದರೆ ಲಂಕೇಶರು ಸತ್ಯನಿಷ್ಠರೆಂಬ ಭಾವನೆ ಹಲವರಲ್ಲಿದೆ . ಆ ಭಾವನೆ ನಿಜವಲ್ಲವೆನ್ನುವುದಾದರೆ, ನಂಬಿದವರಿಗೆ ತುಂಬ ಆಶಾಭಂಗವಾಗುತ್ತದೆ.

ಲಂಕೇಶರು ನೇರನುಡಿಯ ಆತ್ಮಶೋಧಕರೆಂಬುದರಲ್ಲಿ ಅನುಮಾನವಿಲ್ಲ. ಅವರ ಆತ್ಮಕಥೆ ಹುಳಿಮಾವಿನ ಮರವೇ ಈ ಮಾತಿಗೆ ಸಾಕ್ಷಿ. ತಮ್ಮ ದೋಷ ದೌರ್ಬಲ್ಯಗಳನ್ನೆಲ್ಲ ಅದರಲ್ಲಿ ಬೆತ್ತಲೆಗೊಳಿಸಿದ್ದಾರೆ. ನಾವು ಪರರಿಗೆ ಬೋಧಿಸುವ ನೀತಿ ಪರಿಣಾಮಕಾರಿಯಾಗಬೇಕಾದರೆ, ನಾವು ಮೊದಲು ಅಪ್ಪಟ ನೀತಿವಂತರಾಗಬೇಕು. ನಾವು ಪಾಲಿಸಲಾರದ ಮೌಲ್ಯವನ್ನು ಇತರರಿಂದ ನಿರೀಕ್ಷಿಸಬಾರದು. ನಾನವರನ್ನು ಹತ್ತಿರದಿಂದ ನೋಡಿಲ್ಲವಾದ್ದರಿಂದ ಆ ಬಗ್ಗೆ ಏನು ಹೇಳಿದರೂ ತಪ್ಪಾಗುತ್ತದೆ. ತಾವು ಲೋಹಿಯಾನುಯಾಯಿ ಎಂದು ಅವರೇ ಹೇಳಿಕೊಂಡದ್ದುಂಟು. ಅವರ ಹೇಳಿಕೆ ಸಿದ್ಧಾಂತಕ್ಕಷ್ಟೇ ಸೀಮಿತವಾಗಿತ್ತೆಂದೂ, ಅವರನ್ನು ಸಮಾಜವಾದಿಯೆಂದು ಕರೆಯಲು ಅವರ ಜೀವನ ದಲ್ಲಿ ಸಾಕ್ಷ್ಯದೊರೆಯುವುದಿಲ್ಲವೆಂದೂ ಅನೇಕ ಮಂದಿ ಗಣ್ಯರು ಹೇಳಿದ್ದುಂಟು. ಅವರ ಶಿಸ್ತನ್ನು ಹಾಗೂ ಶ್ರಮ ಜೀವನವನ್ನು ಅವರಿಗಾಗದವರೂ ಮನಸಾರೆ ಒಪ್ಪಿಕೊಳ್ಳುತ್ತಾರೆ.

ಚಿತ್ರರಂಗದಲ್ಲಿಯೂ ಅವರು ಹೆಸರು ಮಾಡಿದ್ದಾರೆ. ಆ ಬಗ್ಗೆ ನಿರ್ಣಯ ಹೇಳುವ ಯೋಗ್ಯತೆ ನನಗಿಲ್ಲ. ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿರುವ ಕಾಣಿಕೆ ವಿಶಿಷ್ಟ ,ವಿನೂತನ, ಅಪೂರ್ವ ಹಾಗೂ ಮೌಲ್ಯಸಮೃದ್ಧ. ಅವರ ಉಜ್ವಲ ಪ್ರತಿಭೆಗೆ ಅವರ ಕೃತಿಗಳಿಗಿಂತ ಬೇರೆ ರುಜುವಾತು ಅನವಶ್ಯ. 'ಬಿಚ್ಚು' ಕವನ ಸಂಗ್ರಹ ಪ್ರಕಟವಾದ ಕೂಡಲೇ ವಿಮರ್ಶಕರ ಮೆಚ್ಚುಗೆ ಪಾತ್ರವಾಗುತ್ತದೆ. ಪ್ರತಿಮಾರೂಪದ 'ಅವ್ವ' ಕವಿತೆಯಲ್ಲಿ ಅವರ ಕಾವ್ಯಶಕ್ತಿ ಪರಾಕಾಷ್ಠೆ ಮುಟ್ಟಿದೆ. ಬಿರುಕು, ಮುಸ್ಸಂಜೆಯ ಕಥಾಪ್ರಸಂಗ ಮತ್ತು ಅಕ್ಕ ಕಾದಂಬರಿ ಲೋಕದಲ್ಲಿ ಎಂದೂ ಮಾಸದ ಹೂವುಗಳು. ಟಿ.ಪ್ರಸನ್ನನ ಗೃಹಸ್ಥಾಶ್ರಮ, ಏಳು ನಾಟಕ ಮತ್ತು' ಸಂಕ್ರಾಂತಿ ಕೃತಿಗಳು ಲಂಕೇಶರಿಗೆ ಉತ್ತಮ ನಾಟಕಕಾರರೆಂಬ ಪ್ರಶಸ್ತಿಯನ್ನು ತಂದುಕೊಟ್ಟಿವೆ .ಪೂರ್ಣ ವೇಳೆಯ ಪತ್ರಿಕಾ ವೃತ್ತಿಗಿಳಿದದ್ದರಿಂದ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ನಷ್ಟವಾದದ್ದುಂಟು. ಆದರೆ ಪತ್ರಿಕಾ ಲೋಕದ ಭಗೀರಥರೆಂಬ ಶಕಪುರುಷರೆಂಬ ಹೆಸರು ಮಾತ್ರ ಚಿರಸ್ಥಾಯಿಯಾಯಿತು. ಅರುವತ್ತೈದು ವರ್ಷಗಳ ಹಿಂದೆ (೧೯೩೫) ಭೂಮಿಯಿಂದೆದ್ದು, ೨೫.೧.೨೦೦೦ ದಿನದಂದು ರಾತ್ರಿ ನಿದ್ದೆಯಲ್ಲಿಯೇ ನೆಲದವ್ವನನ್ನಪ್ಪಿಕೊಂಡ ಲಂಕೇಶ್ ಧನ್ಯರು!

ಸಾಮಾನ್ಯ ಸ್ವತಂತ್ರ ಪ್ರವೃತ್ತಿಯ, ಅಹಂ ಪ್ರಜ್ಞೆಯ ಎಲ್ಲ ಬುದ್ಧಿಜೀವಿಗಳಂತೆ ಲಂಕೇಶ್‌ರೂ ವಿವಾದಗ್ರಸ್ತ ವ್ಯಕ್ತಿ . ಆದ್ದರಿಂದಲೇ ಅವರು ಜಗತ್ತಿಗೆ ಹಲವು ಮೌಲಿಕ ವಿಚಾರಗಳನ್ನು ನೀಡುವ ಮೂಲಕ ಚಿರಂಜೀವಿಯಾಗಿದ್ದಾರೆ. ವಿಚಾರವಾದಿಯೆಂದು, ಪ್ರಾಧ್ಯಾಪಕರೆಂದು, ಮೇಧಾವಿ ಸಾಹಿತಿಯೆಂದು , ಪತ್ರಿಕಾಲೋಕದ ಅನಭಿಷಿಕ್ತ ಸಮ್ರಾಟರೆಂದು, ಕ್ರಿಯಾಶೀಲ ತಪಸ್ವಿಯೆಂದು, ಮೇಲಾಗಿ ಉಗ್ರಟೀಕಾಕಾರರೆಂದು ಕನ್ನಡಲೋಕ ಸದಾ ಅವರನ್ನು ನೆನಪಿನಲ್ಲಿ ರಕ್ಷಿಸುತ್ತದೆ.

ದೇಜಗೌ

ಉತ್ತರಾಯಣಾರಂಭ ಮತ್ತು ಯುಗಾದಿ ನಿರ್ಣಯ ಹೇಗೆ?

ಜಿ.ಟಿ.ನಾರಾಯಣರಾವ್
೮ 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

ಧರ್ಮ- ವಿಜ್ಞಾನ ಅಭಿನ್ನತೆ

''ಯುಗಾದಿ ಹಬ್ಬ ಯಾವಾಗ ?''

''ಅಷ್ಟೂ ಗೊತ್ತಿಲ್ಲವೇ! ಚಾಂದ್ರ ಯುಗಾದಿ ಏಪ್ರಿಲ್ ೫ರಂದು ಬುಧವಾರ, ಸೌರ ಯುಗಾದಿ ಏಪ್ರಿಲ್ ೧೪ರಂದು ಶುಕ್ರವಾರ. ಇದು ಅವರವರ ಆಚರಣೆಗೆ ಸಂಬಂಧಿಸಿದ ವಿಷಯ.''

''ಎರಡು ಯುಗಾದಿಗಳು ಏಕೆ ? ಇವನ್ನು ನಿರ್ಣಯಿಸುವವರು ಯಾರು ?''

''ನಮ್ಮ ಹಿರಿಯರು. ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿ ಪ್ರಕಾರ ಕಾಲಗಣನೆಗೆ ಚಂದ್ರನನ್ನು ಆಶ್ರಯಿಸಿದರೆ ಪ್ರತಿ ಸಂವತ್ಸರದ ಚೈತ್ರ ಶುಕ್ಲ ಪಾಡ್ಯದಂದು ಚಾಂದ್ರ ಯುಗಾದಿಯೂ ಸೂರ್ಯನನ್ನು ಆಶ್ರಯಿಸಿದರೆ ಮೇಷ ಸಂಕ್ರಮಣದಂದು ಸೌರಯುಗಾದಿಯೂ ಸಂಭವಿಸುತ್ತವೆ.''

''ಹಾಗಾದರೆ ವಸಂತ ವಿಷುವದ ಔಚಿತ್ಯ ವೇನು? ಅದು ಸಾಧಾರಣವಾಗಿ ಮಾರ್ಚ್ ೨೦ ಅಥವಾ ೨೧ರಂದು ಬರುವುದು.''

''ಗೊತ್ತಿಲ್ಲ.''

''ವಸಂತ ವಿಷುವವೇ ಋಜುಯುಗಾದಿ. ಚಾಂದ್ರಯುಗಾದಿ ಮತ್ತು ಸೌರಯುಗಾದಿ ಇಂದು ಭವ್ಯ ಐತಿಹಾಸಿಕ ಸ್ಮಾರಕಗಳು ಮಾತ್ರ, ಗಗನದಲ್ಲಿ ಇವುಗಳಿಗೆ ನೆಲೆ ಇಲ್ಲ!''

''ನೋಡಿ !ಪರಂಪರೆ, ಧರ್ಮ, ಸಂಪ್ರದಾಯ, ಸಂಸ್ಕೃತಿ, ನಂಬಿಕೆ ಮುಂತಾದ ಜನರ ಭಾವ ಕೋಶಕ್ಕೆ ಸಂಬಂಧಿಸುವ ವಿಷಯಗಳಿಗೆ ನಿಮ್ಮ ವಿಜ್ಞಾನದ ಅತಿಕ್ರಮ ಪ್ರವೇಶ ಬೇಡ. ವಿಜ್ಞಾನದ ನಿರ್ಣಯವೇ ಅಂತಿಮವಲ್ಲ.''

ಇಲ್ಲಿಗೆ ವಾದ ಕೈದು. ಆದರೆ ವಿಚಾರ ? ವಸ್ತುತಃ ಧರ್ಮವೂ ವಿಜ್ಞಾನವೂ ವಿಶ್ವಾಂತರ್ಗತ ಸತ್ಯವನ್ನು ಅನ್ವೇಷಿಸುವ ಎರಡು ಪೂರಕ ಮತ್ತು ಪೋಷಕ ಚಿಂತನ ಪ್ರಕಾರಗಳು. ಅಂದ ಮೇಲೆ ಇವು ನುಡಿಯುವ ಅನುಭವವಾಣಿಗಳು ಏಕ ಶ್ರುತಿಲಯದಲ್ಲಿರಬೇಕು, ಇಲ್ಲವಾದಾಗ ನಮ್ಮ ವ್ಯಾಖ್ಯಾನ ಎಲ್ಲಿಯೋ ಹಳಿತಪ್ಪಿದೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ಯುಕ್ತ ಪರಿಹಾರ ಅರಸಲು ಮೂಲಭೂತ ವಿಶ್ಲೇಷಣೆ, ಆಕಾಶ ವೀಕ್ಷಣೆ ಮತ್ತು ಸ್ಥಳೀಯ ಪ್ರಯೋಗ ಮಾಡುವುದೊಂದೇ ಯೋಗ್ಯ ಮಾರ್ಗ. ಅಂದ ಹಾಗೆ ''ನಿಮ್ಮ ವಿಜ್ಞಾನ'' ಮತ್ತು ''ನಮ್ಮ ಧರ್ಮ'' ಎಂಬ ವಿಭೇದೀಕರಣ ವಿಶ್ವಸತ್ಯವಲ್ಲ, ಅವು ವ್ಯಕ್ತಿಯ ಅಜ್ಞಾನಸೂಚಕ ಪದಗಳು ಮಾತ್ರ.

ಗಗನ ದರ್ಶನ


ಭೂನಿವಾಸಿ ಮಾನವನಿಗೆ ಗೋಚರಿಸುವ ಗಗನ ದೃಶ್ಯವಿದು: ಸ್ಥಿರ ನಕ್ಷತ್ರ ಚಿತ್ರಗಳು ರಚಿಸುವ ಗೋಳದ ಒಳಮೈಮೇಲೆ ಸೂರ್ಯ, ಚಂದ್ರ, ಮತ್ತು ಕುಜ, ಬುಧ, ಗುರು, ಶುಕ್ರ, ಹಾಗೂ ಶನಿ ಎಂಬ ಐದು ಗ್ರಹಗಳು ಸಾಧಾರಣವಾಗಿ ಪಶ್ಚಿಮ-ಪೂರ್ವ ದಿಶೆಯಲ್ಲಿ ಸರಿಯುತ್ತಿವೆ. ''ಸಾಧಾರಣವಾಗಿ'' ಏಕೆಂದರೆ ಗ್ರಹಗಳು ಒಮ್ಮೊಮ್ಮೆ ಪೂರ್ವ-ಪಶ್ಚಿಮ ದಿಶೆಯಲ್ಲಿ ಸರಿಯುವುದೂ ಉಂಟು.

ಭೂಗ್ರಹದಲ್ಲಿ ನಾಗರಿಕತೆ ಅರಳಲು ತೊಡಗಿದಾಗ, ಅಂದಾಜು ೫೦೦೦ ವರ್ಷಗಳ ಹಿಂದೆ, ಅಂದಿನ ಖಗೋಳವೀಕ್ಷಕರಿಗೆ ಚಂದ್ರನೇ ಸೂರ್ಯನಿಗಿಂತ ಅಧಿಕ ಆತ್ಮೀಯ ಮತ್ತು ಪ್ರಸ್ತುತ ಎನ್ನಿಸಿತು. ಚಂದ್ರನನ್ನು ಆಧರಿಸಿ ಕಾಲವನ್ನು ಅಳೆಯುವ ಚಾಂದ್ರಮಾನದ ಉಗಮವಿದು. ೧೨ ಅಮಾವಾಸ್ಯೆ ಅಥವಾ ಹುಣ್ಣಿಮೆ ಸಲ್ಲುವಾಗ ಆಕಾಶದಲ್ಲಿಯ ನಕ್ಷತ್ರ ಪುಂಜಗಳೂ ಸ್ಥಳೀಯಋತುವಿದ್ಯಮಾನಗಳೂ

ಪುನರಾವರ್ತಿಸುತ್ತವೆ ಎಂಬ ತಥ್ಯವನ್ನು ಅವರು ಗುರುತಿಸಿದರು. ಹೀಗೆ ೧ ಚಾಂದ್ರ ವರ್ಷಕ್ಕೆ ೧೨ ಚಾಂದ್ರಮಾಸಗಳು ಅಥವಾ ೩೫೪ ದಿವಸಗಳು ನಿಗದಿಯಾದುವು. ಸಂಖ್ಯೆ ೧೨ಕ್ಕೆ ಪ್ರಾಮುಖ್ಯ ಒದಗಿದ್ದು ಈ ಕಾರಣದಿಂದ.

ಅತಿ ಶೀಘ್ರದಲ್ಲೇ ಋತುಚಕ್ರದ ಆವರ್ತನಾವಧಿಗೂ ಚಾಂದ್ರವರ್ಷಕ್ಕೂ ನಡುವೆ ತೀವ್ರ ವ್ಯತ್ಯಯ ಹಣುಕಿತು. ಋತುಚಕ್ರ ಸೂರ್ಯಾವಲಂಬಿಯಾಗಿ ಉರುಳುತ್ತದೆ. ಇದರಲ್ಲಿ ಸುಮಾರು ೩೬೫ ದಿವಸಗಳಿವೆ. ಹಾಗಾದರೆ ಚಾಂದ್ರವರ್ಷ ವಾರ್ಷಿಕವಾಗಿ ಕಳೆದುಕೊಳ್ಳುವ ೧೧ ದಿವಸಗಳನ್ನು ಹೊಂದಿಸುವುದು ಹೇಗೆ? ಅಧಿಕಮಾಸದ ಏರ್ಪಾಡು ಈ ಸಮಸ್ಯೆಯನ್ನು ತಾತ್ಕಾಲಿಕವಾಗಿ ಪರಿಹರಿಸಿತು, ನಿಜ. ಆದರೆ ತತ್ಸಂಬಂಧವಾದ ಗಣಿತ ಗೋಜಲುಗಳು ಅನಿವಾರ್ಯವಲ್ಲದ ಹೊರೆಯಾಗಿ ಉಳಿದುಕೊಂಡುವು. ನಾವು ವಾಸ್ತವತೆಗೆ ಒಪ್ಪುವ ಚೌಕಟ್ಟನ್ನು ರಚಿಸಬೇಕೇ ಹೊರತು ಪೂರ್ವಸಿದ್ಧ ಚೌಕಟ್ಟಿಗೆ ವಾಸ್ತವತೆಯನ್ನು ಹೊಂದಿಸುವ ಅಸಹಜ ಕ್ರಮಕ್ಕೆ ಮಣಿಯುವುದಲ್ಲ. ಅಂದರೆ, ಚಾಂದ್ರಮಾನವನ್ನು ಪೂರ್ಣವಾಗಿ ವರ್ಜಿಸಿ ಸೌರಮಾನವನ್ನು ಬಳಕೆಗೆ ತರುವುದೊಂದೇ ಇಲ್ಲಿ ಸಲ್ಲುವ ನಿಯಮ.

ಇತ್ತ ಸೌರಮಾನವಾದರೂ ಶತಮಾನಗಳ ದೀರ್ಘಾವಧಿಗಳಲ್ಲಿ ಹಲವಾರು ಅಸಾಂಗತ್ಯಗಳಿಗೆ ಎಡೆಮಾಡಿಕೊಟ್ಟಿತು. ಪುನಃ ಚೌಕಟ್ಟು-ವಾಸ್ತವತೆ ಅಪಲಯ! ಹಾಗಾದರೆ? ಮತ್ತೆ ಗಗನಾವಲೋಕನ, ಹಾಗೂ ಅಲ್ಲಿ ಸಲ್ಲುವ ನಿಯಮಗಳ ಅನ್ವೇಷಣೆ.




ಚಿತ್ರ ೧

ಅಲ್ಲಿಂದ ಇಲ್ಲಿಗೆ

ಮುಂದಿನ ವಿವರಣೆಯನ್ನು ಆಕಾಶ ವೀಕ್ಷಣೆಯಿಂದ ನೀವು ಗಳಿಸಿರುವ ಅನುಭವದ ಜೊತೆ ತಳುಕು ಹಾಕಬೇಕು: ಬಾನು ಮೊದಲು, ಬರಹ ಬಳಿಕ. ಸೂರ್ಯನೂ (S) ಚಂದ್ರನೂ (M) ನಮ್ಮ (E) ಸುತ್ತ ಸ್ಥೂಲವಾಗಿ ಒಂದೇ ವರ್ತುಳೀಯ ಕಕ್ಷೆಯಲ್ಲಿ ನಿತ್ಯಸಂಚಾರಿಗಳಾಗಿವೆ (ಚಿತ್ರ ೧). ಚಲನದಿಶೆ ಬಾನಿನಲ್ಲಿ ಪಶ್ಚಿಮ-ಪೂರ್ವ, ಚಿತ್ರದಲ್ಲಿ ಅಪ್ರದಕ್ಷಿಣ. ಸೌರಕಕ್ಷೆಗೆ ಕ್ರಾಂತಿವೃತ್ತವೆಂದು ಹೆಸರು. ಚಾಂದ್ರಕಕ್ಷೆ ಇದಕ್ಕೆ ತುಸು ಮಾಲಿಕೊಂಡಿದೆ.


ಇಡೀ ಖಗೋಳ ನಮ್ಮ (E) ಸುತ್ತ ಪೂರ್ವ-ಪಶ್ಚಿಮ (ಅಂದರೆ ಪ್ರದಕ್ಷಿಣ)



ಚಿತ್ರ ೨

ದಿಶೆಯಲ್ಲಿ ಆವರ್ತಿಸುತ್ತಿದೆ. ಆವರ್ತನಾವಧಿ ೧ ದಿವಸ. ಎಂದೇ ಸಕಲ ಆಕಾಶ ಕಾಯಗಳೂ, ಒಂದು ಅಪವಾದದ ವಿನಾ, ಅದೇ ದಿಶೆಯಲ್ಲಿ ದೈನಂದಿನ ಚಲನೆಯನ್ನು ಪ್ರದರ್ಶಿಸುವುದಾಗಿದೆ. ಖಗೋಳದ ಈ ದೈನಂದಿನಾವರ್ತನೆಯಲ್ಲಿ ಭಾಗಿಯಾಗದ ಆಕಾಶಕಾಯವೆಂದರೆ ಧ್ರುವ ನಕ್ಷತ್ರ (P). ಖಗೋಳದ ಆವರ್ತನಾಕ್ಷ

EP (ಚಿತ್ರ೨). ವೃತ್ತ AB ವೀಕ್ಷಕನ (E) ಕ್ಷಿತಿಜ,ವೃತ್ತ CD (ಪ್ರದಕ್ಷಿಣ ದಿಶೆ) ಯಾವುದೇ ಕಾಯದ ದೈನಂದಿನ ಪಥ. EP ಅಕ್ಷಕ್ಕೆ ನಮ್ಮ (E) ಮೂಲಕ ಲಂಬವಾಗಿ ರಚಿಸಿದ ಸಮತಲವು ಖಗೋಳವನ್ನು ಸಮದ್ವಿ ಭಾಗಿಸುವ ಕಾಲ್ಪನಿಕ ವೃತ್ತಕ್ಕೆ (ಚಿತ್ರ೩) ವಿಷುವದ್ವೃತ್ತ ಎಂದು ಹೆಸರು



ಚಿತ್ರ ೩

(QFRHQ). ಮಾರ್ಚ್ ೨೦/೨೧ ಮತ್ತು ಸೆಪ್ಟೆಂಬರ್ ೨೨/೨೩ರಂದು ಸೂರ್ಯನ ದೈನಂದಿನ ಪಥವಿದು (ಚಿತ್ರ ೩). ವಿಷುವದ್ವೃತ್ತವೂ ಕ್ರಾಂತಿವೃತ್ತವೂ (IFGHI) ಪರಸ್ಪರ ಮಾಲಿಕೊಂಡಿವೆ. ನಮಗೆ ಎದುರು ಬದಿರಾಗಿರುವ F ಮತ್ತು H ಎಂಬ ಎರಡು ಬಿಂದುಗಳಲ್ಲಿ ಇವು ಪರಸ್ಪರ ಛೇದಿಸುತ್ತವೆ.

ಸೂರ್ಯಚಂದ್ರರ ನಿರಂತರ ಹಿಡಿವಾಟದಲ್ಲಿ ಚಂದ್ರ ಪ್ರತಿ (ಸುಮಾರು) ೨೯.೫ ದಿವಸಗಳಿಗೊಮ್ಮೆ ಸೂರ್ಯನ ಬೆನ್ನು ಹಿಡಿದು (ಅಮಾವಾಸ್ಯೆ) ಮುಂದೋಡುವುದು. ಇದೇ ವೇಳೆ ಸೂರ್ಯನೂ ಚಲಿಸುತ್ತಿರುವುದರಿಂದ ಪ್ರತಿಸಲವೂ ಚಂದ್ರ ಒಂದು ಪರಿಭ್ರಮಣೆಗಿಂತ ತುಸು ಹೆಚ್ಚು ದೂರ ಕ್ರಮಿಸಿ ಸೂರ್ಯನನ್ನು ತಲಪಬೇಕಾಗುತ್ತದೆ. ಈ ಅವಧಿಯೇ ಹಿಂದೆ ಹೇಳಿದ ಚಾಂದ್ರ ಮಾಸ. ಇತ್ತ ಸ್ಥಿರ ನಕ್ಷತ್ರಗಳನ್ನು ಕುರಿತಂತೆ ಚಂದ್ರನ ಪರಿಭ್ರಮಣಾವಧಿ ಸುಮಾರು ೨೭.೩ ದಿವಸಗಳು. ಇದಕ್ಕೆ (ಚಂದ್ರನ) ನಾಕ್ಷತ್ರಿಕ ಮಾಸವೆಂದು ಹೆಸರು.

ಸೂರ್ಯ, ಚಂದ್ರ ಮತ್ತು ೫ ಗ್ರಹಗಳ ಕಕ್ಷೆಗಳು ಖಗೋಳದ ಒಂದು ಇಕ್ಕಟ್ಟು ಪಟ್ಟಿಗೆ ಸೀಮಿತವಾಗಿವೆ. ಇದು ರಾಶಿಚಕ್ರ. ಇದರ ಸಮದ್ವಿಭಾಜಕವೇ ಕ್ರಾಂತಿವೃತ್ತ. ರಾಶಿಚಕ್ರವನ್ನು ಗಣನೆಯ ಸೌಕರ್ಯಾರ್ಥ ೧೨ ಸಮಭಾಗಗಳಾಗಿ ವಿಭಾಗಿಸಿ ಮೇಷದಿಂದ ಮೀನದವರೆಗಿನ ಅಷ್ಟು ಹೆಸರುಗಳನ್ನು ನಿಗದಿಸಲಾಗಿದೆ. ಇವು ಸೂರ್ಯನ ಮಾಸಿಕ ಗೃಹಗಳು.



ಚಿತ್ರ ೪

ಚಂದ್ರನ ನಾಕ್ಷತ್ರಿಕ ಮಾಸದ ಅವಧಿಯಿಂದ (ಸುಮಾರು ೨೭.೩ ದಿವಸಗಳು) ಸ್ಫೂರ್ತಿ ಪಡೆದು ರಾಶಿಚಕ್ರದ ನೇರ ಅಶ್ವಿನಿಯಿಂದ ರೇವತಿವರೆಗಿನ ೨೭ ನಕ್ಷತ್ರಗಳನ್ನು ಗುರುತಿಸಿದ್ದಾರೆ. ಇವು ಚಂದ್ರನ ನಕ್ಷತ್ರಗಳು. ಮೇಷ ರಾಶಿಯು ಅಶ್ವಿನೀನಕ್ಷತ್ರದಿಂದ ತೊಡಗುತ್ತದೆ. ಪ್ರತಿಯೊಂದು ರಾಶಿಯ ಕೋನ ವ್ಯಾಪ್ತಿ ೩೦ ಡಿಗ್ರಿಗಳು. ಹೀಗೆ ೧೨ ರಾಶಿಗಳು ೩೬೦ ಡಿಗ್ರಿಗಳನ್ನು ______ ಅಂದರೆ ಪೂರ್ಣ ರಾಶಿಚಕ್ರವನ್ನು ______ ನಿರ್ಧರಿಸುತ್ತವೆ. ಇವೆಲ್ಲವೂ ಮಾನವಕೃತ ಏರ್ಪಾಡುಗಳು; ವಾಸ್ತವ ವಿಶ್ವದಲ್ಲಿ ರಾಶಿಗಳಿಗೆ ಭೌತ ಅಸ್ತಿತ್ವವಿಲ್ಲ. ಸೂರ್ಯ

ಸೂವುದೇ ರಾಶಿಯನ್ನು ರಾಶಿ (ಅಂದರೆ ಗೃಹವನ್ನು) ಪ್ರವೇಶಿಸುವ ಮುಹೂರ್ತವೇ ಆ ಸಂಕ್ರಮಣ. ಆದ್ದರಿಂದ ಅಶ್ವಿನೀ ನಕ್ಷತ್ರಕ್ಕೆ ಸೂರ್ಯ ಬಂದಾಗ ಮೇಷ ಸಂಕ್ರಮಣ ಸಂಭವಿಸುತ್ತದೆ. ಉಳಿದ ೧೧ ಸಂಕ್ರಮಣಗಳನ್ನು ಇರಿತಂತೆ ಹೀಗೆ ನಕ್ಷತ್ರ-ಸಂಕ್ರಮಣ ಹೊಂದಾಣಿಕೆ ಮಾಡಲಾಗುವುದಿಲ್ಲ. ಏಕೆಂದರೆ ೨೭ ನಿತ್ಯ ನಕ್ಷತ್ರಗಳು ಸಮ ಅಂತರಗಳಲ್ಲಿ ವಿತರಣೆಗೊಂಡಿಲ್ಲ.

ವಿಷುವ ಮತ್ತು ಅಯನ ಬಿಂದುಗಳು

ಚಿತ್ರ೩ನ್ನು ಗಮನಿಸಬೇಕು. ವಿಷುದ್ವೃತ್ತ-ಕ್ರಾಂತಿವೃತ್ತ ಸಂಧಿಸುವ F ಮತ್ತು H ಬಿಂದುಗಳಿಗೆ ವಿಷುವ ಬಿಂದುಗಳೆಂದೂ ಸೂರ್ಯನ ಚಲನದಿಶೆ ವಿಪರ್ಯಯಗೊಳ್ಳುವ G ಮತ್ತು I ಬಿಂದುಗಳಿಗೆ ಅಯನ ಬಿಂದುಗಳೆಂದೂ ಹೆಸರು. F ವಸಂತ ವಿಷುವ, H ಶರದ್ವಿಷುವ; I ಮಕರಾಯಣ, G ಕರ್ಕಾಯನ.

ವರ್ತಮಾನ ಕಾಲದ ಆಕಾಶದಲ್ಲಿ ನಾವು ಕಾಣುವ ಅಥವಾ ತಿಳಿಯುವ ಕೆಲವು ಮಾಹಿತಿಗಳನ್ನು ಮುಂದಿನ ಯಾದಿಯಲ್ಲಿ ಕೊಟ್ಟಿದೆ.

ದಿನಾಂಕ	ಸೂರ್ಯನ ಸ್ಥಾನ	ವಿವರಣೆ
ಮಾರ್ಚ್ ೨೦/೨೧	ವಸಂತವಿಷುವF	ಹಗಲು ಇರುಳು ಸಮ ಅವಧಿಯವು
ಜೂನ್ ೨೦/೨೧	ಕರ್ಕಾಯನG	ಗರಿಷ್ಠ ಹಗಲು, ಕನಿಷ್ಠ ಇರುಳು
ಸೆಪ್ಟೆಂಬರ್ ೨೨/೨೩	ಶರದ್ವಿಷುವH	ಹಗಲು ಇರುಳು ಸಮ ಅವಧಿಯವು
ಡಿಸೆಂಬರ್ ೨೧/೨೨	ಮಕರಾಯಣI	ಕನಿಷ್ಠ ಹಗಲು, ಗರಿಷ್ಠ ಇರುಳು

ಸೂರ್ಯ Iನಿಂದ Gಯವರೆಗೆ ಉತ್ತರಾಭಿಮುಖ ವಾಗಿಯೂ Gಯಿಂದ Iಯವರೆಗೆ ದಕ್ಷಿಣಾಭಿಮುಖವಾಗಿಯೂ ಚಲಿಸುತ್ತಿರುವುದು. ಆದ್ದರಿಂದ ಉತ್ತರಾಯಣವು ಮಕರಾಯಣದಿಂದೂ ದಕ್ಷಿಣಾಯನವು ಕರ್ಕಾಯನದಿಂದೂ ಆರಂಭವಾಗುತ್ತವೆ. ಅರ್ಥಾತ್ ಉತ್ತರಾಯಣಾರಂಭ ಡಿಸೆಂಬರ್ ೨೧/೨೨, ಮಕರ ಸಂಕ್ರಮಣ ಅಲ್ಲ; ದಕ್ಷಿಣಾಯನಾರಂಭ, ಜೂನ್ ೨೦/೨೧, ಕರ್ಕಾಟಕ ಸಂಕ್ರಮಣ ಅಲ್ಲ.

ಸಂಕ್ರಮಣ ದಿನಾಂಕಗಳು

ಸಂಕ್ರಮಣ ದಿನಾಂಕಗಳು ಸೂರ್ಯ-ನಕ್ಷತ್ರ ರಾಶಿ ಸಂಬಂಧದಿಂದ ನಿರ್ಧರಿತವಾಗುವುದರಿಂದ ಶತಮಾನ ಪರ್ಯಂತ ಇವು ಬದಲಾಗುವುದಿಲ್ಲ. ಅವು ಸ್ಥೂಲವಾಗಿ ಹೀಗಿವೆ:

ಸಂಕ್ರಮಣ	ದಿನಾಂಕ	ಸಂಕ್ರಮಣ	ದಿನಾಂಕ
ಮೇಷ	ಏಪ್ರಿಲ್೧೪	ತುಲಾ	ಅಕ್ಟೋಬರ್೧೭
ವೃಷಭ	ಮೇ೧೫	ವೃಶ್ಚಿಕ	ನವಂಬರ್೧೬
ಮಿಥುನ	ಜೂನ್೧೫	ದನು	ಡಿಸೆಂಬರ್೧೬
ಕರ್ಕಟಕ	ಜುಲೈ೧೬	ಮಕರ	ಜನವರಿ೧೪
ಸಿಂಹ	ಆಗಸ್ಟ್೧೭	ಕುಂಭ	ಫೆಬ್ರುವರಿ೧೩
ಕನ್ಯಾ	ಸೆಪ್ಟೆಂಬರ್೧೭	ಮೀನ	ಮಾರ್ಚ್೧೪

ಕೆಲವು ಶತಮಾನಗಳ ಹಿಂದೆ F ಬಿಂದು ಅಶ್ವಿನೀ ನಕ್ಷತ್ರದಲ್ಲಿತ್ತು. ಆಗ ವಸಂತ-ವಿಷುವ ಮೇಷ ಸಂಕ್ರಮಣ ಅಭಿನ್ನವಾಗಿದ್ದುವು. ಅಂದು ಹಗಲು ಮತ್ತು ಇರುಳು ಸಮ ಅವಧಿಯವಾಗಿದ್ದುದರಿಂದ, ಮತ್ತು ತದ ನಂತರದ ದಿನಗಳಲ್ಲಿ ಹಗಲಿನ ಅವಧಿ ಇರುಳಿನದಕ್ಕಿಂತ ಹೆಚ್ಚಾಗುತ್ತಿದ್ದುದರಿಂದ ಆ ದಿವಸವನ್ನು ಯುಗಾದಿ ಎಂದು ಅಂದಿನ ಖಗೋಳವಿಜ್ಞಾನಿಗಳು ಸಕಾರಣವಾಗಿಯೇ ಹೆಸರಿಸಿದರು. ಹೀಗೆ ಅಂದು ಸೂರ್ಯ- ಅಶ್ವಿನೀ ಐಕ್ಯ ಅಥವಾ ಮೇಷಸಂಕ್ರಮಣವು ಯುಗಾದಿ ಎಂಬ ಅಂತಸ್ತು ಪಡೆಯಿತು. ರೂಪಕ ಭಾಷೆಯಲ್ಲಿ: ಸೂರ್ಯ ರಾಜ ಮೇಷ ಸಿಂಹಾಸನವನ್ನು ಆರೋಹಿಸಿದ ಮುಹೂರ್ತವೇ ಯುಗಾದಿ. ಇದೇ ಪ್ರಕಾರ ಈತ ಕರ್ಕಟಕವನ್ನು ಏರಿದಾಗ ದಕ್ಷಿಣಾಯನಾರಂಭ, ತುಲಾವನ್ನು ಏರಿದಾಗ ಶರದ್ವಿಷುವ ಮತ್ತು ಮಕರವನ್ನು ಏರಿದಾಗ ಉತ್ತರಾಯಣಾರಂಭ ಎಂದು ನಿಗದಿ ಆದುವು. ಇದು ಸರಿ ಅಂದಿಗೆ.

ಗತಿಶೀಲತೆಯೇ ಜಗತ್ತಿನ ಧರ್ಮ. ಭೌತ ವಿಶ್ವದಲ್ಲಿ ಯಾವುದೂ ಸ್ಥಿರವಲ್ಲ, ಶಾಶ್ವತವಲ್ಲ. ಕ್ರಾಂತಿವೃತ್ತ-ವಿಷುವದ್ವೃತ್ತ ಛೇದನ ಬಿಂದುಗಳು (ಅಂದರೆ ವಿಷುವ ಬಿಂದುಗಳು) ಕ್ರಾಂತಿವೃತ್ತದ

ನೇರ ಪೂರ್ವ-ಪಶ್ಚಿಮ (ಪ್ರದಕ್ಷಿಣ) ದಿಶೆಯಲ್ಲಿ ಸರಿಯುತ್ತಿವೆ. ಹೀಗಾಗಿ ಯಜುರ್ವೇದದ ಕಾಲದಲ್ಲಿ (ಕ್ರಿಪೂಸು ೧೦೦೦) ಕೃತ್ತಿಕಾ ನಕ್ಷತ್ರದಲ್ಲಿದ್ದ ವಸಂತ ವಿಷುವವು ದಾರ್ಶನಿಕ- ಖಗೋಳವಿಜ್ಞಾನಿ ವರಾಹ ಮಿಹಿರನ (ಕ್ರಿ.ಶ. ೫-೬ನೆಯ ಶತಮಾನ) ಕಾಲದಲ್ಲಿ ಅಶ್ವಿನೀ ನಕ್ಷತ್ರಕ್ಕೆ ಹಿನ್ಸರಿದಿತ್ತು. ಈ ಸೂಕ್ಷ್ಮ ಖಗೋಳೀಯ ವಿದ್ಯಮಾನವನ್ನು ಗಮನಿಸಿದ ಈತ ವಸಂತವಿಷುವ-ಅಶ್ವಿನೀ ನಕ್ಷತ್ರ ಸಂಗಮ (ಅಂದರೆ ಮೇಷ ಸಂಕ್ರಮಣ) ದಿನವೇ ಯುಗಾದಿ ಎಂದು ತನ್ನ 'ಸೂರ್ಯಸಿದ್ಧಾಂತ' ದಲ್ಲಿ ವಿವರಿಸಿದ. ಇದರ ಅರ್ಥ: ವೇದಕಾಲದಲ್ಲಿ ಸೂರ್ಯನ ಸಿಂಹಾಸನ ವೃಷಭ (ಕೃತ್ತಿಕಾನಕ್ಷತ್ರ ಇದರಲ್ಲಿದೆ), ವರಾಹಮಿಹಿರನ ಕಾಲದಲ್ಲಿ ಮೇಷ! ಹಾಗಾದರೆ ಇಂದು (೨೦೦೦ ಅಥವಾ ೨೧ನೆಯ ಶತಮಾನ) ಸೂರ್ಯನ ಸಿಂಹಾಸನ ಎಲ್ಲಿದೆ? ಅದು ರೇವತಿ-ಉತ್ತಭಾದ್ರಾ ನಡುವೆ ಮೀನರಾಶಿಯಲ್ಲಿದೆ. ದಿನಾಂಕ ೨೦-೩-೨೦೦೦ದಂದು ಋಜು ಯುಗಾದಿ ಸಂಭವಿಸುತ್ತದೆ.

ಧರ್ಮ,ಸಂಸ್ಕೃತಿ ಅಥವಾ ಸಂಪ್ರದಾಯದ ಹೆಸರಿನಲ್ಲಿ ಮಕರ ಸಂಕ್ರಮಣವನ್ನು ಉತ್ತರಾಯಣ ಪುಣ್ಯಕಾಲವೆಂದೂ ಮೇಷ ಸಂಕ್ರಮಣವನ್ನು ಯುಗಾದಿ ಸುಮುಹೂರ್ತವೆಂದೂ ಆಚರಿಸುವವರಿಗೆ ಒಂದು ಆಪ್ತ ವಾಕ್ಯ: ''ಸೂರ್ಯರಾಜ ಮಕರಸಿಂಹಾಸನಕ್ಕಿಂತ ಮೊದಲೇ ಉತ್ತರಾಯಣವನ್ನು ತೊಡಗುತ್ತಾನೆ. ಅಂತೆಯೇ ಮೇಷ ಸಿಂಹಾಸನಕ್ಕಿಂತ ಮೊದಲೇ ಯುಗಾದಿಯನ್ನು ಘೋಷಿಸುತ್ತಾನೆ. ರಾಜರಹಿತ ಮಕರ ಮತ್ತು ಮೇಷ ಸಿಂಹಾಸನಗಳಿಗೆ ನೀವು ಸಲ್ಲಿಸುತ್ತಿರುವ ಪೂಜೆ ಬೌದ್ಧಿಕ ಚಿಂತನರಾಹಿತ್ಯದ ಸಂಕೇತ. ಈ ಆಧುನಿಕ ವಿಜ್ಞಾನಯುಗದಲ್ಲಿ ಇದು ಅಕ್ಷಮ್ಯ''

ನಮ್ಮ ಧಾರ್ಮಿಕ ಮುಖಂಡರು, ಖಗೋಳ ವಿಜ್ಞಾನಿಗಳು , ರಾಜಕೀಯ ಪ್ರಭುಗಳು ಮತ್ತು ವಿಚಾರವಂತರು ಈ ವಿಷಯವನ್ನು ಗಂಭೀರವಾಗಿ ಪರಿಶೀಲಿಸಿ ಜನರಿಗೆ ಯುಕ್ತ ನಿರ್ದೇಶನ ನೀಡಬೇಕು ಮತ್ತು ಅದನ್ನು ಅನುಷ್ಠಾನಿಸಬೇಕು. ''ವಿಜ್ಞಾನರಹಿತ ಧರ್ಮ ಕುರುಡು'' ಎಂದರು ಐನ್‌ಸ್ಟೈನ್. ಈ ವಾಕ್ಯದ ಉತ್ತರಾರ್ಧ: ''ಧರ್ಮರಹಿತ ವಿಜ್ಞಾನ ಕುಂಟು.'' ಇಂಥ ಅಂಧ ಧರ್ಮ ಅಥವಾ ಪಂಗು ವಿಜ್ಞಾನ ನಮಗೆ ಬೇಡ. ಬದಲು ಧರ್ಮನಿರ್ದೇಶಿತ ವಿಜ್ಞಾನವೂ ವಿಜ್ಞಾನ ನಿಯಂತ್ರಿತ ಧರ್ಮವೂ ಸಮಶ್ರುತಿಲಯದಲ್ಲಿರುವ ಸುಸ್ಥಿತಿಬೇಕು.

ವಿಜ್ಞಾನ ಮೂಲವನು ಕಾಣ್ ತತ್ತ್ವಶಾಸ್ತ್ರದಲಿ
ತತ್ತ್ವಶಾಸ್ತ್ರದ ಸೆಲೆಯನರಸು ವಿಜ್ಞಾನದಲಿ
ಸೃಷ್ಟಿವೈಚಿತ್ರ್ಯ ಏ ದ್ವಂದ್ವ ಪರಿಕಿಪೊಡೆ ಅಂ-
ತರ್ಜೋಧಗಿದು ಗೋಚರಿಪುದು ತೀ ಅತ್ರಿಸೂನು

ಚಿತ್ರ: ಎಸ್.ಎಸ್. ರಾಮ್‌ಗೌತಮ್

ದೇಶವು ಆ ದೇಶದಲ್ಲಿ ವಾಸಿಸತಕ್ಕ ಜನರದು. ಅದನ್ನು ಆಳುವ ಸರಕಾರವನ್ನು ತಿದ್ದಲು ಅವರೇ ನಿಜವಾದ ಹಕ್ಕುಳ್ಳವರು.

ನೇತಾಜಿ

ಸ್ವಾತಂತ್ರ್ಯ ವೀರ ಕೋಳೂರು ಶಂಕರಪ್ಪ

ಡಾ॥ ಹೆಚ್.ಎಸ್.ಮಂಜುರಾಜ್
ಕನ್ನಡ ಅಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ-೫೭೧೬೦೨

ಗಾಂಧಿಪ್ರಣೀತ ಸ್ವಾತಂತ್ರ್ಯ ಚಳವಳಿಯಲ್ಲಿ ದ್ಯಾರ್ಥಿ ಸಮುದಾಯ ಧುಮುಕಿದ್ದು. ವೇದ್ಯ ಾದ ಸಂಗತಿಯೇ. ಬಹಳಷ್ಟು ವಿದ್ಯಾರ್ಥಿ ಮೂಹ ವ್ಯಾಸಂಗಕ್ಕೆ ತಿಲಾಂಜಲಿ ನೀಡಿ .ಮ್ಮುಖ ಪ್ರವಾಹಕ್ಕೆ ಜೊತೆಗೂಡಿತು. ೈಸೂರಿನ ರಾಮಸ್ವಾಮಿ ಎಂಬ ಬಾಲಕ ್ರಿಟಿಷ್ ಪೊಲೀಸರ ಗುಂಡೇಟಿಗೆ ಲಿಯಾದರೆ, ಕೃಷ್ಣರಾಜನಗರ ತಾಲೂಕಿನ ೋಳೂರು ಗ್ರಾಮದ ಶಂಕರಪ್ಪನೆಂಬ ದ್ಯಾರ್ಥಿಯು ಪೊಲೀಸರ ಲಾಠಿಯೇಟಿನ, ೂಟುಕಾಲಿನ ದೌರ್ಜನ್ಯಕ್ಕೆ ಬಲಿಯಾದ. ಾಗೆನೋಡಿದರೆ ಬ್ರಿಟಿಷ್ ದೌರ್ಜನ್ಯಕ್ಕೆ ಕೊನೆ ೊದಲೇ ಇರಲಿಲ್ಲ. ಇವನ್ನೆಲ್ಲ ಗಮನಿಸಿದರೆ ್ರಿಟಿಷ್ ಸೈನಿಕರು ಗಾಂಧಿಯನ್ನು ಇನ್ನಿಲ್ಲವಾಗಿ ಲು ಆತ್ಯಂತಿಕವಾಗಿ ಹಿಂಜರಿದದ್ದು ಮಾತ್ರ ್ರತಿಯೋರ್ವ ಸಂವೇದನಾಶೀಲನೂ ಗಮನಿಸ ಬೇಕಾದ ಅಂಶ. ಗಾಂಧೀಜಿ ಒಬ್ಬಂಟಿಯಾಗಿ ಇದ್ದ ಸನ್ನಿವೇಶಗಳು ಎಷ್ಟೊಂದು! ಲಕ್ಷಾಂತರ ಬ್ರಿಟಿಷ್ ಸೈನಿಕರ, ೇನಾಧಿಕಾರಿಗಳ ಸಮ್ಮುಖದಲ್ಲಿ ಒಬ್ಬರೇ ಿಂತು ತಮ್ಮದೇ ಆದ ವಾದಸಂವಾದ, ಸತ್ಯಾಗ್ರಹ ನಡೆಸಿದ ಘಟನೆಗಳು ಹಲವಾರು. ಲಾಠಿ, ಗುಂಡುಗಳೇ ಏಕೆ ? ಸೈನಿಕನೊಬ್ಬ ಗಾಂಧಿಯನ್ನು ತಳ್ಳಿದ್ದರೆ ಸಾಕಿತ್ತು! ಯಾರಿಗೂ ಆ ಧೈರ್ಯ ಬರದೇ ಹೋದದ್ದು ಇತಿಹಾಸದ ಚಮತ್ಕಾರ ಅಂದರೆ ಗಾಂಧೀಜಿಯ ನೈತಿಕ ಸಾಮರ್ಥ್ಯ, ವ್ಯಕ್ತಿತ್ವದ ವರ್ಚಸ್ಸು, ಮಾನಸಿಕ ಸ್ಥಿರತೆ, ಸೈದ್ಧಾಂತಿಕ ಬಲಗಳು ಅವರ ಶಾರೀರಿಕ ನಿಶ್ಶಕ್ತಿಯನ್ನು ಗೌಣಗೊಳಿಸಿದವು. ನೈತಿಕ ಅರ್ಹತೆಯೇ ಮೇಲುಗೈ ಸಾಧಿಸುವುದಕ್ಕೆ ಗಾಂಧೀಜಿಗಿಂತ ಉದಾಹರಣೆ ಬೇರೆ ಬೇಕೆ? ಸಮಸ್ತ ಭರತಖಂಡದ ಸಾಕಾರರೂಪ ಗಾಂಧೀಜಿ, ಸಮಸ್ತ ಧ್ವನಿಶಕ್ತಿಯ ಸಂಕೇತವಾಗಿ ಮಾರ್ಪಟ್ಟಿದ್ದ ಸಂದರ್ಭದಲ್ಲಿ ಗಾಂಧಿಯನ್ನು ಏಕಾಂಗಿಯಾಗಿ ಬ್ರಿಟಿಷ್ ಕಣ್ಣ ಮುಂದೆ ಕಲ್ಪಿಸಿಕೊಳ್ಳುವುದಾದರೂ ಹೇಗೆ ಸಾಧ್ಯವಾದೀತು ?

ಕೋಳೂರು ಶಂಕರಪ್ಪನಲ್ಲಿ ಗಾಂಧಿ ವರ್ಚಸ್ಸಿನ ಪ್ರಭಾವಳಿಯ ಕಿರಣಾಂಶು ಸೇರಿಕೊಂಡಾಗ ಆತ ಸಿಡಿದೆದ್ದನು. ಗಾಂಧೀಜಿಯ ಸತ್ಯಾಗ್ರಹ ನಡೆಯುತ್ತಿರುವಾಗ, ದೇಶವೇ ಚಳವಳಿಯ ಸಮಾರಾಧನೆಯಲ್ಲಿ ಭಾಗವಹಿಸಿದ್ದಾಗ ಅದರ ಲವಲೇಶವೂ ಸೋಂಕದ ಕುಗ್ರಾಮವೊಂದರಲ್ಲಿ ಶಂಕರಪ್ಪನಂಥ ಹುತಾತ್ಮ ಚೇತನ ನಿಧಾನವಾಗಿ ಮೈಮುರಿದೆದ್ದಿತು.

ಶಂಕರಪ್ಪನ ಹುಟ್ಟು ೧೯೧೯ರಲ್ಲಿ, ಪಟೇಲ್ ಚನ್ನಪ್ಪ ಮತ್ತು ಕೆಂಪಮ್ಮನವರ ಎರಡನೆಯ ಮಗನಾಗಿ ಜನನ. ಹನಸೋಗೆಯ ಪ್ರಾಥಮಿಕ ಶಾಲೆಯಲ್ಲಿ ಆಟಪಾಠ. ಹೆಚ್ಚಿನ ವ್ಯಾಸಂಗಕ್ಕಾಗಿ ಮೈಸೂರಿನ ಮಲ್ಲಮ್ಮ ಮರಿಮಲ್ಲಪ್ಪ ಪ್ರೌಢಶಾಲೆಗೆ ಸೇರ್ಪಡೆ. ಆಗ ಸ್ವಾತಂತ್ರ್ಯ ಚಳವಳಿಗಾಗಿ ವಿದ್ಯಾರ್ಥಿ ಸಂಘಟನೆ; ಮುಂಚೂಣಿಯ ನಾಯಕತ್ವದ ಪಾಲನೆ. ವಿದ್ಯಾರ್ಥಿ ವಿರಚಿತ ಸಾಹಿತ್ಯದಲ್ಲಿ ಬಹುಪಾಲು ಸ್ವರಾಜ್ಯದ ಹಂಬಲವೇ ಕೇಂದ್ರ ಬಿಂದು. ಕವನ, ಕತೆ, ನಾಟಕ, ವಿಚಾರಾತ್ಮಕ ಪ್ರಚೋದಕ ಲೇಖನಗಳಲ್ಲಿ ಕೋಳೂರು ಶಂಕರಪ್ಪ ತಮ್ಮದೇ ನಮೂನೆಯಲ್ಲಿ ಚಳವಳಿಕಾರರಾಗಿ ಅರಳಿದರು. ರಜೆಯಲ್ಲಿ ಸ್ವಗ್ರಾಮಕ್ಕೆ ಬಂದಾಗಲೆಲ್ಲ ಸಾಧ್ಯವಾದಷ್ಟೂ ಸ್ಥಳೀಯ ಯುವಕರಲ್ಲಿ

ಆಂದೋಲನದ ನೆಲೆಬೆಲೆಗಳನ್ನು ತಿಳಿಸುವ, ಜಾಗೃತಗೊಳಿಸುವ ಹುರಿದುಂಬಿಸುವ ನಿಷ್ಠಾವಂತ ಕಳಕಳಿ. ಹೀಗೆ ಕೋಳೂರು ಶಂಕರಪ್ಪ ಚಿಕ್ಕ ವಯಸ್ಸಿನಲ್ಲೇ ದೇಶದ ಬಂಧನ ಬಿಡಿಸುವ ಭಾರೀ ಬದ್ಧತೆಗೆ ಹೆಗಲು ನೀಡಿದರು.

೧೯೪೨ರ ಚಲೇಜಾವ್ ಚಳವಳಿಯ ಸಂದರ್ಭ ಕೋಳೂರು ಶಂಕರಪ್ಪನವರು ಗಾಂಧೀಜಿಯ ಮಾರ್ಗದರ್ಶನದಂತೆ ಮೈಸೂರಿನ ವಿದ್ಯಾರ್ಥಿ ಸಮುದಾಯವನ್ನು ನಗರ, ಗ್ರಾಮಗಳಲ್ಲಿ ಶಾಂತಿಯುತ ಮೆರವಣಿಗೆ ಮೂಲಕ ಘೋಷಣೆಗಳ ಗಗನವಾಗಿಸುವ ಪ್ರಯತ್ನ ಮಾಡಿದರು. ಗಾಂಧೀಜಿ ಮತ್ತವರ ಆಪ್ತರೊಂದಿಗೆ ನಿರಂತರ ಸಂಪರ್ಕವಿಟ್ಟು ಕೊಂಡರು. ಕೃಷ್ಣರಾಜನಗರ ತಾಲೂಕಿನ ಹಲವು ಗ್ರಾಮಗಳ ಯುವಜನತೆಯನ್ನು ಒಗ್ಗೂಡಿಸಿ, ಮೈಸೂರು ನಗರಕ್ಕೆ ಮೆರವಣಿಗೆ ಹೊರಡಿಸಿದರು. ಮೈಸೂರಿನ ಈಗಿನ ಶಾಂತಲಾ ಚಿತ್ರ ಮಂದಿರದ ಎದುರಿರುವ ಸುಬ್ಬರಾಯನಕೆರೆ ಮೈದಾನದಲ್ಲಿ ಭಾರಿ ಸಭೆಯನ್ನುದ್ದೇಶಿಸಿ, ಆಂಗ್ಲ ಸರ್ಕಾರದ ದಬ್ಬಾಳಿಕೆಯನ್ನು ವಿರೋಧಿಸಿ ಅವರು ಭಾಷಣ ಮಾಡಿದರು. 'ಭಾರತ ಬಿಟ್ಟು ತೊಲಗಿ' ಯೆಂಬ ಘೋಷಣೆ ನಗರವನ್ನು ನಡುಗಿಸಿತು; ಅಂತೆಯೇ ಆಂಗ್ಲ ಪೊಲೀಸರ ಹೃದಯ ಅಲುಗಾಡಿತು.

ವಿದ್ಯಾರ್ಥಿ ಚಳವಳಿ ಪ್ರಖರವಾಯಿತೆನಿಸಿ ಆಂಗ್ಲ ಅಧಿಕಾರಿಗಳು ನೂರಾರು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರು. ಕೋಳೂರು ಶಂಕರಪ್ಪ ಸಹ ಬಂದಿಯಾದರು.

ನಡೆಸಿದ 'ಅಚಾತುರ್ಯ'ಕ್ಕೆ ಕ್ಷಮೆ ಕೋರಿ ಕ್ಷಮಾಪಣಪತ್ರ ಬರೆದುಕೊಟ್ಟು ಶಂಕರಪ್ಪನವರು ಬಂಧನದಿಂದ ಬಿಡುಗಡೆಗೊಳ್ಳಬಹುದಿತ್ತು. ಸೋಲರಿಯದ ವೀರಶಂಕರಪ್ಪ ಎಷ್ಟೆಂದರೂ ಗಾಂಧೀವಾದಿ. ಇದರಿಂದಾಗಿ ಬ್ರಿಟಿಷ್ ಸರ್ಕಾರ ವಿಚಾರಣೆ ನಡೆಸದೆ ಸೆರೆಮನೆಗೆ ದೂಡಿತು. ಜನಕ ಚೆನ್ನಪ್ಪನವರು ಬರಿಗೈಯಿಂದ ಹಳ್ಳಿಗೆ ವಾಪಸಾದರು. ಕುಟುಂಬಕ್ಕಿಂತ ದೇಶ ದೊಡ್ಡದೆಂದು ಭಾವಿಸಿದ ಶಂಕರಪ್ಪ ಕೌಟುಂಬಿಕ ಸಂವೇದನೆಗಳಿಂದ ಬಲವಂತವಾಗಿ ದೂರಾದರು. ಇಲ್ಲದಿದ್ದರೆ ಚಳವಳಿಕಾರರಾಗುವುದು ಅಸಾಧ್ಯವೆಂಬ ತಿಳಿವನ್ನು ಆದಾಗಲೇ ಹೊಂದಿಬಿಟ್ಟಿದ್ದರು.

ಮೈಸೂರಿನ ಜೈಲು ಅವ್ಯವಸ್ಥೆಯ ಆಗರವಾಗಿತ್ತು. ರಾಜಕೀಯ ಖೈದಿಗಳನ್ನು ಅನಾದರದಿಂದ ಕಾಲು ಕಸವಾಗಿ ನೋಡುವ ದೃಷ್ಟಿಯನ್ನು ಕಂಡ ಸಿಡಿಲಮರಿ ಉಗ್ರರಾದರು. ಸೆರೆಮನೆಯಲ್ಲೆಲ್ಲ ಭಾರತಾಂಬೆ, ಮಹಾತ್ಮಾ ಗಾಂಧೀಜಿಪರ ಘೋಷಣೆಗಳು ಮೊಳಗಿದುವು. ಬ್ರಿಟಿಷ್ ಅಧಿಕಾರಿ ಬಂದವನೇ ವಿದ್ಯಾರ್ಥಿ ಚಳವಳಿಕಾರರನ್ನು ಹತ್ತಿಕ್ಕುವ ಯತ್ನದಲ್ಲಿ ಲಾಠಿಪ್ರಹಾರ ನಡೆಸಿಬಿಟ್ಟನು. ಶಂಕರಪ್ಪನ ಮೈಕೈ ಮುರಿಯಿತು. ಮಾನವರೂಪೀ ದಾನವರ ಪೈಶಾಚಿಕ ಕೃತ್ಯಕ್ಕೆ ಜೈಲಿನ ಗೋಡೆಗಳೇ ನಡುಗಿದುವು; ನಿಷ್ಕರುಣ ಆಂಗ್ಲೀಯ ಶಸ್ತ್ರಾಸ್ತ್ರಗಳು ಗುಡುಗಿದುವು. ಅತೀವ ರಕ್ತಸ್ರಾವದಲ್ಲಿ ತೋಯ್ದ ಶಂಕರಪ್ಪನ ಶರೀರ ಮುದ್ದೆಯಾಯಿತು. ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಿದರಾದರೂ ಮೂರನೆಯ ದಿನ ಅಂದರೆ ೧೯೪೨ರ ಅಕ್ಟೋಬರ್ ೩೦ರಂದು ಶಂಕರಪ್ಪ ಅಸುನೀಗಿದರು; ಹುತಾತ್ಮರಾದರು.

ಶಂಕರಪ್ಪನ ಕುಟುಂಬ ಎಷ್ಟು ದಾರುಣ ದುಃಖ ಅನುಭವಿಸಿತೆಂದರೆ ಸ್ವಂತ ತಂದೆ ತಾಯಿಗಳಿಗೆ ಮಗನ ಶವ ದೊರಕದಾಯಿತು. 'ತಂದೆಯೇ ಮಗನ ಶರೀರಕ್ಕೆ ಸಂಸ್ಕಾರ ಮಾಡುವ ವಿಪರ್ಯಾಸ ಬೇಡವೆಂದೋ ಏನೋ

ಹೃದಯಹೀನ ಆಂಗ್ಲೀಯ ಅಧಿಕಾರಿಗಳು ವಿದ್ಯಾರ್ಥಿ ಚಳವಳಿಯ ಸರ್ವವ್ಯಾಪಕತೆಯನ್ನೂ ಉಗ್ರ ಸ್ವರೂಪದ. ದಂಗೆಯನ್ನೂ ಊಹಿಸಿ ತಾವೇ ಶಂಕರಪ್ಪನ ಶರೀರಕ್ಕೆ ಮಣ್ಣು ಕಾಣಿಸಿದರು. ವಯಸ್ಸಿಗೆ ಬಂದ ಮಗನನ್ನು ಕಳಕೊಂಡ ದುಃಖ; ಅದನ್ನು ನಾಚಿಸಲೋ ಎಂಬಂತೆ ಸಂಸ್ಕಾರಕ್ಕೂ ಆಸ್ಪದ ಕೊಡದ ಸನ್ನಿವೇಶದ ಭೀಕರತೆ -ಹೆತ್ತವರ ಸಂಕಟ ತೊಡೆಯಲು ಸಾಗರದ ನೀರೂ ಸಾಲದಾಯಿತು.

ಕೋಳೂರು ಶಂಕರಪ್ಪ ಓರ್ವ ಧೀಮಂತ ವಿದ್ಯಾರ್ಥಿ ಚಳವಳಿಕಾರ. ಅಂದಿನ ಹೋರಾಟದಲ್ಲಿ ಮಿಳಿತಗೊಂಡು ತನುಮನಗಳನ್ನು ಅರ್ಪಿಸಿದ ಯುವಚೇತನ ಸಮೂಹಕ್ಕೆ ಶಂಕರಪ್ಪ ಪ್ರಾತಿನಿಧಕವೆನಿಸುತ್ತಾರೆ. ಇಂತಹ ಚೇತನಾರ್ಪಣೆಗಳ ಫಲವೇ ನಾವಿಂದು ಅನುಭವಿಸುತ್ತಿರುವ ಸ್ವಾತಂತ್ರ್ಯ .ಇದರ ಬೆಲೆಯರಿಯ ಬೇಕಾದರೆ ದೇಶವು ಮತ್ತೊಮ್ಮೆ ಪಾರತಂತ್ರ್ಯಕ್ಕೆ ಒಳಗಾಗಬೇಕೇನೋ? ಇಂತಹ ಧೀಮಂತನನ್ನು ದೇಶಸೇವೆಯಲ್ಲಿ ಕಳಕೊಂಡ ಕುಟುಂಬಕ್ಕೆ ಸ್ವಾತಂತ್ರ್ಯೋತ್ತರ ಭಾರತವು ಯಾವ ಮನ್ನಣೆಯನ್ನು ನೀಡಲಿಲ್ಲ. ಕನಿಷ್ಠಪಕ್ಷ ಪಿಂಚಣಿ ಸೌಲಭ್ಯವೂ ದೊರಕಲಿಲ್ಲ. ಇದಲ್ಲವೇ ವಿಪರ್ಯಾಸದ ಪರಮಾವಧಿ.

ಸದ್ಯಕ್ಕೆ ಕೋಳೂರಿನ ಒಡನಾಡಿ ಮುಖಂಡರು ಶಂಕರಪ್ಪನ ಹೆಸರಿನಲ್ಲಿ ಜಲ ಸಂಗ್ರಹಾಗಾರವೊಂದನ್ನು ಸ್ಥಾಪಿಸಿದ್ದಾರೆ. ಕೃಷ್ಣರಾಜನಗರದ ರೇಡಿಯೊ ಮೈದಾನದಲ್ಲಿ ಶಂಕರಪ್ಪನವರ ಸ್ಮಾರಕವೊಂದರ ನಿರ್ಮಾಣವಾಗಿದೆ. ಪ್ರತಿವರ್ಷದ ಆಗಸ್ಟ್ ೧೫ರಂದು ತಾಲೂಕು ಶಂಕರಪ್ಪನವರನ್ನು ಸ್ಮರಿಸುತ್ತದೆ.

ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸಬೇಕು. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ಉದ್ಧಾರವಾಗುತ್ತಾಳೆ.

ಬಿಎಂಶ್ರೀ

ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು.

ನೆಹರೂಜಿ

ಕಾನೂನು ಕತ್ತೆ

ಎ. ಟಿ. ಗೌರೀಶಂಕರ
"ಶ್ರೀ ಶೈಲ" ಪಿಂಟೋ ಲೇನ್ ಕ್ರಾಸ್ ರಸ್ತೆ
ಕರಂಗಲ್ಪಾಡಿ
ಮಂಗಳೂರು ೫೭೫ ೦೦೩

ನಿಜ ಬದುಕಿನಿಂದ ಆಯ್ದ ಒಂದು ನಿದರ್ಶನ

ಆಂಗ್ಲ ಭಾಷೆಯಲ್ಲಿ ಕಾನೂನಿನ ಅಸಂಬದ್ಧತೆಯ ಕುರಿತು ಕಾನೂನು ಕತ್ತೆ ಎಂಬ ಮಾತಿದೆ. ಸಮಾಜಶಾಸ್ತ್ರದ ನಿಯಮಗಳನ್ನು ಅನ್ವಯಿಸುವಾಗ ಅಥವಾ ಅರ್ಥವಿಸುವಾಗ ಸಂದಿಗ್ಧತೆಯುಂಟಾಗುವುದು ಅಪರೂಪವಲ್ಲ. ಕಾನೂನು ಒಂದು ಸಮಾಜಶಾಸ್ತ್ರವಾಗಿದ್ದು ಅದರ ನಿಯಮಗಳೂ ಅಂಥ ಸಂದಿಗ್ಧತೆಗೆ ಅಪವಾದವಲ್ಲ. ಕೆಲವೊಂದು ಚಾರಿತ್ರಿಕ ಶಾಸ್ತ್ರಿಯ ಚೌಕಟ್ಟನ್ನು ಬಿಡಿಸಿಕೊಳ್ಳಲಾರದೆ ಕಾನೂನಿನ ಅರ್ಥ ಕತ್ತೆಯಾಗುವ ಸಂಭಾವ್ಯತೆ ಇದೆ. ಆದರೆ ವಿವೇಚನೆಯುಳ್ಳ ಸಮರ್ಥರು ಕಾನೂನು ಕತ್ತೆಯನ್ನು ಪಳಗಿಸಿ ದುಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರೆ. ಇತರರು ಕತ್ತೆಯನ್ನೇ ಕುದುರೆಯೆಂದು ಸಮರ್ಥಿಸಿ ವಾದ ಬೆಳೆಸುತ್ತಾರೆ. ಇವೆರಡಕ್ಕೂ ಕಾನೂನು ನಡೆದು ಬಂದ ದಾರಿಯಲ್ಲಿ ಸಾಕಷ್ಟು ನಿದರ್ಶನಗಳಿವೆ. ಕತ್ತೆಯನ್ನು ಪಳಗಿಸಿ ಕುದುರೆಯಾಗಿಸಿದ ನಿದರ್ಶನವೊಂದು ಮದರಾಸು ಉಚ್ಚ ನ್ಯಾಯಾಲಯದ ತೀರ್ಪೊಂದರಲ್ಲಿ ಕಾಣಬಹುದು. (ಎಐಆರ್ ೧೯೫೧ ಮದರಾಸು ೪೬೧).

ಆಂಗ್ಲ ಪದ್ಧತಿಯಲ್ಲಿ ಚಾರಿತ್ರಿಕವಾಗಿ ರೂಢಿಯರಲ್ಲಿ ಬೆಳೆದು ಬಂದ ಕಾನೂನಿನಲ್ಲಿ (ಕಾಮನ್ ಲಾ) ಟಾರ್ಟ್ ಎಂಬ ವಿಭಾಗವಿದೆ. ಇದು ಸಿವಿಲ್ ತಪ್ಪು, ಕ್ರಿಮಿನಲ್ ಅಪರಾಧವಲ್ಲ. ಇದರ ನಿವೃತ್ತಿ-ತಪ್ಪು ಮಾಡಿದವನಿಂದ ನೊಂದವನಿಗೆ ನಷ್ಟ ಪರಿಹಾರ ಪಾವತಿ, ಅಪರಾಧವಲ್ಲದ ಕಾರಣ ಶಿಕ್ಷೆ ಅಥವಾ ದಂಡನೆ ಇಲ್ಲ. ಉದಾ: ಸಿದ್ಧ ಉಡುಪಿನ ಉತ್ಪಾದನೆಯಲ್ಲಾದ ದೋಷದ ಕಾರಣ ಅದನ್ನು ಧರಿಸಿದವನಿಗೆ ಚರ್ಮರೋಗ ಬಂತು. ಉಡುಪಿನ ಉತ್ಪಾದಕರು ಟಾರ್ಟ್ ತಪ್ಪಿತಸರು. ಅವರು ಉಡುಪು ಧರಿಸಿ ರೋಗ ಬಂದವನಿಗೆ ನಷ್ಟ ಪರಿಹಾರ ಪಾವತಿಸತಕ್ಕದ್ದು. ಮಾನನಷ್ಟ ಪ್ರಕಟಣೆ, ಕೃತಿ ಚೌರ್ಯ, ಸೊತ್ತುಹಾನಿ, ದೈಹಿಕ ಹಿಂಸೆ, ಮಾನಸಿಕ ಕ್ಷೋಭೆ- ಸ್ಥಾನ-ಮಾನಕ್ಕೆ ಧಕ್ಕೆ, ಔದ್ಯೋಗಿಕ ನಷ್ಟ ಇತ್ಯಾದಿಗಳು ಟಾರ್ಟ್ ತಲೆಕಟ್ಟಿನಡಿಯಲ್ಲಿ ಬರುತ್ತವೆ. ಪ್ರಾರಂಭದಲ್ಲಿ ರೂಢಿಯಲ್ಲಿ ಬೆಳೆದು ಬಂದ ಈ ಕಾನೂನು ವಿಭಾಗ, ಅನಂತರ ಔದ್ಯೋಗಿಕ ಕ್ರಾಂತಿ, ಸರಕಾರದ ಸರ್ವೋದಯ ಧೋರಣೆ ಇತ್ಯಾದಿಗಳ ಕಾರಣ ಶಾಸಕಾಂಗ ರೂಪಿಸಿದ ವಿಶೇಷ ಕಾಯದೆಗಳ ನಿಯಂತ್ರಣಕ್ಕೆ ಒಳಗಾಗಿದೆ. ಪರಿಣಾಮವಾಗಿ ಹಲವಾರು ಟಾರ್ಟ್‌ಗಳು-ಸಿವಿಲ್ ಕಾಯದೆಗಳ-ಪ್ರಕಾರ ತಪ್ಪು, ಅಲ್ಲದೆ ಕ್ರಿಮಿನಲ್ ಕಾಯದೆ ಪ್ರಕಾರ ಅಪರಾಧ ಎಂಬುದಾಗಿ ಎರಡು ವಿಧಗಳಲ್ಲಿ ಮುಂದುವರಿಸಲು ಸಾಧ್ಯತೆ ಇದೆ. ಉದಾ: ಮಾನನಷ್ಟ-ಸಿವಿಲ್ ವ್ಯವಹರಣೆಯಂತೆ ನಷ್ಟ ಪರಿಹಾರ ಪಡೆಯಬಹುದು; ಅಲ್ಲದೆ ಕ್ರಿಮಿನಲ್ ದಾವೆಯಂತೆ ಶಿಕ್ಷೆಗೆ ಗುರಿಪಡಿಸಬಹುದು. ಅಂತೆಯೇ ಕೃತಿ ಸ್ವಾಮ್ಯ ಉಲ್ಲಂಘನೆ. ಇಂದಿನ ದಿನಗಳಲ್ಲಿ ಟಾರ್ಟ್ ವಿಭಾಗ ಬಹಳ ವಿಪುಲವಾಗಿ ಬೆಳೆದಿದೆ.

ಈ ಲೇಖನದ ವಸ್ತು ಹೆಂಗಸನ್ನು ಲೈಂಗಿಕವಾಗಿ ಕೆಡಿಸುವ ಟಾರ್ಟ್ ಅಥವಾ ತಪ್ಪು ಇದು ಲೈಂಗಿಕ ಬಲತ್ಕಾರವಲ್ಲ. ಲೈಂಗಿಕ ಬಲಾತ್ಕಾರವೆಂದರೆ, ಹೆಂಗಸಿನ ಒಪ್ಪಿಗೆ ಇಲ್ಲದ ಅತಿಕ್ರಮಣ; ಲೈಂಗಿಕವಾಗಿ ಕೆಡಿಸುವ ಟಾರ್ಟ್‌ನಲ್ಲಿ ಅವಳ ಒಪ್ಪಿಗೆ ಇಂಗಿತ. ಇದೊಂದು ಆಂಗ್ಲ ಕಾಯದೆಯನ್ನು ಭಾರತದ ಸಮಾಜದಲ್ಲಿ ಅನ್ವಯಿಸಿದಾಗ ಉಂಟಾಗುವ ವಿಪರ್ಯಾಸದ

ಅರಿವಿಲ್ಲದೆ ಉಳಿದಿರುವ ಕಾನೂನು ಕತ್ತೆ. ಸುಮಾರು ಐವತ್ತು ವರ್ಷಗಳ ಹಿಂದೆ ಆಗಿನ ಮದರಾಸು ಆಧಿಪತ್ಯಕ್ಕೆ ಸೇರಿದ್ದ ನೆಲ್ಲೂರಿನಲ್ಲಿ ನಡೆದ ಪ್ರೇಮ ಪ್ರಕರಣ ಈ ಲೇಖನಕ್ಕೆ ಸಂಬಂಧಿಸಿದ ಟಾರ್ಟಿನ ಮೂಲವಸ್ತು. ಡೇನಿಯಲ್ ಮತ್ತು ಅವನ ಪ್ರೇಯಸಿ ಮರಿಯಮ್ಮ ಭಾರತೀಯ ಕ್ರೈಸ್ತರು. ಮರಿಯಮ್ಮ ದೈಹಿಕವಾಗಿ ಪ್ರಬುದ್ಧಳಾಗಿದ್ದರೂ ಹದಿನಾರು- ಹದಿನೇಳರ ಅಪ್ರಾಪ್ತ ವಯಸ್ಕಳು. ಡೇನಿಯಲ್ ಇಪ್ಪತ್ತೊಂದು ವರ್ಷ ದಾಟಿದ ಪ್ರಬುದ್ಧ. ''ದೇವರಾಣೆಗೂ ನಿನ್ನನ್ನು ನಾನು ವರಿಸುತ್ತೇನೆ'' ಎಂದು ಡೇನಿಯಲ್ ನೀಡಿದ ವಚನದ ಆಧಾರದಲ್ಲಿ ಅವನೊಡನೆ ಮೋಜಿನ ಕಾಲ ಕಳೆಯಲು ಮರಿಯಮ್ಮ ಸಮ್ಮತ್ತಿಸಿದಳು. ಮೋಜಿನ ದಿನಗಳು ಬಹುಬೇಗ ಉರುಳಿದುವು. ತನ್ನ ಕಾಲು ಜಾರಿದ ಅರಿವು ಮರಿಯಮ್ಮಳಿಗಾಗುವಾಗ, ಮೋಜು ಅಂತ್ಯವಾಗಿತ್ತು. ಡೇನಿಯಲ್ ಗಂಭೀರವಾಗಿ ವ್ಯಾವಹಾರಿಕ ಮಾತುಗಳನ್ನಾಡಲು ಶುರು ಮಾಡಿದ. ಮೋಜಿನ ದಿನಗಳ ಕುರಿತು, ಅಷ್ಟರಲ್ಲೇ ಅಂಕುರಿಸಿದ್ದ ಮರಿ ಡೇನಿಯಲ್ ಮಾತ್ರ ಅಂತಃಸಾಕ್ಷಿ. ಸರಸದ ದಿನಗಳು ಸರಿದು ವಿರಸ ಶುರುವಾಯಿತು. ದೊಡ್ಡ ಡೇನಿಯಲ್ ಮರಿಡೇನಿಯಲ್‌ನನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಈ ಹಿಂದೆ ನೀಡಿದ ವಚನಕ್ಕೆ ''ನಿನ್ನನ್ನು ದೇವರಾಣೆಗೂ ವಿವಾಹವಾಗಲಾರೇನು'' ಎಂಬ ತಿದ್ದುಪಡಿ ಮಂಡಿಸಿದ. ಮರಿಯಮ್ಮನ ತಂದೆ ತಾಯಿ ಡೇನಿಯಲ್‌ನ ತಂದೆತಾಯಿಯಂದಿರಲ್ಲಿ ದೂರು ಸಲ್ಲಿಸಿದರು. ''ಒಡೆದ ಹಾಲಿಗೆ ನಾವು ಜವಾಬ್ದಾರರಲ್ಲ'' ಎಂಬ ನಿಲುವು ಅವರದು. ಕೊನೆಗೆ ಅಪ್ರಾಪ್ತ ವಯಸ್ಕಳಾದ ಮರಿಯಮ್ಮಳ ಪರವಾಗಿ ಅವಳ ತಾಯಿ ರಕ್ಷಕಳ ನೆಲೆಯಲ್ಲಿ ನೆಲ್ಲೂರು ಮುನ್ಸೀಫ್ ಕೋರ್ಟಿನಲ್ಲಿ ಡೇನಿಯಲ್ ವಿರೋಧ ದಾವೆ ಹೂಡಿದಳು. ಮರಿಯಮ್ಮಳನನ್ನು ಲೈಂಗಿಕವಾಗಿ ಕೆಡಿಸಿದ ತಪ್ಪು ಬಗ್ಗೆ ಡೇನಿಯಲ್ ನಷ್ಟ ಪರಿಹಾರ ನೀಡಬೇಕೆಂದು ನಿವೃತ್ತಿ ಕೋರಿದರು. ಅಲ್ಲದೆ, ಲೈಂಗಿಕವಾಗಿ ಕೆಡಿಸಿದ ತಪ್ಪಿನನ್ವಯ ದಾವೆಯನ್ನು ಮುಂದುವರಿಸುವುದು ಯಾವುದೇ ಕಾರಣಕ್ಕಾಗಿ ಅಸಾಧ್ಯವಾದರೆ, ಪರ್ಯಾಯವಾಗಿ, ವಿವಾಹವಾಗುವ ವಚನಭಂಗ ಮಾಡಿದ ನೆಲೆಯಲ್ಲಿ ನಷ್ಟ ಪರಿಹಾರ ನೀಡಬೇಕೆಂದೂ ಪ್ರಾರ್ಥಿಸಿದ್ದರು. ಪ್ರಾರ್ಥಿಸಿದ ನಷ್ಟದ ಮೊತ್ತ ಒಂದು ಸಾವಿರ ರೂಪಾಯಿ. ಹಣದುಬ್ಬರ ಸೊನ್ನೆಯಾಗಿದ್ದು ರೂಪಾಯಿಗೆ ಪೂರ್ಣ ಹದಿನಾರಾಣೆ ಬೆಲೆಯಿರುತ್ತಿದ್ದ ಸುಭಿಕ್ಷದ ದಿನಗಳಾದ್ದರಿಂದ ಅದೊಂದು ದೊಡ್ಡ ಮೊತ್ತವೆಂದು ಪರಿಗಣಿಸಲಾಗಿತ್ತು.

ಅವರಿಬ್ಬರು ಪ್ರೇಮಿಗಳಾಗಿದ್ದರು. ಅಲ್ಲದೆ ಢಾಣಾ ಡಂಗುರವಾಗಿ ಏಕಾಂತ ದಿನಗಳನ್ನು ಕಳೆದಿದ್ದಾರೆಂದೂ, ಪರಿಣಾಮವಾಗಿ ಪ್ರಕೃತಿ ತನ್ನ ಕೆಲಸ ಮಾಡಿದೆ ಎಂದೂ ರುಜುಪಡಿಸಲು ಮರಿಯಮ್ಮಳಿಗೆ ಬಹಳ ಕಷ್ಟವಾಗಲಿಲ್ಲ. ಆದರೆ ಅವಳ ಮುಂದಿನ ಸಮಸ್ಯೆ ಕಾನೂನಿಗೆ ಸಂಬಂಧಿಸಿದ್ದು. ಅವಳು ಕೇಳಿದ ಮುಖ್ಯ ನಿವೃತ್ತಿ ಲೈಂಗಿಕವಾಗಿ ಕೆಡಿಸಿದತಪ್ಪು ಎಂಬುದರ ಮೇಲೆ; ಪರ್ಯಾಯ ನಿವೃತ್ತಿ ವಿವಾಹ ವಚನ ಭಂಗ. ಲೈಂಗಿಕವಾಗಿ ಕೆಡುಸುವ ತಪ್ಪು- ಆಂಗ್ಲ ಪರಂಪರೆಯ ರೂಢಿ ಕಾಯದೆಯ (ಕಾಮನ್‌ಲಾ) ಭಾರತೀಯ ಪಳಯುಳಿಕೆ. ಈ ಪಳೆಯುಳಿಕೆ ತತ್ವದಂತೆ ಕೆಡಿಸಿಕೊಂಡವಳು ಸ್ವತಃ ನಷ್ಟಪರಿಹಾರ ಕೇಳಲು ಅನರ್ಹಳು. ಅಥವಾ ಹಕ್ಕು ಇಲ್ಲದವಳು. ಏಕೆಂದರೆ ಈ ತರದ ಲೈಂಗಿಕ ಸಂಬಂಧದಲ್ಲಿ ಹೆಣ್ಣಿನ ಒಪ್ಪಿಗೆ ಇಂಗಿತವಿದೆ ಎಂಬುದು ಕಾನೂನು ತತ್ವದ ಅಭಿಮತ. ಅಂಥಾ ಹೆಂಗುಸು ಯಾರಲ್ಲಾದರೂ ಸೇವಕಿಯಾಗಿದ್ದರೆ, ಅವಳ ಲೈಂಗಿಕ ಚಟುವಟಿಕೆಯ ಪರಿಣಾಮ ಗರ್ಭಿಣಿಯಾದುದರಿಂದ ಯಜಮಾನನ ಕೆಲಸಗಳನ್ನು ಪೂರೈಸಲು ಅವಳಿಗೆ ಸಾಧ್ಯವಾಗದ್ದರಿಂದ ಯಜಮಾನನಿಗಾಗುವ ಆರ್ಥಿಕ ನಷ್ಟವನ್ನು ಯಜಮಾನ ಪಡೆಯಬಹುದು. ಇದರ ತಾತ್ಪರ್ಯ್ಯವೇನೆಂದರೆ-ಹೆಂಗಸನ್ನು ಕೆಡಿಸುವುದು ತಪ್ಪಲ್ಲ.

ಏಕೆಂದರೆ ಕೆಡಿಸಿಕೊಳ್ಳಲು ಅವಳ ಸಮ್ಮತಿ ಇಂಗಿತ. ಆದರೆ ಅವಳನ್ನು ಕೆಲಸಕ್ಕೆ ಹಚ್ಚಿದ ಯಜಮಾನನಿಗೆ ಅದರಿಂದಾಗುವ ನಷ್ಟವನ್ನು ಕೆಡಿಸಿದ ಗಂಡಸು ಪಾವತಿಸತಕ್ಕದ್ದು. ಇದೊಂದು ಕಾನೂನು ನಿರ್ಮಿಸುವ ಮಿಥ್ಯೆ (ಲೀಗಲ್ ಫಿಕ್ಷನ್). ಈ ತತ್ವದಂತೆ ಅಂಥ ಸಂದರ್ಭಗಳಲ್ಲಿ ನಷ್ಟ ಪರಿಹಾರದ ದಾವೆಯನ್ನು ಆ ಹೆಂಗಸನ್ನು ಕೆಲಸಕ್ಕೆನೇಮಿಸಿದ ಯಜಮಾನ ಮಾತ್ರ ಹೂಡ ಬಹುದಾಗಿದೆ. ಹೆಂಗಸು ನಿರುದ್ಯೋಗಿ ಯಾದರೆ ಅವಳ ತಂದೆತಾಯಂದಿರು -ಅವಳು ನಮ್ಮಲ್ಲಿ ಮನೆ ಕೆಲಸ, ಗದ್ದೆ ಕೆಲಸ ಇತ್ಯಾದಿ ಮಾಡುತ್ತಿದ್ದಳು,ಹಾಗಾಗಿ ಅವಳು ನಮ್ಮ ಸೇವಕಿ, ನಮಗೆ ಆರ್ಥಿಕವಾಗಿ ನಷ್ಟವಾಗಿದೆ-ಎಂದು ವಾದ ಮುಂಡಿಸಿ ಆರ್ಥಿಕನಷ್ಟ ಕೇಳಿ ದಾವ ಹೂಡಬೇಕಾ ಗಿದೆ. ಆದರೆ ಮರಿಯಮ್ಮಳ ತಾಯಿ ಈ ಕ್ರಮದಲ್ಲಿ ದಾವಾ ಪತ್ರ ತಯಾರಿಸಿ ಹಾಜರು ಪಡಿಸಿರಲಿಲ್ಲ. ಮತ್ತು ವಾದವನ್ನೂ ಮುಂಡಿಸಿರ ಲಿಲ್ಲ.

ಪರ್ಯಾಯ ನಿವೃತ್ತಿಯನ್ನು ಇನ್ನು ಪರೀಕ್ಷಿಸೋಣ:

ವಿವಾಹವಾಗುತ್ತೇನೆಂದು ಡೇನಿಯಲ್ ನೀಡಿದ ವಚನ, ಮತ್ತು ಮರಿಯಮ್ಮ ಅದನ್ನು ಸ್ವೀಕರಿಸಿದ್ದು-ಇದೊಂದು ಕಾನೂನು ಪ್ರಕಾರದ ಒಪ್ಪಂದ. ಈ ಒಪ್ಪಂದವನ್ನು ಡೇನಿಯಲ್ ಮುರಿದಿರುವುದರಿಂದ ನಷ್ಟ ಪರಿಹಾರ ನೀಡಲು ಅವನು ಬದ್ಧ. ಆದರೆ ಡೇನಿಯಲ್ ಪರ ವಕೀಲರ ವಾದದಂತೆ ಇಲ್ಲೊಂದು ಒಡಕಿದೆ. ಭಾರತದ ಒಪ್ಪಂದ ಕಾಯದೆ ಪ್ರಕಾರ ಪ್ರಾಯ ಪ್ರಬುದ್ಧರಲ್ಲದವರು ಮಾಡುವ ಒಪ್ಪಂದ ಅಸಿಂಧು. ಅದನ್ನು ನ್ಯಾಯಾಲಯ ಮಾನ್ಯ ಮಾಡಲಾರದು. ಅದನ್ನು ಜಾರಿಗೊಳಿಸಲು ಕಾಯದೆ ಸಹಕರಿಸದು. ಮರಿಯಮ್ಮಳು ಪ್ರಾಯ ಪ್ರಬುದ್ಧಳಲ್ಲವಾದ ಕಾರಣ ಡೇನಿಯಲ್ ನೀಡಿದ ವಚನವನ್ನು ಅವಳು ಸ್ವೀಕರಿಸಲಾರಳು. ಕಾಯದೆ ಪ್ರಕಾರದ ಒಪ್ಪಂದ ಅಸ್ತಿತ್ವಕ್ಕೆ ಬರಲೇ ಇಲ್ಲ ಅಸ್ತಿತ್ವದಲ್ಲಿಲ್ಲದ ಅಥವಾ ಅಸಿಂಧುವಾ ಒಪ್ಪಂದವನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಕಾರಣ ಪರ್ಯಾಯ ನಿವೃತ್ತಿಯಡಿಯಲ್ಲೂ ನಷ್ಟ ಪರಿಹಾರ ಸಿಗಲಾರದು. ಇಂತಿದೆ ಡೇನಿಯಲ್ ಪರ ಸಮರ್ಥನಾ ವಾದ.

ಉಚ್ಚನ್ಯಾಯಾಲಯದ ತೀರ್ಪಿನ ವರದಿ ಯಿಂದ ಕಂಡು ಬರುವಂತೆ, ನೆಲ್ಲೂರ ಮುನ್ಸೀಫರು ಕೂದಲು ಸೀಳುವ ನಾಜೂಕಿನ ವಾದಗಳನ್ನು ವಿಶೇಷ ಗಮನಿಸಲಿಲ್ಲ. ಅವರ ನಿಲುವು ನೇರ ಮತ್ತು ಸ್ಪಷ್ಟ. ಮುಗ್ಧ ಬಾಲಿ ಯನ್ನು ನಂಬಿಸಿ ಡೇನಿಯಲ್ ಕೆಡಿಸಿದ್ದರಿಂದ ಅವನು ನಷ್ಟ ಪರಿಹಾರ ಪಾವತಿಸತಕ್ಕದ್ದು ಆಂಗ್ಲ ಪಳೆಯುಳಿಕೆ ಕಾಯದೆ ಅಥವಾ ಭಾರತದ ನಿರ್ವೀರ್ಯ ಒಪ್ಪಂದ ಕಾಯದೆಗಳ ಕುರಿತು ತಲೆಗೆಡಿಸಿಕೊಳ್ಳದೆ, ನೇರವಾಗಿ ಡೇನಿಯಲ್ ಐನೂರು ರೂಪಾಯಿ ಪರಿಹಾ ವಾಗಿ ಮರಿಯಮ್ಮಳಿಗೆ ಪಾವತಿಸ ತಕ್ಕದ್ದೆಂದೂ ಅವಳ ಕೋರ್ಟು ಖರ್ಚುಗಳನ್ನೂ ಅವನೆ ತೆರತಕ್ಕದ್ದೆಂದು ವಿಧಿಸಿದರು. ಡೇನಿಯಲ್ ಜಿಲ್ಲಾ ನ್ಯಾಯಾಧೀಶರ ಸಮಕ್ಷಮ ಮೇಲ್ಮನವಿ ಸಲ್ಲಿಸಿದನು. ಡೇನಿಯಲ್ ವಿವಾಹ ವಚನ ಭಂಗ ಮಾಡಿದ್ದು ತಪ್ಪು, ಅದುದರಿಂದ ಐನೂರು ರೂಪಾಯಿ ನಷ್ಟಪರಿಹಾರವಾಗಿ ತೆರತಕ್ಕದ್ದು ಅಲ್ಲದೆ,ಕೋರ್ಟು ಖರ್ಚುಗಳನ್ನೂ ಅವನೆ ತೆರತಕ್ಕದ್ದು -ಎಂಬುದಾಗಿ ಪರ್ಯಾಯ ವಾದದ ನೆಲೆಯಲ್ಲಿ ತೀರ್ಪು ನೀಡಿದರು. ಹೆಣ್ಣನ್ನು ಕೆಡಿಸಿದ ಟಾರ್ಟ್ ಕುರಿತಾದ ವಾದ ಈ ದಾವೆಯಲ್ಲಿ ಅಪ್ರಸ್ತುತ. ಏಕೆಂದರೆ, ಪರ್ಯಾಯ ವಾದವನ್ನು ಸ್ವೀಕರಿಸಿದರೆ, ಮುಖ್ಯ ನಿವೃತ್ತಿಯ ಕುರಿತಾದ ವಾದವನ್ನು ವಿಮರ್ಶಿಸಿ, ಇತ್ಯರ್ಥ ಪಡಿಸುವ ಆವಶ್ಯಕತೆ ಇರುವುದಿಲ್ಲ- ಎಂಬ ನಿಲುವು ತಳೆದು ಮುಖ್ಯ ಪ್ರಶ್ನೆಯ ಕುರಿತು ಯಾವುದೇ ನಿಶ್ಚಿತ ಅಭಿಪ್ರಾಯ ನೀಡ

ಜಾರಿಕೊಂಡರು - ಜಿಲ್ಲಾನ್ಯಾಯಾಧೀಶರು. ಡೇನಿಯಲ್ ಮದರಾಸು ಉಚ್ಚನ್ಯಾಯಾಲಯದ ಸಮಕ್ಷಮ ಮೇಲ್ಮನವಿ ಸಲ್ಲಿಸಿದ. ನ್ಯಾಯಮೂರ್ತಿ ರಾಘವರಾವ್ ಎಂಬುವರ ಸಮಕ್ಷಮ ಮೇಲ್ಮನವಿ ತೀರ್ಮಾನಕ್ಕಾಗಿ ಬಂತು. ಹೆಣ್ಣನ್ನು ಕೆಡಿಸುವ ಟಾರ್ಟ್ ಕಾನೂನಿನ ಚಾರಿತ್ರಿಕ ಬೆಳವಣಿಗೆ ಎಲ್ಲಾ ಹಂತಗಳಲ್ಲೂ ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾ ಅದರ ನೆಲೆ ಭಾರತದಲ್ಲಿ ಹೇಗಿದೆ - ಎಂದು ಅಧಿಕೃತವಾಗಿ ತೀರ್ಪಿನಲ್ಲಿ ವಿವರಿಸಿದ್ದಾರೆ. ಕಾನೂನಮ್ಮನ ಗುಡಿಯ ಕತ್ತಲೆಯ ಮೂಲೆಗಳಲ್ಲಿ ಅಂಟಿದ್ದ ಬಲೆಗಳನ್ನು ಉಡುಗಿ ತೊಲಗಿಸಿ ಸ್ವಚ್ಛಪಡಿಸುತ್ತಾ ಆಂಗ್ಲ ಪಳೆಯುಳಿಕೆಗೆ ಭಾರತದ ಸಮಾಜದಲ್ಲಿ ಸ್ಥಾನವಿಲ್ಲವೆಂದು ತೀರ್ಮಾನ ಮಾಡುತ್ತಾರೆ. ಹಾಗಿದ್ದರೂ, ಕೆಡಿಸಿಕೊಳ್ಳಲು ಹೆಂಗಸಿನ ಸಮ್ಮತಿ ಇಂಗಿತವಾಗಿರುವುದರಿಂದ ಅವಳು ನಷ್ಟ ಪರಿಹಾರ ಕೇಳಲು ಅನರ್ಹಳೆಂಬ ಅಭಿಪ್ರಾಯ ಪಟ್ಟರು. ಕೆಡಿಸಿಕೊಂಡ ಹೆಂಗಸಿನ ಬಗ್ಗೆ ಯಜಮಾನರು ತಮಗಾದ ನಷ್ಟ ಕೇಳಿ ದಾವೆ ಹೂಡತಕ್ಕದ್ದೆಂದು ತೀರ್ಪಿನಲ್ಲಿ ಇಂಗಿತವಾದ ಸೂಚನೆಇತ್ತರು. ಈ ಮೊದಲು ಪ್ರಸ್ತಾವಿಸಿದ ಪರ್ಯಾಯವಾದವನ್ನು ಮಾನ್ಯ ಉಚ್ಚನ್ಯಾಯಾ ಲಯ ಸ್ವೀಕರಿಸಿ ಡೇನಿಯಲ್ ವಿವಾಹ ವಚನಭಂಗ ಮಾಡಿರುವುದರಿಂದ ನಷ್ಟ ಪರಿಹಾರ ಮತ್ತು ಅವಳಿಗೆ ಕೆಳಗಿನ ಕೋರ್ಟುಗಳ ಖರ್ಚುಗಳನ್ನು ಸಹ ತೆರತಕ್ಕದ್ದೆಂದು ವಿಧಿಸಿತ್ತು. ಅಪ್ರಾಪ್ತ ವಯಸ್ಕಳು ಮಾಡಿದ ಒಪ್ಪಂದವನ್ನು ಜಾರಿ ಮಾಡಲಾಗುವುದಿಲ್ಲ ಎಂಬ ಆಕ್ಷೇಪಣೆ ಯನ್ನು ವಿಶ್ಲೇಷಿಸುತ್ತಾ, ವೈವಾಹಿಕ ಒಪ್ಪಂದಕ್ಕೆ ಸದ್ರಿ ಆಕ್ಷೇಪಣೆ ಅನ್ವಯಿಸುವುದಿಲ್ಲವೆಂದು ನ್ಯಾಯಾಧೀಶರು ಅಭಿಪ್ರಾಯಪಡುತ್ತಾರೆ. ಅಂತೂ ಕೆಳಗಿನ ನ್ಯಾಯಾಲಯಗಳ ತೀರ್ಪುಗಳನ್ನು ಅಂಶತಃ ಎತ್ತಿ ಹಿಡಿದು ಮರಿಯಮ್ಮಳಿಗೆ ಐನೂರು ರೂಪಾಯಿ ನಷ್ಟ ಪರಿಹಾರ ನೀಡಬೇಕೆಂಬುದನ್ನು ಸ್ಥಿರೀಕರಿಸಿದರು.

ಈ ಲೇಖಕನಿಗನಿಸುವಂತೆ ಮಾನ್ಯ ಉಚ್ಚನ್ಯಾಯಾಲಯ ಇಷ್ಟು ಸುತ್ತು ಬಳಸಿನ ವಾದ ಬೆಳೆಸುವ ಅಗತ್ಯವಿರಲಿಲ್ಲ. ಮರಿಯಮ್ಮ ಅಪ್ರಾಪ್ತ ವಯಸ್ಕಳಾಗಿದ್ದುದರಿಂದ ಡೇನಿಯಲ್‌ಗೆ ಸಮ್ಮತಿ ನೀಡಲು ಅಶಕ್ತಳು. ಅಪ್ರಾಪ್ತ ವಯಸ್ಕನ ಒಪ್ಪಂದ ಅಸಿಂಧುವಾಗಿರುವಂತೆಯೇ, ಅವನು / ಅವಳ ಸಮ್ಮತಿಯೂ ಶೂನ್ಯ. ಆ ಕಾರಣದಿಂದ ಡೇನಿಯಲ್ ಮರಿಯಮ್ಮಳನ್ನು ಕೆಡಿಸಿದ ತಪ್ಪು ಮಾಡಿರುತ್ತಾನೆ - ಎಂಬ ನೇರ ತೀರ್ಮಾನಕ್ಕೆ ಬರಬಹುಧಿತ್ತು. ಈ ನೇರ ತೀರ್ಮಾನದಿಂದ ಕಾನೂನು ಕತ್ತೆಯನ್ನು ಮರಿಯಮ್ಮಳ ಮಟ್ಟಿಗೆ ದೂರವಿಡಬಹುದಿತ್ತು.

ಮರಿಯಮ್ಮ ಜಯ ಹೊಂದಿದರೂ ಕಾನೂನು ಕತ್ತೆ ಇಂದಿಗೂ ಜೀವಂತವಿದೆ. ವಯಸ್ಕ ಹೆಂಗೆಸು ತನ್ನನ್ನು ಲೈಂಗಿಕವಾಗಿ ಕೆಡಿಸಿದವನ ವಿರೋಧ ನಷ್ಟ ಪರಿಹಾರ ಕೇಳಿ ದಾವೆ ಹೂಡುವ ಸಂದರ್ಭದಲ್ಲಿ ಹಲವಾರು ಸುಳ್ಳು ವಾದಗಳನ್ನು ಮಂಡಿಸಬೇಕಾಗುತ್ತದೆ. ಅವಳ ಯಜಮಾನ ಅಥವಾ ತಂದೆ/ತಾಯಿ, ಹೆಂಗಸು ಕೆಲಸದಾಕೆ ಎಂದೂ, ಅವಳು ಗರ್ಭಿಣಿಯಾಗಿರುವುದರಿಂದ ಕೆಲಸ ಮಾಡಲಿಲ್ಲವೆಂದೂ, ಅದರಿಂದ ತಮಗೆ ನಷ್ಟವಾಗಿದೆಯೆಂದೂ ಸುಳ್ಳಿನ ಕಂತೆಗಳ ವಾದ ಮಂಡಿಸಿ ರುಜುವಾತು ಪಡಿಸಬೇಕಾಗುತದೆ. ಇದಕ್ಕೆ ತಪ್ಪಿದರೆ ಕಾನೂನು ಕತ್ತೆಯಿಂದೆ ಒದೆಯಿಸಿಕೊಳ್ಳುವುದು ಅನಿವಾರ್ಯ. ನಮ್ಮ ಸಂಸತ್ತು ಈ ವಿಚಾರ ಚಿಂತಿಸಿದರೆ ಟಾರ್ಟ್ ಕಾನೂನಿನ ತಿದ್ದುಪಡಿ ಮಾಡಬಹುದು. ತಿದ್ದುಪಡಿಯಂತೆ ಕಾನೂನು ಕತ್ತೆಯ ತಳಿ ಪರಿವರ್ತನೆಯಾಗುವ ತನಕ ಬಡಪಾಯಿ ಹೆಂಗುಸು ಕತ್ತೆ ಸವಾರಿ ಮಾಡದೆ ನಿರ್ವಾಹವಿಲ್ಲ. ಸವಾರಿ ಯಶಸ್ವಿಯೇ? ಅಲ್ಲವೇ? ಎಂಬುದನ್ನು ಕುರುಡು ನ್ಯಾಯ ದೇವತೆ ತ್ರಾಸು ಹಿಡಿದು ತುಲನೆ ಮಾಡಿ ನಿರ್ಧರಿಸಿ ತೀರ್ಪು ನೀಡುತ್ತದೆ.

ವಿಜ್ಞಾನ ಸಾಕ್ಷರತೆಯ ಅಗತ್ಯ

ಅಡ್ಯನಡ್ಕ ಕೃಷ್ಣಭಟ್
೧೩೮೬ ಎಂಟನೆಯ ಮುಖ್ಯ ರಸ್ತೆ
ವಿಜಯನಗರ ಎರಡನೆಯ ಹಂತ
ಮೈಸೂರು ೫೭೦ ೦೦೭

ಸಾಮಾನ್ಯ ಮನುಷ್ಯನೊಬ್ಬನ ಕನಿಷ್ಠ ಅವಶ್ಯಕತೆ ಗಳಾವುವು? ಈ ಪ್ರಶ್ನೆಗೆ ಯಾರೇ ನೀಡ ಬಹುದಾದ ಸಿದ್ಧ ಉತ್ತರ-''ಹಸಿವೆ ನೀಗಲು ಅನ್ನ, ನೆರಳಿಗಾಗಿ ಸೂರು, ಮಾನ ಕಾಪಾಡಲು ಬಟ್ಟೆ ''. ನೆಲ, ಗಾಳಿ, ನೀರು ಪ್ರಕೃತಿದತ್ತ. ಅಶನ, ವಸತಿ, ವಸನಗಳನ್ನು ಮನುಷ್ಯ ತಾನೇ ದುಡಿದು ಪಡೆಯಬೇಕು. ಆದರೆ ಒಬ್ಬ ಒಳ್ಳೆಯ ಪ್ರಜೆ ಯಾಗಿ ಬದುಕಲು ಇಷ್ಟು ಸಾಕೆ? ಸಾಲವು ಅಕ್ಷರಾಭ್ಯಾಸದೊಂದಿಗೆ ಓದಿ ಬರೆಯುವ ಸಾಮರ್ಥ್ಯ ಕೂಡ ಇರಬೇಕು. ಅಷ್ಟೆ ಅಲ್ಲ, ಇಂದು ವೈಯಕ್ತಿಕ ಮತ್ತು ಸಾಮೂಹಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ವಿಜ್ಞಾನ-ತಂತ್ರ ವಿದ್ಯೆಯ ಅರಿವು, ಅದರ ಪರಿಣಾಮದ ಪ್ರಜ್ಞೆ, ಇವೂ ಇರಬೇಕು ಯಾವುದೇ ದೇಶದ ಜನರ ಜೀವನದ ಗುಣಮಟ್ಟವನ್ನು ಅಳೆಯುವಾಗ ಸಾಕ್ಷರತೆ ಒಂದು ಮಾನದಂಡ. ಜನರ ಜೀವನ ಸಂಪನ್ನತೆಯನ್ನು ಸಮೀಕ್ಷಿಸುವಾಗ ಅವರ 'ವೈಜ್ಞಾನಿಕಸಾಕ್ಷರತೆ' ಯೂ ಒಂದು ಮಾನದಂಡ'.

ಯಾವ ಗೊತ್ತುಗುರಿಗಳನ್ನು ಇಟ್ಟುಕೊಂಡು ವೈಜ್ಞಾನಿಕ ಸಾಕ್ಷರತೆಯನ್ನು ನಿರ್ಣಯಿಸಬೇಕು? ಇದರ ಚಿಂತನೆಯೇ ಸಾಮನ್ಯರಿಗೆ ಬೇಕಾದ ವಿಜ್ಞಾನದ ವ್ಯಾಪ್ತಿಯನ್ನು ಗುರುತಿಸಬಲ್ಲದು.

ಉಳಿದ ಪ್ರಾಣಿಗಳಿಗಿಲ್ಲದ ಕೆಲವು ವಿಶಿಷ್ಟ ಗುಣಗಳು ಮನುಷ್ಯನಿಗಿವೆ ಎಂಬ ಮಾತೇನೂ ಹೊಸತಲ್ಲ. ಯಾವುದೇ ವಿಚಾರದಲ್ಲಿ ನಡೆಸುವ ಚಿಂತನೆ ಹಾಗೂ ಅದರ ಆಧಾರದಲ್ಲಿ ನಡೆಸುವ ಯೋಜನೆ, ತಾನು ಪಡೆದ ಮಾಹಿತಿ ಮತ ಪರಿಣತಿಯನ್ನು ಇತರ ವ್ಯಕ್ತಿಗಳಿಗೆ ಅಥವ ಇತರ ಜಾಗಗಳಿಗೆ ವರ್ಗಾಯಿಸುವ ಸಾಮರ್ಥ್ಯ ತನ್ನ ಇಂದ್ರಿಯಗಳ ಸಾಮರ್ಥ್ಯವನ್ನು ಲಂಬಿಸ ವಂಥ ಸಾಧನಗಳ ನಿರ್ಮಾಣ, ಸಾಮಾಜಿ ಸಂಬಂಧಗಳನ್ನು ಕಲ್ಪಿಸಿ ಅವನ್ನು ಊರ್ಜಿ ಗೊಳಿಸಲು ಸಂಸ್ಥೆಗಳನ್ನು ಕಟ್ಟಿ ಬದುಕಿ ದುರ್ಧರತೆಯನ್ನು ಕಡಿಮೆ ಮಾಡುವುದು ತಾನಿರುವ ಪರಿಸರವನ್ನು ತನಗೆ ಬೇಕಾದಂ ಬದಲಾಯಿಸುವುದು-ಇವೆಲ್ಲ ಮನುಷ್ಯನಿ ವಿಶೇಷವಾದಂತವು. ಇವುಗಳಿಂದಾಗಿಯೆ ವಿಜ್ಞಾನ ತಂತ್ರವಿದ್ಯೆಗಳು ಅವನಿಗೆ ದಕ್ಕಿದುವು

ಜೀವ ಮತ್ತು ಅಜೀವ ವಸ್ತುಗಳೆಲ್ಲವನ್ ಒಳಗೊಂಡ ನಮ್ಮ ಸುತ್ತಲಿನ ಪ್ರಪಂಚದ ಬಗ ವಸ್ತು ನಿಷ್ಠವಾದ, ಅನುಭವ ಮತ್ತು ಪ್ರಯೋಗ ಗಳಿಂದ ದೃಢೀಕರಿಸಲ್ಪಡಬಹುದಾದ ಜ್ಞಾನ ವನ್ನು ವಿಜ್ಞಾನ ಎನ್ನುವುದುಂಟು. ಇತಿಹಾಸ ಪೂರ್ವಕಾಲದಲ್ಲಿ ಆರಂಭವಾದ ವಿಜ್ಞಾನದ ಬೆಳವಣಿಗೆಗೆ ಸಾಮಾನ್ಯರ ವೀಕ್ಷಣೆ ಮತ್ತು ಅನುಭವಗಳೇ ಆಧಾರ. ಬೆಂಕಿಯ ಉತ್ಪಾದನ ಮತ್ತು ಚಕ್ರದ ತಯಾರಿ ಹಿಂದಿನಿಂದಲೇ ಇದ ಮನುಷ್ಯನ ಉಪಜ್ಞಾ (invention ಸಾಮರ್ಥ್ಯಕ್ಕೆ ಉದಾಹರಣೆಗಳು. ಚೀನದ ಮತ್ತು ಷಾ ಎಂಬ ನದಿಗಳ ಮಧ್ಯೆ ಇರು ಹೆನಾನ್ ಪ್ರಾಂತದ ಜಿಆಹು ಎಂಬಲ್ಲಿ ಕೊಕ್ಕರೆಯ ರೆಕ್ಕೆ ಮೂಳೆಗಳಲ್ಲಿ ತೂತುಗಳನ್ ಕೊರೆದು ರಚಿಸಿದ ಒಂಬತ್ತು ಸಾವಿ ವರ್ಷಗಳ ಹಿಂದಿನ ಕೊಳಲುಗಳು ಸಿಕ್ಕಿವೆ ಅವನ್ನು ಉಪಯೋಗಿಸಿ ಸಪ್ತಸ್ವರಗಳನ

ಪಡಿಸಬಹುದಾಗಿದೆ. ಅಷ್ಟೇ ಅಲ್ಲ, ೪೩ಸಾವಿರ ವರ್ಷಗಳ ಹಿಂದಿನ ಮೂಳೆಯ ಕೊಳಲೊಂದು ನಿಯಾಂಡರ್ತಲ್ ಮಾನವರ ಪ್ರಾಚೀನ ಶಿಬಿರವೊಂದರಲ್ಲಿ ದೊರೆತಿದೆ. ಸ್ವರಕ್ಕೂ ಸದ್ದಿಗೂ ಇರುವ ವ್ಯತ್ಯಾಸವನ್ನು ಮನವರಿಕೆ ಮಾಡಿಕೊಂಡು ಮಧುರ ಭಾವನೆಗಳನ್ನು ನೀಡಬಲ್ಲ ಸ್ವರಗಳನ್ನು ಉತ್ಪಾದಿಸಲು ಮನುಷ್ಯರು ಅಂದಿಗೇ ಸಮರ್ಥರಾದರು. ನಾಲ್ಕೈದು ಸಾವಿರವರ್ಷಗಳ ಹಿಂದಿನ ಮೆಸಪೊಟೇಮಿಯ ದಲ್ಲಿ ಖಗೋಲ ವೀಕ್ಷಣೆ, ರಾಸಾಯನಿಕ ವಸ್ತುಗಳ ಪತ್ತೆ, ರೋಗಲಕ್ಷಣ, ಗಣಿತಕೋಷ್ಟಕ ಇವಕ್ಕೆ ಸಂಬಂಧಿ ಸಿದ ದಾಖಲೆಗಳನ್ನು ಮಣ್ಣಿನ ಬಿಲ್ಲೆಗಳಲ್ಲಿ ಕೆತ್ತಿದರು. ಸಾಮಾನ್ಯರ ಅನುಭವದ ಪಾತಳಿಯಿಂದ ಬೆಳೆಯುತ್ತಾ ಹೋದ ವೈಜ್ಞಾನಿಕ ಚಟುವಟಿಕೆಗಳು ಹೀಗೆ ಹೆಚ್ಚು ವ್ಯವಸ್ಥಿತವಾದಂತೆ ಆ ಚಟುವಟಿಕೆಗಳು ಹೆಚ್ಚುದುಡಿಮೆಯನ್ನೂ ಕಾಲವನ್ನೂ ಬೇಡಿದುವು. ಶ್ರಮ ವಿಭಜನೆ ಪ್ರವೃತ್ತಿಗೆ ಅನುಗುಣವಾಗಿ ವಿಜ್ಞಾನ ಚಟುವಟಿಕೆ ಗಳನ್ನೇ ನಡೆಸಲು ಮುಂದೆ ಬಂದವರು ಆ ಕ್ಷೇತ್ರದಲ್ಲಿ ಪರಿಣಿತ ರಾದರು. ಇತರ ವೃತ್ತಿಗಳನ್ನು ಅವಲಂಬಿಸಿ ಮುಂದುವರಿದವರು ವಿಜ್ಞಾನ ಕ್ಷೇತ್ರದಲ್ಲಿ 'ಸಾಮಾನ್ಯ'ರಾದರು. ವಸ್ತು-ವಿದ್ಯಮಾನಗಳನ್ನು ಅಧ್ಯಯಿಸಿ ಪರಿಣಿತ ರಾದ ಕೆಲವೇ ಮಂದಿ ತಮ್ಮ ಪರಿಣತಿ ಯನ್ನು ಸಾಮಾನ್ಯ ಜನರಲ್ಲಿ ಭಯಭಕ್ತಿ ಗಳನ್ನು ಹುಟ್ಟಿಸುವ ಪವಾಡ ಪ್ರದರ್ಶನಕ್ಕೆ ಬಳಸಿದ್ದುಂಟು. ಎಷ್ಟೋ ಬಾರಿ ಪವಾಡಗಳೆಂದು ಪ್ರದರ್ಶಿಸುತ್ತಿದ್ದುದು ಕೈಚಳಕ ಅಥವಾ ಗುಪ್ತ ಕಾರ್ಯಾಚರಣೆಗಳ ಫಲವಾದ 'ಯಕ್ಷಿಣಿ' ಅಥವಾ 'ಜಾದೂ'ವನ್ನು. ಇದರ ಜಾದೂವನ್ನು ಪವಾಡ ಎಂದು ಪ್ರದರ್ಶಿಸುವ ಪರಂಪರೆ ನಮ್ಮ ದೇಶದಲ್ಲಿ ಇಂದಿಗೂ ಇದೆ. ಪವಾಡ ಪ್ರದರ್ಶನ ಎಂಬುದು ಕೇವಲ ಜಾದೂ ಪ್ರದರ್ಶನ ಎಂದು ತಿಳಿದು ಮನೋರಂಜನೆ ಪಡೆಯುವಷ್ಟರ ಆಳಕ್ಕೆ ಇರುವ ವಿಜ್ಞಾನ ಇಂದು ಸಾಮಾನ್ಯರ ಪಾಲಿಗಿರಬೇಕು.

೧೬ನೇ ಶತಮಾನದಲ್ಲಿ ಪ್ರಾಕೃತಿಕ ವಿದ್ಯಮಾನಗಳ ಮೂಲಭೂತ ಕಾರಣಗಳನ್ನು ಪೂರ್ವ ಯೋಜಿತ ಪ್ರಯೋಗಗಳಿಂದ ತಿಳಿದು ದೃಢೀಕರಿ ಸಲು ಗೆಲಿಲಿಯೊ ಪ್ರಯತ್ನಿಸಿದ. ವೈಜ್ಞಾನಿಕ ವಿಧಾನ ಎಂದು ಈಗ ನಾವು ಕರೆಯುವ ಕ್ರಮ ಅವನಿಂದ ಮೊದಲಾಯಿತೆನ್ನಬಹುದು. ಗುರುತ್ವದ ಸಾರ್ವತ್ರಿಕ ನಿಯಮ, ವಿದ್ಯುತ್ಕಾಂತೀಯ ಸಿದ್ಧಾಂತ ವಿಕಾಸವಾದ, ಸಾಪೇಕ್ಷತಾ ಸಿದ್ಧಾಂತ, ಪರಮಾಣು ಸಿದ್ಧಾಂತ, ಕ್ವಾಂಟಂ ಸಿದ್ಧಾಂತ, ಅನುವಂಶತಾ ನಿಯಮಗಳು ಅನಂತರ ಬೆಳಕು ಕಂಡುವು. ಎಂಜಿನಿಯರಿಂಗಿನ ವಿವಿಧ ಶಾಖೆ ಗಳೂ ತಂತ್ರವಿದ್ಯೆಯ ವಿವಿಧ ಕ್ಷೇತ್ರಗಳೂ ತ್ವರಿತ ಗತಿಯಿಂದ ಬೆಳೆದುವು. ಇವುಗಳ ಒಟ್ಟು ಪರಿಣಾಮ ಜನರ ದೈನಂದಿನ ಬದುಕಿನ ಮೇಲೂ ಆಯಿತು. ಈ ಪರಿಣಾಮವನ್ನು ಉಣ್ಣುತ್ತಿರುವು ದರಿಂದಲೇ ಪರಿಣಿತರೆನ್ನಿಸದ ಸಾಮಾನ್ಯರಿಗೂ ವಿಜ್ಞಾನ ತಂತ್ರವಿದ್ಯೆಯ ಕನಿಷ್ಠ ಅರಿವು ಬೇಕಾಗಿದೆ. ಸಾಮಾನ್ಯ ಪ್ರಜೆಗಳ ಹತ್ತಾರು ವ್ಯವಹಾರಗಳ ಬಗ್ಗೆ ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರಿಗಳಿಗೂ ಪ್ರಜಾಪ್ರತಿನಿಧಿಗಳಿಗೂ ಈ ಅರಿವು ಅಗತ್ಯ.

ವಿಜ್ಞಾನ ಮತ್ತು ತಂತ್ರವಿದ್ಯೆಯ ಕನಿಷ್ಠ ಅರಿವನ್ನೇ ವೈಜ್ಞಾನಿಕ ಸಾಕ್ಷರತೆ ಎಂದು ಕರೆಯುವುದುಂಟು. ಇದು ಸೈದ್ಧಾಂತಿಕ ಮತ್ತು ವ್ಯಾವಹಾರಿಕ ನೆಲೆಗಳೆರಡಕ್ಕೂ ಸಂಬಂಧಪಟ್ಟಿದೆ. ಅದರ ಹೂರಣವನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು.

ಯಾವುದೇ ಚಲನೆಯಿರಲಿ ಅದು ನಿಶ್ಚಿತ ನಿಯಮಗಳಿಗೆ ಅನುಗುಣವಾಗಿ ನಡೆಯುವುದು.

ಭೂಮಿಯಂಥ ಗ್ರಹ, ಸೌರವ್ಯೂಹ, ಬ್ರಹ್ಮಾಂಡಗಳೆಲ್ಲ ವಿಶ್ವದ ಕ್ರಮಬದ್ಧ ಸಂರಚನೆಯ ವಿವಿಧ ಹಂತಗಳು. ಶಕ್ತಿಯು ಅವ್ಯಯ. ಆದರೆ ಅನುಭೋಗಕ್ಕೆ ಸಿಗುವ ಹೆಚ್ಚು ಉಪಯುಕ್ತ ರೂಪಗಳಿಂದ ಅನುಪಯುಕ್ತ ರೂಪಗಳಿಗೆ ಅದು ಹರಿಯುತ್ತದೆ. ವಿದ್ಯುತ್ ಮತ್ತು ಕಾಂತತ್ವ ಒಂದೇ ವಿದ್ಯಮಾನದ ಎರಡು ಮುಖಗಳು. ಪದಾರ್ಥದ ಕನಿಷ್ಠರೂಪ ಕಣ, ಶಕ್ತಿಯ ಕನಿಷ್ಠರೂಪ ಕ್ವಾಂಟಂ. ಪರಮಾಣಗಳ ಅಳವಡಿಕೆಯನ್ನು ಅವಲಂಬಿಸಿ ಪದಾರ್ಥದ ಗುಣ ವರ್ತನೆಗಳಿರುತ್ತವೆ. ಕಣಗಳಲ್ಲಿ ಅತ್ಯಂತ ಮೂಲಭೂತವಾದಂಥವು ಲೆಪ್ಟಾನ್ ಮತ್ತು ಕ್ವಾರ್ಕಗಳು. ಇಲೆಕ್ಟ್ರಾನ್-ಒಂದು ಲೆಪ್ಟಾನ್ ನಮ್ಮ ಆಯುಮಾನದಲ್ಲಿ ನಕ್ಷತ್ರಗಳು ಶಾಶ್ವತವೇನೋ ಎಂದು ಅನಿಸುತ್ತದೆ. ಆದರೆ ಅದಕ್ಕೂ ಹುಟ್ಟು ಸಾವುಗಳುಂಟು. ವಿಶ್ವವೆ ವಿಸ್ತರಿಸುವಂತೆ ತೋರುತ್ತದೆ. ಪ್ರಾಕೃತಿಕ ನಿಯಮಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವುದಿಲ್ಲ. ಅಂದರೆ ಅವು ಸಾರ್ವತ್ರಿಕವೇ ಹೊರತು ವ್ಯಕ್ತಿ ಅವಲಂಬಿತವಲ್ಲ. ನೆಲ, ಜಲ, ಪರ್ವತ, ಕಣಿವೆಗಳೇ ಮೊದಲಾದ ಭೂಲಕ್ಷಣಗಳು ಸದಾ ಬದಲಾಗುತ್ತಿರುತ್ತವೆ. ಎಲ್ಲ ಜೀವಿಗಳಲ್ಲೂ ಜೀವ ಪ್ರಕ್ರಿಯೆಗೆ ಕಾರಣವಾದ ಕೋಶಗಳಿವೆ. ನೀರು, ನೈಟ್ರೋಜನ್, ಕಾರ್ಬನ್ ಗಳಿಗೆ ಸಂಬಂಧಿಸಿದ ವಿದ್ಯಮಾನಗಳು ಆವರ್ತ ರೀತಿಯಲ್ಲಿ ಹರಿಯುತ್ತವೆ. ಎಲ್ಲ ಜೀವಿಗಳಿಗೂ ಸಾಮಾನ್ಯವಾದ ಅನುವಂಶತಾ ಸಂಕೇತವಿದೆ. ಎಲ್ಲ ಜೀವಿಗಳೊಳಗೂ ಪರಸ್ಪರ ಆಂತರಿಕ ಸಂಬಂಧವಿದೆ. ಅಂದರೆ ಗಣ್ಯವೆಂದು ಕೊಂಡಿರುವ ಮನುಷ್ಯನೂ ನಗಣ್ಯ ಎನಿಸಬಹುದಾದ ಕೀಟವೂ ಸಂಬಂಧರಹಿತವಾದುವಲ್ಲ.

ವಿಜ್ಞಾನದ ಅನ್ವಯಗಳಿಗೆ ಎರವಾಗುವ ವ್ಯಕ್ತಿ ತಿಳಿದುಕೊಳ್ಳಬೇಕಾದ ಬೇರೆ ಅಂಶಗಳೂ ಇವೆ.

ವಿದ್ಯುತ್ತು ಹರಿಯುವ ತಂತಿಗೂ ಹರಿಯದ ತಂತಿಗೂ ತೋರಿಕೆಗೆ ವ್ಯತ್ಯಾಸ ಕಾಣುವುದಿಲ್ಲ. ಆದರೆ ಅವುಗಳ ವರ್ತನೆಗಳೇ ಬೇರೆ ಬೇರೆ. ವಿದ್ಯುತ್ತು ಪ್ರವಹಿಸುವ ತಂತಿಯ ಸ್ಪರ್ಶ- ಅದು ನೀರಿನಂಥ ಮಾಧ್ಯಮದ ಮೂಲಕವಾದರೂ -ಮಾರಕವಾಗಬಹುದು. ಸುರಕ್ಷತೆಗಾಗಿ ಅಳವಡಿಸುವ ಫ್ಯೂಸ್‌ನ ದಪ್ಪಕ್ಕೂ ಅದು ಸಾಗಗೊಡುವ ವಿದ್ಯುತ್ ಪ್ರವಾಹದ ಪ್ರಮಾಣಕ್ಕೂ ಸಂಬಂಧವಿದೆ. ಡಿಡಿಟಿ ಎಂಬುದು ಕೀಟನಾಶಕವೇನೋ ನಿಜ. ಆದರೆ ಜೀವವ್ಯವಸ್ಥೆಯೊಳಗೆ ಪ್ರವೇಶಿಸಿದ ಮೇಲೂ ಅದರ ಅಣುಗಳು ಶಿಥಿಲವಾಗುವುದಿಲ್ಲ. ಹಿಂದೆ ಒಂದೇ ಬ್ಲೇಡನ್ನು ಹಲವರ ಗಡ್ಡ ಬೋಳಿಸಲು ಕ್ಷೌರಿಕರ ಅಂಗಡಿಯಲ್ಲಿ ಬಳಸುತ್ತಿದ್ದುದುಂಟು. ಎಚ್ ಐವಿ (ಏಡ್ಸ್) ವೈರಸಿನ ಪ್ರಸಾರವನ್ನು ತಡೆಗಟ್ಟಲು ಈ ರೂಢಿಯನ್ನು ಕೈಬಿಡಬೇಕಾಗುತ್ತದೆ. ಪೋಖರಾನ್‌ನಲ್ಲಿ ಬೈಜಿಕ ಸ್ಫೋಟನವಾದಾಗ ಅದು ನಮ್ಮ ಬೈಜಿಕತಂತ್ರ ವಿದ್ಯೆಯ ಹಿರಿಮೆಗೆ ಧ್ಯೋತಕವಾಯಿತು. ಚಂದ್ರನಿಂದ ತಂದ ಕಲ್ಲಿನ ತುಂಡನ್ನು ಹಿಂದೆ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಪ್ರದರ್ಶಿಸಿದ್ದರಷ್ಟೆ? ಅದೇ ರೀತಿ ಸ್ಫೋಟನ ನಡೆಸಿದ ಜಾಗದ ಮಣ್ಣನ್ನು ದೇಶದ ವಿವಿಧೆಡೆಗಳಲ್ಲಿ ಪ್ರದರ್ಶಿಸಬಹುದೆಂಬ ಸೂಚನೆಯನ್ನು ಕೆಲವರು ನೀಡಿದರು. ಮನೆಯಂಗಳದ ಹಿಡಿಗೆ ಮಣ್ಣನ್ನಾದರೂ ಸಾಗಹಾಕಬಹುದು, ಆದರೆ ಪೋಖರಾನ್‌ನ ಹಿಡಿಮಣ್ಣು ಕೂಡ ಅಪಾಯಕಾರಿ ಎಂಬುದನ್ನು ಅವರು ತಿಳಿದು ಕೊಳ್ಳಲಿಲ್ಲ ! ೧೯೯೮ರಲ್ಲಿ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಲ್ಲಿ ಕೃಷಿಯಲ್ಲಾದ ಭಾರೀ ನಷ್ಟವನ್ನು ತಾಳಲಾರದ ಹಲವು ರೈತರು ಜೀವನದಲ್ಲಿ ಜುಗುಪ್ಸೆ ತಾಳಿ ಕೊನೆಯುಸಿರೆಳೆದರು. ತಾಜಾ ಕೀಟನಾಶಕಗಳು ಕಳಪೆ ಕೀಟನಾಶಕಗಳಿಂದ ಭಿನ್ನವೆಂದು

ಳಿಯಲು ಎಂಥ ಪರೀಕ್ಷೆ ಮಾಡಬೇಕು, ೀಟನಾಶಕಗಳನ್ನು ಯಾವ ಪ್ರಮಾಣದಲ್ಲಿ ುಪಯೋಗಿಸಬೇಕು ಎಂಬುದರ ಖಚಿತ ಮಾಹಿತಿಯಿಲ್ಲದೆ ಅವರ ಬಿಕ್ಕಟ್ಟು ತೀವ್ರ ವಾಯಿತು. ನೀರನ್ನು ಹೆಚ್ಚು ಬಿಸಿ ಮಾಡಲು ಉರಿ ಹೆಚ್ಚಿಸುತ್ತೇವೆ, ತಿಂಡಿಯ ಖಾರ ಹೆಚ್ಚಿಸಲು ಹೆಚ್ಚು ಮೆಣಸಿನಪುಡಿ ಹಾಕುತ್ತೇವೆ. ಲೋಕ ಜ್ಞಾನದ ಿದೇ ಅಳತೆಗೋಲಿನಿಂದ ಹೆಚ್ಚು ರಾಸಾಯನಿಕ ಗಳನ್ನು ಬಳಸಿ ಕೀಟ ನಿರ್ಮೂಲನದ ತೀವ್ರತೆ ಯನ್ನು ಹೆಚ್ಚಿಸಬಹುದೆಂಬ ಅನಿಸಿಕೆ ಮಾತ್ರ ವಾಸ್ತವತೆಗಿಂತ ದೂರವಾಗಿರುತ್ತದೆ. ವಾಣಿಜ್ಯ ಬೆಳೆಗಳನ್ನು ಹೆಚ್ಚು ಬೆಳೆಸಿ ಹಣಸಂಪಾದನೆ ಮಾಡಬಹುದೆಂಬ ಆಸೆಯಿಂದ ತೂತುಬಾವಿ ಗಳನ್ನು ಕೊರೆದು ಅಂತರ್ಜಲವನ್ನು ಬಳಸುವ ಪದ್ಧತಿ ಎಲ್ಲೆಲ್ಲೂ ಹೆಚ್ಚುತ್ತಿದೆ. ಅಂತರ್ಜಲದ ಸೀಮಿತ ಸಂಗ್ರಹ, ಕುಸಿದು ಹೋಗುವ ಜಲಮಟ್ಟದಿಂದಾಗಿ ಮೇಲ್ಮೈ ಮಣ್ಣು ಶುಷ್ಕ ವಾಗುವುದು, ತೂತು ಬಾವಿಗಳ ಮರುಪೂರಣ- ಈ ಬಗ್ಗೆ ಕನಿಷ್ಠ ತಿಳುವಳಿಕೆ ಇಲ್ಲದಿರು ವುದರಿಂದ ತೂತುಬಾವಿಗಳೇ ವ್ಯರ್ಥವಾಗುವ ಸಾಧ್ಯತೆ ಹೆಚ್ಚುತ್ತದೆ. ರೆಫ್ರಿಜರೇಟರ್, ಟಿವಿ, ರೇಡಿಯೊ, ಅನಿಲ ಸ್ಟವ್, ದ್ವಿಚಕ್ರವಾಹನ, ಸೌರತಾಪಕ, ಫೋನು, ಧ್ವನಿವರ್ಧಕಗಳಂಥ ಅನೇಕ ಸಾಧನಗಳ- ಬಳಕೆ ನಗರ ಮತ್ತು ಗ್ರಾಮೀಣ ಪ್ರದೇಶಗಳೆಂಬ ಭೇದವಿಲ್ಲದೆ ಇಂದು ಸಾಮಾನ್ಯವಾಗಿದೆ. ಇವನ್ನು ಸುರಕ್ಷಿತ ವಾಗಿ, ಹಿತವಾಗಿ ಬಳಸುವುದನ್ನು ತಿಳಿದು ಉಪಯೋಗಿಸುವುದಕ್ಕೂ ಹಾಗೆ ತಿಳಿಯದೆ ಉಪಯೋಗಿಸುವುದಕ್ಕೂ ತುಂಬಾ ಅಂತರವಿದೆ. ನಾವು ಬಾಲ್ಯದ ಲಾಗಾಯ್ತು ಸ್ನಾನ, ಊಟ, ಉಡುಗೆ ತೊಡುಗೆಗಳ ಬಗ್ಗೆ ನಮ್ಮ ನಮ್ಮ ಮನೆಗಳ ಹಿನ್ನೆಲೆಯಲ್ಲಿ ಯುಕ್ತವಾದ ಅಭ್ಯಾಸ ಗಳನ್ನು ಬೆಳೆಸಿಕೊಳ್ಳುತ್ತೇವೆ. ಹಾಗೆಯೇ ಇದೀಗ ಆಧುನಿಕ ವಿಜ್ಞಾನ-ತಂತ್ರವಿದ್ಯೆಗಳಿಗೆ ವಿಶೇಷ ವಾದ ತಿಳುವಳಿಕೆ ಮತ್ತು ಅಭ್ಯಾಸಗಳನ್ನು ರೂಢಿಸಿ ಕೊಳ್ಳಬೇಕಾಗಿದೆ.

ದೇಶದ ಅಭಿವೃದ್ಧಿಗಾಗಿ ಹಲವು ಯೋಜನೆ ಗಳು ಕಾರ್ಯಗತವಾಗುತ್ತವೆ. ಆದರೆ ಅವು ಜನಹಿತವನ್ನು ಸಾಧಿಸಲಾರದೆಂಬ ಅಭಿಪ್ರಾಯಗಳೂ ಎದ್ದು ಕೆಲವು ಯೋಜನೆ ಗಳು ವಿವಾದಾಸ್ಪದವಾಗುತ್ತವೆ. ಗೃಹ ಬಳಕೆಗೂ ಉದ್ಯಮ ಗಳಿಗೂ ವಿದ್ಯುತ್ತಿನ ಬೇಡಿಕೆ ಹೆಚ್ಚುತ್ತಿದೆ. ಅದನ್ನು ಸರಬರಾಜು ಮಾಡಲು ವಿದ್ಯುತ್ ಉತ್ಪಾದನಾ ಸ್ಥಾವರಗಳನ್ನು ಕಟ್ಟಲು ಸರಕಾರ ಗಳು ಮುಂದಾಗುತ್ತವೆ. ಹರಿಯುವ ನದಿಗೆ ಅಣೆಕಟ್ಟು ಕಟ್ಟಿ ಪಡೆಯುವ ಜಲಶಕ್ತಿಯಿಂದಲೋ ಗಣಿಗಾರಿಕೆಯಿಂದ ಸಿಗುವ ಕಲ್ಲಿದ್ದಲಿನಿಂದಲೋ, ನ್ಯೂಕ್ಲಿಯರ್ ರಿಯಾಕ್ಟರ್‌ಗಳಲ್ಲಿ ಯುರೇನಿಯಂ- ಪ್ಲುಟೋನಿಯಮ್ ಧಾತುಗಳನ್ನು ಉಪಯೋ ಗಿಸಿಯೋ ಇಂಥ ಸ್ಥಾವರಗಳು ನಡೆಯುತ್ತವೆ. ದೊಡ್ಡ ದೊಡ್ಡ ಕಟ್ಟೆಗಳಿಂದ ಉಂಟಾಗುವ ಪರಿಸರನಾಶ ಮತ್ತು ನದೀ ಕಣಿವೆಯಲ್ಲಿ ವಾಸಿಸುವ ಜನರೇ ನಿರಾಶ್ರಿತರಾಗಿ ತಮ್ಮ ಜೀವನ ಶೈಲಿಯನ್ನು ಕಳೆದುಕೊಂಡು ಶಾಶ್ವತವಾಗಿ ನರಳುವುದು ಹೆಚ್ಚಿನ ನಷ್ಟವಲ್ಲವೆ? ಹಾಗೆಯೇ ಬೈಜಿಕ ಇಂಧನದ ಬಳಕೆಯ ಬಳಿಕ ಅದರ ವಿಲೇವಾರಿಯ ಬಗೆಗಾಗಲೀ ರಿಯಾಕ್ಟರ್ ಸಮೀಪ ವಾಸಿಸುವ ಜನರು ವಿಕಿರಣಕ್ಕೆ ಎರವಾಗುವ ಅಪಾಯದ ಬಗೆಗಾಗಲೀ, ಸರ್ವಸಮ್ಮತ ವ್ಯವಸ್ಥೆ ಇಲ್ಲವಷ್ಟೆ? ಇಂಥ ಸನ್ನಿವೇಶಗಳಲ್ಲಿ ಸರಕಾರದ ನಿರ್ಧಾರ ಸ್ವಹಿತಾಸಕ್ತಿಯಿಂದ ಶ್ರಮಿಸುವ ಗುಂಪುಗಳ ಪ್ರಭಾವಕ್ಕೆ ಒಳಗಾಗಬಾರದು. ಆಗ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸಲು ತಿಳುವಳಿಕೆಯ ಜನ ಇದ್ದರೆ ಮಾತ್ರ ವಸ್ತುನಿಷ್ಠ ನಿರ್ಧಾರ

ತೆಗೆದುಕೊಳ್ಳಲು ಸಾಧ್ಯ.

ರಾಷ್ಟ್ರೀಯ ಮಟ್ಟದಲ್ಲಿ ಅಥವಾ ಸಾಮೂಹಿಕವಾಗಿ ನಡೆಯುವ ವೈಜ್ಞಾನಿಕ ಕಾರ್ಯಕ್ರಮಗಳಿಗೆ ಸಾಮಾನ್ಯ ಜನರ ವೈಜ್ಞಾನಿಕ ಅರಿವು ಜೀವ ತುಂಬುತ್ತದೆ. ವೈಜ್ಞಾನಿಕ ಚಟುವಟಿಕೆಗಳು ಇಂದು ಕೇವಲ ಪ್ರಯೋಗ ಶಾಲೆಗಳಿಗಷ್ಟೇ ಸೀಮಿತವಾಗಿಲ್ಲ. ಉದಾಹರಣೆಗೆ ಭೂಮಿಯ ಜೀವ ವೈವಿಧ್ಯದ ಅಧ್ಯಯನ, ಪರಿಸರ ರಕ್ಷಣೆಯ ಒಟ್ಟೊಟ್ಟಿಗೆ ಸ್ಥಳೀಯವಾಗಿಯೂ ಜಾಗತಿಕವಾಗಿಯೂ ನಡೆಯಬೇಕಾದ ಪರಿಸರ ನಿರ್ವಹಣೆ, ಯಾವುದೇ ಒಂದು ತಾಣದಲ್ಲಿಯ ಜೀವ ದೃಶ್ಯದ ಅರಿವು-ಇವೆಲ್ಲ ಅಲ್ಪಸಂಖ್ಯೆಯ ಕಾರ್ಯನಿರತ ವಿಜ್ಞಾನಿಗಳಿಂದ ಮಾತ್ರ ನಡೆಯದು. ಜೀವವೈವಿಧ್ಯದ ದಾಖಲಾತಿ ಮತ್ತು ರಕ್ಷಣೆ ಎಲ್ಲ ಜಾಗಗಳಲ್ಲಿಯೂ ನಡೆದರೆ ಮಾತ್ರ, ಸಮಗ್ರವಾದೀತು. ಇದಕ್ಕೆ ಸಾವಿರಾರು ಸಾಮಾನ್ಯ ಜನರ ಸಹಕಾರ ಅಗತ್ಯ. ಜೀವಿಜಾತಿ ಎಂದರೇನು, ಜೀವಿಗಳ ವರ್ಗೀಕರಣ ಹೇಗೆ, ಯಾವುದೇ ಒಂದು ಜೀವಿಜಾತಿಯ ದಟ್ಟಣೆಯನ್ನು ಅಥವಾ ಸಂಖ್ಯೆಯನ್ನು ನಿಶ್ಚಿತ ಸಲೆಯಲ್ಲಿ ಅಂದಾಜು ಮಾಡುವ ಕ್ರಮ ಯಾವುದು ಮೊದಲಾದ ತಿಳುವಳಿಕೆ ಅವರಿಗೆ ಇರಬೇಕಾಗುತ್ತದೆ. ನಗರದ ಬಡಾವಣೆಗಳಲ್ಲಿ ಮಳೆ ನೀರು ಹರಿಯಲೆಂದು ಕಟ್ಟಿದ ಚರಂಡಿಗಳನ್ನೇ ಎಲ್ಲ ತರದ ತ್ಯಾಜ್ಯ ವಿಲೇವಾರಿಗೆ ಉಪಯೋಗಿಸುತ್ತಾರಲ್ಲ? ಇದು ಬರಿಯ ಲೋಕ ಜ್ಞಾನದ ಅಭಾವ ಅಥವಾ ನಾಗರಿಕ ಪ್ರಜ್ಞೆಯ ಅಭಾವ ಅಲ್ಲ. ಮಳೆನೀರಿನ ದಾರಿಯನ್ನು ತಡೆದರೆ ಏನಾಗಬಹುದೆಂಬುದರ ಅರಿವಿನ ಅಭಾವ ಕೂಡ. ಹಾಗೆ ನೋಡಿದರೆ ತ್ಯಾಜ್ಯಗಳ ವರ್ಗೀಕರಣ ಮತ್ತು ಅವುಗಳ ವಿಕೇಂದ್ರೀಕೃತ ವಿಲೇವಾರಿ, ಸೌರಶಕ್ತಿಯ ಬಳಕೆ, ಮಳೆನೀರಿನ 'ಕೊಯಿಲು', ಅಂತರ್ಜಲದ ಮರು ಪೂರಣವೇ ಮೊದಲಾದ ಜೀವನಾವಶ್ಯಕ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸಲು ಬೇಕಾದ ವಿಜ್ಞಾನದ ಮಾಹಿತಿ ಸಾಮಾನ್ಯರಿಗೆ ಸಿಗಬೇಕು.

ಆಧುನಿಕ ವಿಜ್ಞಾನದ ಹಲವು ಫಲಿತಾಂಶಗಳು ವೈಜ್ಞಾನಿಕ ವಿಧಾನವನ್ನು ಅನುಸರಿಸದುದರಿಂದ ಲಭಿಸಿದುವು. ವೀಕ್ಷಣೆ, ವಿಶ್ಲೇಷಣೆ, ಇದರಿಂದ ಹೊಮ್ಮುವ ಅನುಮಿತಿ ಅಥವಾ ತೀರ್ಮಾನ, ತೀರ್ಮಾನದ ಸಾರ್ವತ್ರಿಕತೆಗೆ ಆಧಾರವಾದ ಸಿದ್ಧಾಂತ. ಇದನ್ನು ದೃಢೀಕರಿಸಲು ನಡೆಸುವ ಪ್ರಯೋಗಗಳು, ಪ್ರಯೋಗದ ಫಲಿತಾಂಶಗಳಿಗೆ ಸರಿ ಹೊಂದುವಂತೆ ಸಿದ್ಧಾಂತದ ಮರುರೂಪಣೆ -ಇವೆಲ್ಲ ವೈಜ್ಞಾನಿಕ ವಿಧಾನದ ವಿವಿಧ ಹಂತಗಳು. ಈ ವಿಧಾನವನ್ನು ಅನುಸರಿಸು ವವರು ಅದನ್ನು ಅನುಸರಿಸುವ ಸೀಮಿತ ಅವಧಿಯಲ್ಲಾದರೂ ಒಂದು ವಿಶಿಷ್ಟ ಮನೋಪ್ರವೃತ್ತಿಯನ್ನು ಮೈಗೂಡಿಸಕೊಳ್ಳ ಬೇಕಾಗುತ್ತದೆ. ವಸ್ತು ಅಥವಾ ವಿದ್ಯಮಾನವೊಂದು ವಾಸ್ತವವಾಗಿ ಹೇಗೆ ಕಾಣಿಸಬಹುದೇ ಹಾಗೆ ನೋಡುವುದು. ತನ್ನದಕ್ಕೆ ಭಿನ್ನವಾದ ಅಭಿಪ್ರಾಯವಿದ್ದರೆ ಅದರ ತಿರುಳನ್ನು ತಿಳಿದು ಗೌರವಿಸುವುದು, ಹೊಸ ವೀಕ್ಷಣೆ ಅಥವಾ ದತ್ತಾಂಶಗಳ ನೆಲೆಯಲ್ಲಿ ಹಿಂದಿನ ತೀರ್ಮಾನವನ್ನು ಬದಲಿಸುವುದು, ವೈಜ್ಞಾನಿಕ ವಿಧಾನದಿಂದ ಪಡೆಯುವ ವಿವರಣೆ ಅಥವಾ ಚಿತ್ರಣ ತಾತ್ಕಾಲಿಕವಾದದ್ದು ಎಂದು ಬಗೆದು ಇನ್ನೂ ಹೆಚ್ಚು ವಾಸ್ತವ ಮತ್ತು ಸಮಗ್ರವಾದುದನ್ನು ಪ್ರತೀಕ್ಷಿಸುವುದು, ಅಧಿಕಾರವಾಗಲೀ ಆತ್ಮ ಪ್ರತಿಷ್ಠೆಯಾಗಲೀ ವಾಸ್ತವತೆಯನ್ನು ಮಸುಳಿಸ ಬಲ್ಲವೇ ಹೊರತು ಸತ್ಯವನ್ನು ತೋರಿಸವು ಎಂಬ ವಿನಯ, ಯಾವುದೇ ಪ್ರಶ್ನೆಗಳನ್ನು ಮುಚ್ಚಿಡದೆ ಉತ್ತರಗಳನ್ನು ಪಡೆಯುವ ತವಕ-ಇವೆಲ್ಲ

…ವೈಜ್ಞಾನಿಕ ವಿಧಾನದ ಅನುಸರಣೆಗೆ ಪ್ರೋತ್ಸಾಹಕ ವಾದ ಗುಣಗಳು. ವಿಜ್ಞಾನದ ಮುನ್ನಡೆಗೆ ಇವು ಸಹಾಯಕವಾದುದನ್ನೂ ಇವುಗಳಿಲ್ಲದ ಸಂದರ್ಭಗಳಲ್ಲಿ ವಿಜ್ಞಾನ ಹಿನ್ನಡೆದುದನ್ನೂ ಇತಿಹಾಸದಲ್ಲಿ ನಾವು ಮತ್ತೆ ಮತ್ತೆ ನೋಡುತ್ತೇವೆ. ಸಾಮಾನ್ಯರಿಗೆ ಸಿಗುವ ವಿಜ್ಞಾನ, ಈ ಗುಣಗಳ ಬೆಳವಣಿಗೆಗೆ ಕಿಂಚಿತ್ತಾದರೂ ಪ್ರಚೋದನೆ ನೀಡಬಹುದು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಒಬ್ಬ ಉತ್ತಮ ನಾಗರಿಕನಲ್ಲೂ ನಾವು ಅಪೇಕ್ಷಿಸಬಹುದಾದ ಗುಣಗಳಿವು.

ಒಮ್ಮೆ ನಾನು ಒಂದು ಸಂವಾದದಲ್ಲಿ ಭಾಗವಹಿಸುತ್ತಿದ್ದಾಗ ಸಭಾಸದರೊಬ್ಬರು ಪ್ರಶ್ನಿಸಿದ್ದರು; ''ಭೂಮಿಗೆ ಆಧಾರ ಯಾವುದು?'' ನಮಗೆ ನಮ್ಮ ಮನೆ ಮಠ-ಗಾಳಿ ನೀರುಗಳಿಗೆ ಭೂಮಿಯೇ ಆಧಾರ. ಆಧಾರ ಸಹಿತವಾದ ಬದುಕನ್ನೇ ಬದುಕಿದುದರಿಂದ, ಅಂತರಿಕ್ಷದಲ್ಲಿ ಭೂಮಿಗೂ ಏನಾದರೊಂದು ಆಧಾರ ಇರಬಹುದೆಂದೂ ಮನಸ್ಸು ಹುಡುಕ ತೊಡಗುತ್ತದೆ. ''ಭೂಮಿಗೆ ನಮ್ಮ ಮನಸ್ಸು ಆಶಿಸುವ ಮೂರ್ತ ಆಧಾರ ಇಲ್ಲ. ಆ ದೃಷ್ಟಿಯಿಂದ ಅದು ನಿರಾಧಾರ. ಸೂರ್ಯನ ಸುತ್ತಿನ ಚಲನೆಯೇ ಅದಕ್ಕಿರುವ ಆಧಾರ'' ಎಂದು ಉತ್ತರಿಸುವಾಗ ಅನೇಕರು ಅವಾಕ್ಕಾಗಿದ್ದರು. ಭೂಮಿಯು ನಿರಾಧಾರವಾಗುವುದರೊಂದಿಗೆ ನಾವೂ ನಿರಾಧಾರವಾಗುತ್ತಿದ್ದೇವೇನೋ ಎನ್ನುವ ವಿಚಿತ್ರ ಭಾವನೆಗೆ ಅವರು ಕ್ಷಣಿಕವಾಗಿಯಾದರೂ ತುತ್ತಾದರೆಂದು ನನಗನಿಸಿತು. ಇಂದ್ರಿಯಗಳು ಗ್ರಹಿಸುವುದಕ್ಕಿಂತಲೂ ಹೆಚ್ಚು ವಾಸ್ತವವಾದ ಸಂಗತಿ ವಿಜ್ಞಾನದಿಂದ ತಿಳಿಯುತ್ತದೆ! ದೇಶ- ಕಾಲಗಳಲ್ಲಿ ನಮ್ಮ ಇತಿಮಿತಿಯ ಅರಿವನ್ನೂ ಅದು ಹುಟ್ಟಿಸುತ್ತದೆ.

ಪರಿಣತರಿಗೆ ಅವರವರ ಕ್ಷೇತ್ರದಲ್ಲಿ ಹೇಗೆ ಜ್ಞಾನ ಬೇಕೋ ಸಾಮಾನ್ಯರಿಗೆ ಸಾಮಾನ್ಯ ಮಟ್ಟದ ವಿಜ್ಞಾನವಾದರೂ ಬೇಕು. ಸಾಮಾನ್ಯರು ಒಳ್ಳೆಯ ಪ್ರಜೆಗಳಾಗಲು ಅದು ಬೇಕು. ವೈಜ್ಞಾನಿಕ ಸಾಕ್ಷರತೆ ಯಿಂದ ಜನಸಾಮಾನ್ಯರ ಜೀವನ ಅರ್ಥಾತ್ ಸಮುದಾಯದ ಜೀವನ ಹೆಚ್ಚು ಅರ್ಥವಾಗುತ್ತದೆ, ಸಂಪನ್ನವಾಗುತ್ತದೆ. ಆದ್ದರಿಂದಲೇ ಸಾಮಾನ್ಯರಿಗೆ ವಿಜ್ಞಾನವನ್ನು ಕೊಂಡೊಯ್ಯುವಲ್ಲಿ ಸರಕಾರ, ಸ್ವಯಂ ಸೇವಾಸಂಸ್ಥೆಗಳು ಹಾಗೂ ಪ್ರಸಾರ ಮಾಧ್ಯಮಗಳು ವಹಿಸುವ ಪಾತ್ರ ಮಹತ್ವವಾದದ್ದು.



ರೊನಾಲ್ಡ್‌ರಾಸ್ : ಮಲೇರಿಯಾ ಒಗಟನ್ನು ಬಿಡಿಸಿದ ವಿಜ್ಞಾನಿ

ಎಂ.ಎಸ್.ಎಸ್.ಮೂರ್ತಿ
ಬಿ-೧೦೪, ಟೆರೇಸ್ ಗಾರ್ಡನ್ ಅಪಾರ್ಟ್‌ಮೆಂಟ್,
೨ನೇ ಮುಖ್ಯರಸ್ತೆ, ಬನಶಂಕರಿ, ೩ನೇ ಹಂತ,
ಬೆಂಗಳೂರು-೫೬೦ ೦೮೫

ಬೆಂಗಳೂರು ೧೮೯೦-೯೩
ವೇದನೆ ತುಂಬಿದಾ ಮೊಗಗಳ ಪ್ರಶ್ನೆಯೊಂದೆ-
ನಮ್ಮ ಯಾತನೆಗೆ ಪರಿಹಾರವೆಂದು ?
ಏನೆಂದುತ್ತರಿಸುವುದು ಒಗಟಾಗಿರುವೀ ಸಮಸ್ಯೆಗೆ ?
ಓ, ದೇವನೇ, ತೋರು ನೀ ಬೆಳಕು ಮುಚ್ಚಿ ಮುಸುಕಿದೀ ಮಾಯೆಗೆ
ಅವಿತು ಮರೆಯಲಿ ಕೊಲ್ಲುತಿರುವ ಈ ಕ್ರೂರಿಯಾ ಅಂತ್ಯಕೆ
ರೊನಾಲ್ಡ್ ರಾಸ್

ಮಳೆಗಾಲ ಬಂತೆಂದರೆ ಅದರ ಹಿಂದೆಯೇ ಮಲೇರಿಯಾ ಇಣುಕುತ್ತದೆ. ಶತಮಾನಗಳಿಂದ ಇದೇ ಪುನರಾವರ್ತನೆ. ಮನುಕುಲಕ್ಕೆ ಅಂಟಿರುವ ಅತಿಪುರಾತನ ಜಾಡ್ಯಗಳಲ್ಲಿ ಮಲೇರಿಯಾ ಒಂದು. ಕೆಲವೊಮ್ಮೆ ಭಯಂಕರವೂ ಹೌದು. ವಿಶ್ವವಿಜೇತ ಅಲೆಗ್ಸಾಂಡರ್ ಮಹಾಶಯನೇ ಇದಕ್ಕೆ ಮಣಿಯ ಬೇಕಾಯಿತಂತೆ.

ಮಲೇರಿಯಾಕ್ಕೆ ಕಾರಣವಾದ ಪರಾವಲಂಬಿ, ಅದರ ವಾಹಕವಾದ ಸೊಳ್ಳೆ ಮತ್ತು ಮನುಷ್ಯನಲ್ಲಿ ಅದರ ಜೀವನ ಚಕ್ರ ಇವುಗಳನ್ನು ಕಂಡು ಹಿಡಿದು ಈಗ ನೂರು ವರ್ಷಗಳೇ ಸಂದಿವೆ (೧೮೯೭-೯೮). ವೈದ್ಯವಿಜ್ಞಾನದಲ್ಲಿ ಇದೊಂದು ರೋಮಾಂಚಕ ಅಧ್ಯಾಯವೆಂದು ಪರಿಗಣಿತವಾಗಿದೆ. ಈ ಅಧ್ಯಯನ ನಡೆದದ್ದೂ ಭಾರತದಲ್ಲೇ-ಬೆಂಗಳೂರು, ಸಿಕಂದರಾಬಾದ್ ಮತ್ತು ಕಲ್ಕತ್ತ ನಗರಗಳಲ್ಲಿ. ಇದರ ಕಾರಣ ಪುರುಷ- ಅಂದಿನ ಇಂಡಿಯನ್ ಮೆಡಿಕಲ್ ಸರ್ವೀಸ್‌ನಲ್ಲಿ ಸೇವೆಸಲ್ಲಿಸುತ್ತಿದ್ದ ಬ್ರಿಟಿಷ್ ವೈದ್ಯ ರೊನಾಲ್ಡ್ ರಾಸ್ (೧೮೫೭-೧೯೩೨).

ಹತ್ತೊಂಬತ್ತನೆ ಶತಮಾನದ ಉತ್ತರಾರ್ಧ. ಕ್ಷಯ, ಕಾಲರ, ಪ್ಲೇಗ್ , ಮಲೇರಿಯಾ ಇತ್ಯಾದಿ ಉಷ್ಣವಲಯದ ಸೋಂಕು ಜಾಡ್ಯಗಳಿಗೆ ಏಷ್ಯ ಮತ್ತು ಆಫ್ರಿಕಾದ ವಸಾಹುತಗಳಲ್ಲಿ ಲಕ್ಷಗಟ್ಟಲೆ ತುತ್ತಾಗುತ್ತಿದ್ದರು. ಕ್ರಿ.ಶ.೧೮೮೦ರ ವೇಳೆಗೆ ಚಾರ್ಲ್ಸ್ ಲೂಯಿ ಅಲ್‌ಫಾನ್ಸ್ ಲೆವಿರಾನ್ ಎಂಬ ಫ್ರೆಂಚ್‌ವೈದ್ಯ, ಮಲೇರಿಯಾಕ್ಕೆ ಕಾರಣ ಪ್ಲಾಸ್ಮೊಡಿಯಂ ಎಂಬ ಏಕ ಕೋಶ ಪರಾವಲಂಬಿ ಜೀವಿ ಎಂಬುದನ್ನು ತಿಳಿದಿದ್ದ. ಮಲೇರಿಯಾ ಪೀಡಿತರ ಕೆಂಪುರಕ್ತಕಣಗಳಲ್ಲಿ ಈ ಪರಾವಲಂಬಿ ಗಳನ್ನು ಹೇರಳವಾಗಿ ನೋಡಿದ್ದ. ಆದರೆ ಮಲೇರಿಯಾ ಒಬ್ಬರಿಂದ ಮತ್ತೊಬ್ಬರಿಗೆ ಯಾವ ರೀತಿ ಹರಡುತ್ತದೆಂದು ಆತನಿಗೆ ತಿಳಿದಿರಲಿಲ್ಲ.

ಮಲೇರಿಯಾದಂತೆ ಮನುಷ್ಯನನ್ನು ಕಾಡುವ ಮತ್ತೊಂದು ರೋಗ ಫೈಲೇರಿಯಾ. ಇಂಗ್ಲೆಂಡಿನ ಸೇಂಟ್ ಬಾರ್‌ಥ್ಲೊಮ್ ಆಸ್ಪತ್ರೆಯ ಪ್ಯಾಟ್ರಿಕ್ ಮ್ಯಾನ್‌ಸನ್ ಎಂಬಾತ ಫೈಲೇರಿಯಾ ಕೂಡ ಒಂದು ವಿಧವಾದ ಪರಾವಲಂಬಿ ಜೀವಿಗಳಿಂದ ಉಂಟಾ ಗುವುದಲ್ಲದೆ; ಅದರ ಹರಡಿಕೆಗೆ ಕಾರಣ ಸೊಳ್ಳೆಗಳೆಂದು ಊಹಿಸಿದ್ದನು. ಇಟಲಿ ಮತ್ತು ಜರ್ಮನಿಯ ಇನ್ನೂ ಕೆಲವು ವಿಜ್ಞಾನಿಗಳು ಮಲೇರಿಯಾಕ್ಕೂ ಸೊಳ್ಳೆಗೂ ನಂಟು ಇರಬಹುದೆಂದು ಊಹಿಸಿದ್ದರು. ಆದರೆ ಇದರ ಬಗ್ಗೆ

ನಿರ್ದಿಷ್ಟ ತಿಳುವಳಿಕೆ ಇರಲಿಲ್ಲ. ಮಲೇರಿಯಾ ನಿಯಂತ್ರಣಕ್ಕೆ ಈ ತಿಳುವಳಿಕೆ ಅತ್ಯಂತ ಅವಶ್ಯ ವಾಗಿತ್ತು. ಈ ಸಂದರ್ಭದಲ್ಲಿ ರೊನಾಲ್ಡ್ ರಾಸ್ ಅವರ ಆಗಮನವಾಯಿತು.

ರೊನಾಲ್ಡ್ ರಾಸ್‌ರ ಜನನ ೧೩ಮೇ, ೧೮೫೭ರಂದು, ಭಾರತದ ಅಲ್‌ಮೊರಾ ನಗರದಲ್ಲಿ. ಎಂಟನೇ ವಯಸ್ಸಿನಲ್ಲೇ ವಿದ್ಯಾಭ್ಯಾಸಕ್ಕಾಗಿ ಅವರು ಇಂಗ್ಲೆಂಡಿಗೆ ತೆರಳಿದರು. ಸೇಂಟ್ ಬಾರ್‌ಥ್ಲೊಮ್ ಆಸ್ಪತ್ರೆ ಯಲ್ಲಿ ವೈದ್ಯಕೀಯಶಾಸ್ತ್ರದಲ್ಲಿ ಪ್ರಾವೀಣ್ಯತೆ ಪಡೆದು, ೧೮೮೦ರಲ್ಲಿ ಭಾರತಕ್ಕೆ ವಾಪಸ್ಸು ಬಂದು ಇಂಡಿಯನ್ ಮೆಡಿಕಲ್ ಸರ್ವೀಸ್ ಸೇರಿದರು. ಅಂದಿನ ಮದರಾಸ್ ಪ್ರೆಸಿಡೆನ್ಸಿ ಯಲ್ಲಿ ಅವರ ಮೊದಲ ವೃತ್ತಿ ಆರಂಭವಾಯಿತು. ಏಳು ವರ್ಷಗಳ ನಂತರ ಇಂಗ್ಲೆಂಡಿಗೆ ವಾಪಸ್ಸು ಹೋಗಿ, ಮದುವೆಯಾಗಿ, ಪತ್ನಿಯೊಡನೆ ಭಾರತಕ್ಕೆ ಮರಳಿ ಬಂದು, ಬೆಂಗಳೂರಿನಲ್ಲಿ ಸ್ಟಾಫ್ ಸರ್ಜನ್ ಎಂದು ನೇಮಕರಾದರು. ಆಗ ದಕ್ಷಿಣ ಭಾರತದಲ್ಲಿ ಮಲೇರಿಯಾ ಜಾಡ್ಯ ವಿಜೃಂಭಿಸುತ್ತಿತ್ತು. ಇದರಿಂದಾಗಿ ಅವರಿಗೆ ಮಲೇರಿಯಾ ಬಗ್ಗೆ ಆಸಕ್ತಿ ಉಂಟಾಯಿತು. ಒಮ್ಮೆ, ಬಕೆಟ್ಟಿನಲ್ಲಿದ್ದ ನೀರಿನಲ್ಲಿ ಸೊಳ್ಳೆಮರಿ ಗಳನ್ನು ಕಂಡು, ಆ ನೀರನ್ನು ಹೊರಚೆಲ್ಲಿದರು. ಇದು, ಮಲೇರಿಯಾ ನಿಯಂತ್ರಣದ ಬಗ್ಗೆ, ತಮ್ಮ ಅರಿವು ಇಲ್ಲದಂತೆ, ಅವರು ನಡೆಸಿದ ಪ್ರಥಮ ಪ್ರಯೋಗವೆನ್ನಬಹುದು. ಆದರೆ, ಮೇಲಧಿಕಾರಿಗಳಿಂದ ಅವರಿಗೆ ದೊರೆತದ್ದು ಛೀಮಾರಿ !- ಭಗವಂತನ ಸೃಷ್ಟಿಯ ಆ ಚಿಕ್ಕ ಪ್ರಾಣಿಗಳಿಗೇಕೆ ಹಿಂಸೆ ಎಂದು.

ಈ ವೇಳೆಗಾಗಲೇ ರಾಸ್ ಅವರಿಗೆ, ಲಾವೆರನ್ ಅವರ ಆವಿಷ್ಕಾರದ ಬಗ್ಗೆ ತಿಳಿದಿದ್ದಿತು. ಆದರೆ, ಮಲೇರಿಯಾ ಪೀಡಿತರ ಕೆಂಪುರಕ್ತಕಣಗಳಲ್ಲಿ ಪ್ಲಾಸ್ಮೋಡಿಯಂ ಪರಾವಲಂಬಿಗಳನ್ನು ಗುರುತಿಸಲು ಮಾತ್ರ ಅವರಿಗೆ ಸಾಧ್ಯವಾಗಿರಲಿಲ್ಲ: ಕಾರಣ, ಅವರಲ್ಲಿ ಬರುವ ರೋಗಿಗಳೆಲ್ಲಾ ಹೇರಳವಾಗಿ ಕ್ವಿನಿನ್ ಸೇವಿಸಿರುತ್ತಿದ್ದರು. ಈ ಸಂದರ್ಭದಲ್ಲಿ ಅವರು ಅನುಭವಿಸಿದ ಅಸಹಾಯಕತೆಯನ್ನು ಕವನ ರೂಪದಲ್ಲಿ ನಿರೂಪಿಸಿದರು (ಪ್ರಾರಂಭದಲ್ಲಿ ನೋಡಿ).

೧೮೯೪ರಲ್ಲಿ ರಾಸ್ ಮತ್ತೆ ಇಂಗ್ಲೆಂಡಿಗೆ ತೆರಳಿದರು. ಅಲ್ಲಿ ಪ್ಯಾಟ್ರಿಕ್ ಮ್ಯಾನ್‌ಸನ್‌ರ ಪರಿಚಯವಾಗಿ, ಮಲೇರಿಯಾ ರೋಗಿಯ ಕೆಂಪು ರಕ್ತಕಣಗಳಲ್ಲಿ ಪ್ಲಾಸ್ಮೊಡಿಯಂ ಜೀವಿಗಳನ್ನು ಗುರುತಿಸುವ ಸುಯೋಗ ದೊರಕಿತು. ಇದು, ಅವರ ಜೀವನದಲ್ಲಿ ಮತ್ತು ಮಲೇರಿಯ ನಿಯಂತ್ರಣದಲ್ಲಿ ಒಂದು ಮುಖ್ಯ ತಿರುವು. ಭಾರತಕ್ಕೆ ವಾಪಸ್ಸು ಬಂದು ಆ ಜೀವಾಣುಗಳನ್ನು ಅಭ್ಯಾಸ ಮಾಡಲು ಇನ್ನೂ ಹೆಚ್ಚು ಉತ್ಸುಕರಾದರು. ಆದರೆ ಮೇಲಧಿಕಾರಿ ಗಳಿಗೆ ಇದರ ಬಗ್ಗೆ ಉತ್ಸಾಹ ಇರಲಿಲ್ಲ. ಅಲ್ಲದೇ ಪದೇ ಪದೇ ವರ್ಗಾವಣೆ, ಬದಲಾಗುವ ಜವಾಬ್ದಾರಿಗಳು ಇವುಗಳಿಂದ ಮಲೇರಿಯಾ ಅಭ್ಯಾಸಕ್ಕೆ ವೇಳೆ ದೊರೆಯುವುದೇ ಕಷ್ಟ ವಾಯಿತು. ಈ ಮಧ್ಯೆ ಅವರಿಗೆ ಬೆಂಗಳೂರಿ ನಿಂದ ಸಿಕಂದರಾಬಾದಿಗೆ ವರ್ಗವಾಯಿತು. ಆದರೆ ರಾಸ್ ಮಾತ್ರ ಹಿಡಿದ ಕೆಲಸವನ್ನು ಸುಲಭವಾಗಿ ಬಿಡುವ ವ್ಯಕ್ತಿಯಾಗಿರ ಲಿಲ್ಲ.

ಸಿಕ್ಕಷ್ಟು ವೇಳೆಯಲ್ಲಿ ಸಿಕಂದರಾಬಾದಿನಲ್ಲೇ ತಮ್ಮ ಅಭ್ಯಾಸವನ್ನು ಮುಂದುವರಿಸಿದರು. ಅವರ ಅಭ್ಯಾಸದ ರೀತಿ : ಸೊಳ್ಳೆಮರಿಗಳನ್ನು ಗಾಜಿನ ಸೀಸೆಯಲ್ಲಿ ಬೆಳೆಸುವುದು. ಅವಕ್ಕೆ ಮಲೇರಿಯಾ ಪೀಡಿತರ ರಕ್ತದ ಊಟ. ಹೀಗೆ ಬೆಳೆದ ಸೊಳ್ಳೆಗಳನ್ನು ಕೆಲವು ನಿಗಧಿತ ದಿನಗಳ ನಂತರ ವಿಚ್ಛೇದಿಸಿ, ಉದರವನ್ನು ಪ್ಲಾಸ್ಮೊಡಿಯಂಗಾಗಿ ಸೂಕ್ಷ್ಮದರ್ಶಕದಿಂದ

ಪರೀಕ್ಷಿಸುವುದು. ದುರದೃಷ್ಟದಿಂದ, ಅವರ ಅಭ್ಯಾಸಕ್ಕೆ ಸಿಕ್ಕಿದ ಸೊಳ್ಳೆಗಳು ಕ್ಯೂಲೆಕ್ಸ್ ಜಾತಿಯವು. ಕ್ಯೂಲೆಕ್ಸ್ ಸೊಳ್ಳೆಗಳಿಗೆ ಮಲೇರಿಯಾರೋಗದಲ್ಲಿ ಪಾತ್ರವಿಲ್ಲ. ಆದ್ದರಿಂದ ಫಲಿತಾಂಶ ನಕಾರವಾಗಿದ್ದುವು. ಆದರೆ ಒಂದು ದಿನ ಅವರ ಸಹಾಯಕನೊಬ್ಬ ಹೊಸಜಾತಿಯ ಸೊಳ್ಳೆ ಮೊಟ್ಟೆಗಳನ್ನು ತಂದ. ಯಥಾಪ್ರಕಾರ, ಮರಿಗಳನ್ನು ಗಾಜಿನ ಸೀಸೆಯಲ್ಲಿಟ್ಟು, ರಕ್ತದ ಊಟ ಕೊಟ್ಟು, ಒಂದು, ಎರಡು ಮತ್ತು ಮೂರನೇ ದಿನಗಳನಂತರ ಪರೀಕ್ಷಿಸಿದರು. ಮತ್ತೆ ನಕಾರ ಫಲಿತಾಂಶ. ಆದರೆ ನಾಲ್ಕನೇ ದಿನದ ಸೊಳ್ಳೆಗಳನ್ನು ವಿಚ್ಛೇದಿಸಿ ಪರೀಕ್ಷಿಸಿದಾಗ ಅವರಿಗೆ ಒಂದು ಆಶ್ಚರ್ಯ ದೃಶ್ಯ ಕಾದಿತ್ತು. ಅವರದೇ ಹೇಳಿಕೆಯಂತೆ''.... ಸೊಳ್ಳೆಯ ಉದರವನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುವಾಗ ನನಗೆ ಅತಿ ಆಶ್ಚರ್ಯವಾಯಿತು. ಅಲ್ಲಿ ಸೊಳ್ಳೆಯ ಜೀವಕೋಶಗಳಿಗಿಂತಲೂ ಸ್ವಲ್ಪ ದೊಡ್ಡದಾದ ಹಲವಾರು ಜೀವಕೋಶಗಳು ಕಂಡುಬಂದುವು. ಅವು ಬಹಳ ನವುರಾಗಿದ್ದುವು. ಯಾವ ಬಣ್ಣವೂ ಇರಲಿಲ್ಲ. ಆದರೆ ಪ್ರತಿ ಜೀವಕೋಶದಲ್ಲಿಯೂ ಹತ್ತಾರು ಕಪ್ಪು ಬಣ್ಣದ ಕಣಗಳು ಇದ್ದುವು. ಸೋಜಗವೆಂದರೆ, ಇವು ಮಲೇರಿಯಾ ಪೀಡಿತರ ರಕ್ತಕಣಗಳಲ್ಲಿರುವ ಪರಾವಲಂಬಿ ಪ್ಲಾಸ್ಮೊಡಿಯಂನೇ ಹೋಲುತ್ತಿದ್ದುವು...''. ಇದೇ ಅಧ್ಯಯನವನ್ನು ಮುಂದುವರಿಸಿ ಮಲೇರಿಯಾಕ್ಕೆ ಕಾರಣವಾದ ಪರಾವಲಂಬಿಗಳು ಸೊಳ್ಳೆಯ ಉದರದಲ್ಲಿ ವೃದ್ಧಿಯಾಗುವುದೆಂದು ಖಚಿತವಾಗಿ ತೋರಿಸಿಕೊಟ್ಟರು. ಅಂದು ಅವರಿಗೆ ಉಂಟಾದ ಆಶಾಜನಕ ಭಾವನೆಗಳನ್ನು ಕವನ ರೂಪದಲ್ಲಿ ನಿರೂಪಿಸಿದರು.

ಕರುಣಾಳು ಆ ದೇವನಿಂದು
ಇತ್ತ ನನ್ನ ಕರದೊಳೊಂದು
ಅತ್ಯದ್ಭುತ ಕೊಡುಗೆಯ
ಮೆಚ್ಚಿದೆ ನಾ ಮನದಲ್ಲೆ ಅವನಾಜ್ಞೆಯ.
ಅಂತೆ ಸೃಷ್ಟಿಯ ರಹಸ್ಯವ
ಉಸಿರ್ಪಿಡಿದು ಕಣ್ದುಂಬಿ
ಕಂಡೆನಾ ನಿನ್ನಯ ಚಾಣಾಕ್ಷ ಅಂಕುರವನೆ,
ಓ, ಸಹಸ್ರ ಕೊಲೆಗಳ ರಕ್ಕಸನೆ.

ಅಂತೆ ಈ ಕಿರು ಸಂಶೋಧನೆ
ಸುರಿಸುವುದು ಜೀವದಾನದ ವರವನ್ನೇ,
ಎಲ್ಲಿ! ಕೋರೀಗ ನಿನ್ನ ಹಿಡಿತದಾ ಅಟ್ಟಹಾಸ,
ಓ, ಸಾವೆ, ನಿನಗಿನ್ನು ಬರಿಯ ಅಪಜಯದ
ಪರಿಹಾಸ

ಸೋಂಕಿನ ಪರಿ

ಆದರೆ ಮಲೇರಿಯಾ ಕತೆ ಇಷ್ಟಕ್ಕೆ ಮುಗಿಯಲಿಲ್ಲ. ಇದು ಒಬ್ಬರಿಂದ ಮತ್ತೊಬ್ಬರಿಗೆ ಹೇಗೆ ಹರಡುವುದೆಂದು ತಿಳಿಯಬೇಕಿತ್ತು. ಆ ಕಾಲದಲ್ಲಿ ಮಲೇರಿಯಾ ಹರಡುವ ಬಗ್ಗೆ ಅನೇ ವಿವಾದಗಳಿದ್ದುವು. ಇಟಲಿಯ ಭಾಷೆಯಲ್ಲಿ Malaria,Mal-air ಎಂದರೆ ಕೆಟ್ಟಗಾ ಎಂದರ್ಥ. ಜೌಗು ಪ್ರದೇಶದ ಕೆಟ್ಟಗಾಳಿಯನ್ನು ಸೇವಿಸುವುದರಿಂದ ಈ ಜಾಡ್ಯ ಉಂಟಾಗುತ್ತದೆಂದು ಅಲ್ಲಿಯ ನಂಬಿಕೆಯಾಗಿದ್ದಿತು. ಪ್ಯಾಟ್ರಿಕ್ ಮ್ಯಾನ್‌ಸನ್ ಅವರ ಪ್ರಕಾರ ಸೊಳ್ಳೆ ಸೋಂಕಿನ ನೀರು ಕುಡಿಯುವುದರಿಂದ ಮಲೇರಿಯಾ ಉಂಟಾಗುವುದು. ಜರ್ಮನಿಯ ಖ್ಯಾತ ಸೂಕ್ಷ್ಮಾಣು ವಿಜ್ಞಾನಿ ರಾಬರ್ಟ್‌ಕೋಷ್ ಅವರ ವಾದವೇ ಬೇರೆಯಾಗಿತ್ತು: ಸೊಳ್ಳೆಗಳ ಮನುಷ್ಯನ ಚರ್ಮದ ಮೇಲೆ ಮೊಟ್ಟೆ ಇಡುತ್ತವೆ. ಈ ಮೊಟ್ಟೆಗಳಲ್ಲಿರುವ ಪರಾವಲಂಬಿಗಳು ಕಾಲಕ್ರಮೇಣ, ಚರ್ಮದ ಮೂಲ ದೇಹವನ್ನು ಸೇರಿ ರೋಗ ಉಂಟುಮಾಡುತ್ತವೆ

ಆದರೆ ಈ ಮಧ್ಯೆ ರಾಸ್ ಅವರಿ ರಾಜಸ್ಥಾನಕ್ಕೆ ವರ್ಗವಾಯಿತು. ಅಲ ಮಲೇರಿಯಾ ಹಾವಳಿ ಇಲ್ಲದಿದ್ದುದರಿಂ ಅವರ ಅಧ್ಯಯನ ಮತ್ತೆ ಕುಂಠಿತವಾಯಿತು

ದರಿಂದ ಬೇಸತ್ತು, ತಮಗೆ ಮಲೇರಿಯಾ ಅಧ್ಯಯನಕ್ಕೆ ಸಹಕಾರ ದೊರೆಯದಿದ್ದರೆ, ಕೆಲಸಕ್ಕೆ ರಾಜೀನಾಮೆ ಕೊಡುವುದಾಗಿ ಬೆದರಿಸಿದರು. ಪ್ಯಾಟ್ರಿಕ್ ಮ್ಯಾನ್‌ಸನ್ ಕೂಡ ಇಂಡಿಯನ್ ಮೆಡಿಕಲ್ ಸರ್ವೀಸ್ ನಿರ್ದೇಶಕರ ಮೇಲೆ ಇದಕ್ಕಾಗಿ ಒತ್ತಡ ಹಾಕುತ್ತಿದ್ದರು. ಕೊನೆಗೆ ರಾಸ್ ಅವರಿಗೆ ಆರು ತಿಂಗಳ ಕಾಲ ಅವಕಾಶ ದೊರಕಿತು. ಮಲೇರಿಯಾ ಹರಡುವಿಕೆಯ ಬಗ್ಗೆ ಅಧ್ಯಯನ ನಡೆಸಲು ಫೆಬ್ರವರಿ ೧೮೯೮ರಲ್ಲಿ ಕಲ್ಕತ್ತಕ್ಕೆ ಬಂದರು. ಆದರೆ ದುರದೃಷ್ಟ, ತಂಪು ಹವೆಯ ಕಾರಣದಿಂದಾಗಿ, ಕಲ್ಕತ್ತಾದಲ್ಲಿ ಮಲೇರಿಯಾ ಪ್ರಚಲಿತವಿರಲಿಲ್ಲ. ಆದರೆ ತಮ್ಮ ಹಿಂದಿನ ಅಧ್ಯಯನಗಳಿಂದ ಪಕ್ಷಿಗಳಿಗೂ ಮಲೇರಿಯಾ ಸೋಂಕು ತಗಲುತ್ತದೆಂದು ತಿಳಿದಿದ್ದರು. ಅವರ ಸಹಾಯಕ ಮೊಹಮದ್ ಬಕ್ಸ್ ಎಂಬಾತ ಪಕ್ಷಿಗಳಲ್ಲಿ ಮಲೇರಿಯಾ ಹರಡುವುದನ್ನೇ ಅಧ್ಯಯನ ಮಾಡಲು ಸೂಚಿಸಿದ. ಮುಂದೆ ಅನೇಕ ಸೋಂಕು ಪ್ರಾಯೋಗಗಳನ್ನು ಪಕ್ಷಿಗಳ ಮೇಲೆ, ಅದರಲ್ಲೂ ಗುಬ್ಬಚ್ಚಿಗಳ ಮೇಲೆ ನಡೆಸಿದರು. ಸೋಂಕು ತಗುಲಿದ ಹಕ್ಕಿಯ ರಕ್ತವನ್ನು ಸೊಳ್ಳೆಗೆ ತಿನ್ನಿಸಿದಾಗ, ಕೆಲವು ಪರಾವಲಂಬಿಗಳು ಸೊಳ್ಳೆಯನ್ನು ಸೇರುವುದು ಗೊತ್ತಾಯಿತು. ಅವು ಸೊಳ್ಳೆಯ ಉದರದಲ್ಲಿ ವಿಶೇಷವಾಗಿ ವೃದ್ಧಿ ಹೊಂದಿ ಅನಂತರ ಜೊಲ್ಲು ಗ್ರಂಥಿಯನ್ನು ಸೇರುತ್ತವೆಂದೂ ತಿಳಿಯಿತು. ಇದೇ ಸೊಳ್ಳೆ ಮತ್ತೊಂದು ಹಕ್ಕಿಯನ್ನು ಕಚ್ಚಿದಾಗ ಪರಾವಲಂಬಿಗಳು ಜೊಲ್ಲಿನ ಮೂಲಕ ಹಕ್ಕಿಯನ್ನು ಸೇರಿ ರೋಗ ಉಂಟು ಮಾಡುವುದೆಂದು ಪ್ರತಿಪಾದಿಸಿದರು. ಹಕ್ಕಿಗಳಲ್ಲಿ ಈ ಮಾರ್ಗ ಸೋಂಕು ಹರಡುವುದಾದರೆ, ಬಹುಶಃ ಮನುಷ್ಯನಲ್ಲೂ ಅದೇ ಮಾರ್ಗ ಸಾಧ್ಯವೆಂದು ಪ್ಯಾಟ್ರಿಕ್ ಮಾನ್‌ಸನ್‌ರು ಸೂಚಿಸಿ, ಅದನ್ನು ಸಾದರಪಡಿಸಲು ರಾಸ್ ಅವರಿಗೆ ಒತ್ತಾಯಪಡಿಸಿದರು. ಆವೇಳೆಗಾಗಲೇ ರಾಸ್, ಸರ್ಕಾರದ ನೀತಿಯಿಂದ ಅತಿಯಾಗಿ ಬಳಲಿ, ಇಂಗ್ಲೆಂಡಿಗೆ ವಾಪಸ್ಸು ಹೋಗಲು ಬಯಸಿದ್ದರು. ಆದ್ದರಿಂದ ಆ ಕೆಲಸವನ್ನು ಇಟಲಿಯ ವಿಜ್ಞಾನಿ ಗಿಯೊವನ್ನಿ ಬಟಿಸ್ಟಗ್ರಾಸಿ ಮಾಡಿದರು.

ರಾಸ್ ಅವರ ಪ್ರಯೋಗಗಳು ಉಷ್ಣವಲಯದ ರೋಗಗಳ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನೇ ಕೊಟ್ಟಿತು. ಮಲೇರಿಯಾ ಫೈಲೇರಿಯಾ, ಡಿಂಗೂ, ಕಾಲರ, ಪ್ಲೇಗ್ ಮುಂತಾದ ರೋಗಗಳು ವಿಧವಿಧವಾದ ವಾಹಕಗಳ ಮೂಲಕ ಹರಡುವುದೆಂದು ತಿಳಿಯಿತು. ಸೋಂಕು ರೋಗಗಳ ನಿಯಂತ್ರಣಕ್ಕೆ ಈ ಮಾಹಿತಿ ವೈಜ್ಞಾನಿಕ ತಳಹದಿಯಾಯಿತು. ಇದರ ಪ್ರಾಮುಖ್ಯವನ್ನು ಗುರುತಿಸಿ, ರೊನಾಲ್ಡ್‌ರಾಸ್ ಅವರಿಗೆ, ೧೯೦೨ರಲ್ಲಿ ನೊಬೆಲ್ ಪಾರಿತೋಷಕ ಪ್ರಾಪ್ತವಾಯಿತು. ಮುಂದೆ, ಬ್ರಿಟಿಷ್ ಸರ್ಕಾರ ಅವರಿಗೆ Knighthood ಕೊಟ್ಟು ಪುರಸ್ಕರಿಸಿತು.

ಇಂಡಿಯನ್ ಮೆಡಿಕಲ್ ಸರ್ವೀಸ್‌ನಿಂದ ನಿವೃತ್ತರಾದ ನಂತರ ರಾಸ್ ಲಿವರ್‌ಪೂಲಿನ School of Tropical Medicine ನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಮೊದಲನೇ ಮಹಾಯುದ್ಧ ಕಾಲದಲ್ಲಿ ಸರ್ಕಾರಕ್ಕೆ ಮಲೇರಿಯಾ ರೋಗದ ಬಗ್ಗೆ ಸಲಹೆಗಾರರಾಗಿ ಕೆಲಸಮಾಡಿದರು. ಅವರ ಗೌರವಾರ್ಥವಾಗಿ ಲಂಡನ್ನಿನಲ್ಲಿ, ೧೯೨೬ರಲ್ಲಿ Ross institute & Hospital for Tropical Diseases ಸ್ಥಾಪಿತವಾಯಿತು. ಅದಕ್ಕೆ ರೊನಾಲ್ಡ್ ರಾಸ್‌ರೇ ಮೊದಲ ನಿರ್ದೇಶಕರು. ಅನಂತ ೧೯೨೬-೨೭ರಲ್ಲಿ

ಶ್ರೀಲಂಕ, ಮಲಯ್, ಭಾರತಕ್ಕೆ ಮತ್ತೊಮ್ಮೆ ಭೇಟಿಕೊಟ್ಟರು. ಆದರೆ ಅದೇ ಅವರ ಕೊನೆಯ ಭೇಟಿಯಾಯಿತು. ೧೯೨೭ರಲ್ಲಿ ಪಾರ್ಶ್ವ ವಾಯು ಹೊಡೆದು ಅವರನ್ನು ಚಕ್ರ ಕುರ್ಚಿಗೆ ಬಂಧಿಸಿತು. ೧೯೩೨ರಲ್ಲಿ ರಾಸ್ ಇನ್‌ಸ್ಟಿಟ್ಯೂಟ್ ನಲ್ಲೇ ನಿಧನರಾದರು.

ರೊನಾಲ್ಡ್ ರಾಸ್ ಅವರು ಮಲೇರಿಯಾ ನಿಯಂತ್ರಣದ ಬಗ್ಗೆಯೂ ನಿರ್ದಿಷ್ಟ ಅಭಿಪ್ರಾಯ ಹೊಂದಿದ್ದರು. ಮಲೇರಿಯಾ ಹರಡುವುದನ್ನು ತಡೆಗಟ್ಟಬೇಕಾದರೆ ಅದರ ವಾಹಕವಾದ ಅನಾಫಿಲಿಸ್ ಹೆಣ್ಣು ಸೊಳ್ಳೆಯ ಸಂತತಿಯನು ನಿಯಂತ್ರಿಸ ಬೇಕೆಂದು ಸಂಖ್ಯಾಶಾಸ್ತ್ರದ ಆಧಾರದ ಮೇಲೆ ತೋರಿಸಿಕೊಟ್ಟರು. ಆದರೆ ಮಲೇರಿಯಾ ನಿಯಂತ್ರಣ-ಇದರ ಜಾಗತಿ ಮಟ್ಟದಲ್ಲಿ ಆರಂಭವಾದದು ೧೯೫೫ರಲ್ಲಿ- ವಿಶ್ವ ಆರೋಗ್ಯ ಸಂಸ್ಥೆಯ ಅಂಗವಾಗಿ. ಪ್ರಯತ್ನ ಇನ್ನೂ ನಡೆಯುತ್ತಲೇ ಇದೆ. ಅದೆ ಒಂದು ಬೇರೆ ಕತೆ.



ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು

-ಮಹಾಭಾರತ

ಅಮ್ಮನ ಜಾಣತನ

ಜಯಂತಿ ಅಮೃತೇಶ್
೪೦ ಕೃತ್ತಿಕಾ,
ಆರನೆಯಮುಖ್ಯ ರಸ್ತೆ,
ಸರಸ್ವತೀಪುರ
ಮೈಸೂರು-೫೭೦ ೦೦೯

ಸದಾ ಉಪದೇಶ ಕೊಡುವುದು ನನ್ನ ತಾಯಿಗೆ ಬಹಳ ಪ್ರಿಯವಾದ ಹವ್ಯಾಸ. ದೊಡ್ಡ ದೊಡ್ಡ ಅಥವಾ ಬಹುಮುಖ್ಯವಾದ ವಿಷಯಗಳಲ್ಲಿ ಅಲ್ಲವೇ ಅಲ್ಲ; ಆಕೆ ಯಾವತ್ತೂ ನಾನು ಯಾರನ್ನು ಮದುವೆ ಮಾಡಿಕೊಳ್ಳಬೇಕು ಎಂದಾಗಲೀ, ಯಾವ ಉದ್ಯೋಗವನ್ನು ಹಿಡಿಯ ಬೇಕು ಎಂದಾಗಲೀ ಉಪದೇಶ ಮಾಡಿದವಳೇ ಅಲ್ಲ. ಅತಿ ಸಾಮ್ಯವಾದ ವಿಷಯಗಳ ಬಗ್ಗೆ ಉಪದೇಶ ಕೊಡುವಲ್ಲಿ ಆಕೆ ನಿಸ್ಸೀಮಳು.

ಆರೋಗ್ಯ ನಿಯಮಗಳ ಬಗ್ಗೆ ಸಲಹೆ ನೀಡುವುದರಲ್ಲಿ ಆಕೆ ಪರಿಣಿತಳು. ''ಒದ್ದೆಯಾದ ಕೂದಲಿನೊಡನೆ ಹೊರಗಡೆ ಓಡಾಡಿದರೆ ನಿನಗೆ ನ್ಯುಮೋನಿಯಾ ಅಂಟಿಕೊಳ್ಳುವುದು''. ''ತಣ್ಣಗಿನ ಬೆಂಚಿನ ಮೇಲೆ ಕುಳಿತರೆ ಮೊಳೆರೋಗ ಬರುವುದು'' ಎಂದು ಹೆದರಿಸುವಳು. ''ಹೊರಗಡೆ ಗುಡುಗು ಮಿಂಚಿನ ಮಳೆಯಿದ್ದರೆ ಟೆಲಿಫೋನಿನ ಹತ್ತಿರ ಹೋಗಬೇಡ. ಇಲ್ಲವಾದರೆ ಆ ಮಿಂಚು ಫೋನಿನ ತಂತಿಯಿಂದ ಹಾದು ನಿನ್ನನ್ನು ಕೊಲ್ಲಬಹುದು!'' ಇತ್ಯಾದಿ ಇತ್ಯಾದಿ. ನೀವು ಈಗಲೇ ತಲೆಯನ್ನು ಸರಿ ಸರಿ ಎನ್ನುವಂತೆ ಅಲ್ಲಾಡಿಸುತ್ತಿದ್ದೀರಿ ಅಲ್ಲವೆ?.... ಹೌದು ಇದೇ ''ತಾಯ್ತನದ ವೈಖರಿ''!

ತಾಯಂದಿರು ವಿಷಯದ ಮೂಲಕ್ಕೇ ಹೋಗಿ ಅಳೆಯಬೇಕೆಂದೇನೂ ಇಲ್ಲ. ಚರಿತ್ರೆಯ 'ಕಥೆಗಳೆಲ್ಲವೂ ಅವರಿಗೆ ತಿಳಿದಿರಬೇಕೆಂದೇನೂ ಇಲ್ಲ. ತಾಯಿಯಾದವಳಿಗೆ ಉಪದೇಶ ಕೊಡುವಂತ ಸರ್ವಮಾನ್ಯ ಹಕ್ಕು ಇದ್ದೇ ಇದೆ. ಏಕೆಂದರೆ ಅವಳು ''ತಾಯಿ''-ಇದಿಷ್ಟೇ ಅವಳಿಗೆ ಇರಬೇಕಾದ ಅರ್ಹತೆ.

ಜೀವನದುದ್ದಕ್ಕೂ ತಾಯಿಯ ಪ್ರಭಾವ ನನ್ನ ಮೇಲೆ ಆಗಿದೆ. ನಾವು ನಾಲ್ಕು ಜನ ಒಡಹುಟ್ಟಿದವರೂ ಚಿಕ್ಕವರಾಗಿದ್ದಾಗ ನಮ್ಮ ತಾಯಿಯು ರಹಸ್ಯಮಯವಾದ ಪಿಸುಮಾತಿನಲ್ಲಿ ಅನೇಕ ನತದೃಷ್ಟರ ಕತೆಗಳನ್ನು ಹೇಳುತ್ತಿದ್ದಳು.

ನಾವು ಕುರ್ಚಿಯ ಹಿಂಗಾಲುಗಳ ಮೇಲೆ ನಮ್ಮೆಲ್ಲ ಭಾರ ಹಾಕಿ ಓಲಾಡುತ್ತಿರುವಾಗ ನಮ್ಮ ತಾಯಿಯು -ತನಗೆ ಗೊತ್ತಿದ್ದ ವ್ಯಕ್ತಿಯೊಬ್ಬ ಬಹಳ ದಿನಗಳ ಹಿಂದೆ ಹೀಗೆಯೇ ಮಾಡಿ, ಕತ್ತಿನ ಮೂಳೆ ಮುರಿದುಕೊಂಡು, ಆಜೀವಾಂತ ಕೈಕಾಲುಗಳ ಸ್ವಾಧೀನ ಕಳೆದುಕೊಂಡು ಬಹಳ ಕಡಿಮೆ ದಿವಸಗಳು ಬದುಕಿ, ನರಳಿ ಸತ್ತ ಉದಾಹರಣೆ ಕೊಡುವಳು.

ಕಡಲೆಕಾಯಿ ಬೀಜವನ್ನು ಪೊಟ್ಟಣದಿಂದ ತೆಗೆದು ಅದನ್ನು ಗಾಳಿಯಲ್ಲಿ ಎಗರಿಸಿ ಹಾಗೆಯೇ ಬಾಯಿಯೊಳಕ್ಕೆ ಹಾಕಿಕೊಂಡಾಗ- ಆಕೆ ಒಬ್ಬಾತ ಹೀಗೆಯೇ ಮಾಡಿ ಆ ಕಡಲೆಕಾಯಿ ಗಂಟಲಲ್ಲಿ ಸಿಕ್ಕಿಹಾಕಿಕೊಂಡು ಸತ್ತೇ

ಮೂಲ: ೧೯೯೪ರ ಜನವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನ ''ಮಮ್ ನೋಸ್ ಬೆಸ್ಟ್'' ಎಂಬ ಕಾನ್ನಿ ಶುಲ್ಟ್‌ರವರ ಲೇಖನದ ಭಾವಾನುವಾದ.

ಒಬ್ಬ ನತದೃಷ್ಟ ಹೀಗೆಯೇ ಮಾಡಿದಾಗ ಅವನ ನಾಲಿಗೆ ಆ ಡಬ್ಬಿಗೆ ಅಂಟಿಕೊಂಡು ಅಗ್ನಿಶಾಮಕ ದಳದವರು ಬಂದು ನಾಲಿಗೆಯನ್ನು ಅರ್ಧಕ್ಕೆ ಕತ್ತರಿಸಿ ಹಾಕಿದರಂತೆ! ಆ ದಿನದಿಂದ ಅವನ ಉಚ್ಚಾರಣೆಯೇ ಬದಲಾಗಿದೆಯಂತೆ.

ನಾವು ಯೌವನಕ್ಕೆ ಕಾಲಿಟ್ಟಾಗ ಆಕೆಯ ತಾಯ್ತನವು ನಮ್ಮನ್ನು ಹುಡುಗರೊಡನೆ ಬೆರೆಯುವುದನ್ನು ತಪ್ಪಿಸಲು ಸದಾ ಪ್ರಯತ್ನಿಸುತ್ತಿತ್ತು. ಇದು ಆಕೆಯ ಕಾರ್ಯವೈಖರಿ.

ಮೊದಲನೆಯದಾಗಿ ಹೆಂಗಸರಾದವರು ಮಾಡಬಾರದಂಥ ಕೆಲಸಗಳ ಪಟ್ಟಿ. ಹೆಂಗಸರು ಚ್ಯೂಯಿಂಗ್ ಚೀಪಬಾರದು. ಶಿಳ್ಳೆ ಹಾಕಬಾರದು, ಕಾಲುಗಳನ್ನು ಮಡುಚಿಟ್ಟು ಕುಳಿತುಕೊಳ್ಳುವುದನ್ನು ಮರೆಯಬಾರದು.

ಇದರ ಬಳಿಕ ನಾವು ಯಾರನ್ನೂ ನಂಬಬಾರದು ಎನ್ನುವ ಪಟ್ಟಿ. ಉತ್ತರದೇಶದವರು ಮೋಸಮಾಡಬಹುದು, ಪಶ್ಚಿಮ ಪ್ರಾಂತ್ಯದವರು, ದಕ್ಷಿಣನಾಡಿನವರು, ಕಣಿವೆ ಕೆಳಗಿನವರು, ಪೂರ್ವ ಪ್ರದೇಶದವರು ಇತ್ಯಾದಿಯಾಗಿ ಎಲ್ಲರೂ ಹೀಗೆಯೇ. ಆದರೆ ಇವರುಗಳೇ ಶಾಲೆಯಲ್ಲಿ ನಮ್ಮ ಸಹಪಾಠಿಗಳು. ಅಮ್ಮನ ಪಟ್ಟಿ ಮುಗಿದಾಗ ಹುಡುಗಿಯರಿಗೆ ಪುಟ್ಟ ತಮ್ಮನೊಬ್ಬನೇ ಸ್ನೇಹಕ್ಕೆ ಉಳಿದದ್ದು. ''ಉಳಿದವರೆಲ್ಲ ಮೋಸಗಾರರು''. ಆದರೆ ಅವನಿಗೂ ತಾಯ್ತನದ ಎಚ್ಚರಿಕೆಗಳು ಇದ್ದೇ ಇರುತ್ತಿದ್ದವು. ಅವನೂ ಅಮ್ಮನ ಉಪದೇಶಗಳಿಂದ ಪರಿವೇಷ್ಟಿತನಾಗುತ್ತಿದ್ದ! ಅವನಿಗೆ ಅಮ್ಮನ ಉಪದೇಶವೇನೆಂದರೆ ಹುಡುಗಿಯರನ್ನು ನಿನ್ನ ಸಹೋದರಿಯರಂತೆ ಕಾಣು! ಈ ನಮ್ಮ ತಮ್ಮನೇ ಅಲ್ಲವೇ ನಾವು ರಾತ್ರಿ ಮಲಗಿದ್ದಾಗ ಮೂಗುಗಳಿಗೆ ಕೆನೆಯನ್ನು ತುಂಬಿ ನಾವು ಇಲಿ ಮತ್ತು ನಾಯಿ ಮೂತಿಯವರೆಂದು ಹೀಗಳೆಯುತ್ತಿದ್ದುದ್ದು?

ನನ್ನ ಅನಿಸಿಕೆ ಏನಿತ್ತೆಂದರೆ ನಾನೀಗ ಮಕ್ಕಳ ತಾಯಿ. ಈಗಲಾದರೂ ನನ್ನ ತಾಯಿಯ ಉಪದೇಶ ನಿಲ್ಲಬಹುದು ಎಂದು. ಆದರೆ ಅದು ಹಾಗಾಗಲಿಲ್ಲ. ನನ್ನ ರವಿಕೆಯ ಕತ್ತಿನ ಪಟ್ಟಿ ಕೆಳಗಡೆ ಇಳಿದಿತ್ತೆಂದು ಹಂಗಿಸುತ್ತ ''ಮಾರಾಟಕ್ಕೆ ಇಲ್ಲದಿರುವ ವಸ್ತುಗಳ ಪ್ರದರ್ಶನ ಬೇಡ'' ಎಂದಳು. ಈ ತಾಯ್ತನದ ಹೇಳಿಕೆಗಳಿಗೆ ಕೊನೆಯೇ ಇಲ್ಲವೆಂದು ಆಗ ನನಗನ್ನಿಸಿತು. ನಾನು ನಗುತ್ತಾ ಆಕೆಗೆ ನನ್ನ ವಂದನೆಗಳನ್ನು ಅರ್ಪಿಸುತ್ತಿದ್ದೆ.

ನಾನು ಅಮ್ಮನಿಗೆ ನಿಜಕ್ಕೂ ಆಭಾರಿಯಾಗಿದ್ದೇನೆ. ಈಗಷ್ಟೇ ನಾನು ಆಕೆಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದ್ದೇನೆ. ಹೇಗೆಂದರೆ, ಉದಾಹರಣೆಗೆ ಮೊನ್ನೆ ತಾನೇ ನನ್ನ ಮಗಳು ಕುರ್ಚಿಯ ಹಿಂಗಾಲುಗಳಮೇಲೆ ಭಾರವನ್ನು ಬಿಟ್ಟು ಜೂಗಾಡಲು ಪ್ರಾರಂಭಿಸಿದಾಗ ನಾನು ಅದೇ ರಹಸ್ಯಕರವಾದ ಪಿಸುದನಿಯಲ್ಲಿ ಪ್ರಾರಂಭಿಸಿದೆ ''ನೋಡೆ ಅಮ್ಮಯ್ಯ ನಿನ್ನ ಅಜ್ಜಿಗೆ ಪರಿಚಯವಿದ್ದ ಒಬ್ಬ ನತದೃಷ್ಟ ಮನುಷ್ಯನಿದ್ದ ಅವನು ಹೀಗೆಯೇ ಕುರ್ಚಿಯ ಹಿಂಗಾಲುಗಳ ಮೇಲೆ''.......

ಚಕ್ರ ಉರುಳುತ್ತದೆ, ಪಿಸುಮಾತು ಉಸುರುತ್ತವೆ, ವ್ಯಕ್ತಿಗಳು ಮಾತ್ರ ಬದಲಾಗುತ್ತಾರೆ! ಜೈ ಮಾನವೀಯತೆ.

ರೇಡಿಯೋ ಪ್ರಾಹಾಕ್ಕೆ ಒಂದು ಪತ್ರ

ಡಿ.ಎ.ಶಾಮಣ್ಣ
ನಂ.೧೯೯೧, 'ಆರಭಿ', ೧ನೇ ಮೇನ್,
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

(ಕಮ್ಯೂನಿಷ್ಟರ ಕೈಕೆಳಗಿದ್ದ ಝೆ.ಕೊಸ್ಲೋವೇಕಿಯಾದ ರೇಡಿಯೋ ಮಾಧ್ಯಮಕ್ಕೆ ಬರೆದ ಒಂದು ಪತ್ರ)

ಪ್ರಿಯ ಸ್ನೇಹಿತರೆ,

ಪ್ರಾಣಿಗಳ ಬಗ್ಗೆ ಏನಾದರೂ ಬರೆಯಿರಿ ಎಂದು ಕೇಳಿದ್ದೀರಿ. ನಿಮ್ಮೊಂದಿಗೆ ಹಲವಾರು ವರ್ಷಗಳಿಂದ ಕೆಲಸಮಾಡುತ್ತಿದ್ದೇನೆ. ನಿಮ್ಮ ಕೋರಿಕೆಯನ್ನು ಈಡೇರಿಸುವ ಮನಸ್ಸೂ ಇದೆ. ಆದರೆ ಪ್ರಾಣಿಗಳ ಬಗ್ಗೆ ಬರೆಯಲು ನನ್ನಿಂದಾಗದು.

ಪ್ರಾಣಿಗಳ ಬಗ್ಗೆ ಬರೆಯುವುದು ನೈತಿಕವಾಗಿ ಬಹು ಭಾರವೆನಿಸುತ್ತದೆ. ಕೇವಲ ಮನುಷ್ಯನಾದ ನಾನು, ಸುಂದರ ಹಾಗೂ ಸಹಜ ಜೀವಿಗಳಾದ ಪ್ರಾಣಿಗಳ ಬಗ್ಗೆ ಬರೆಯುವುದು ಅವಿವೇಕವೇನೋ ಅನ್ನಿಸುತ್ತದೆ. ಪ್ರಾಣಿಗಳು ಯುದ್ಧವನ್ನು ಮಾಡಲೊಪ್ಪವು, ಹೆದ್ದಾರಿ ದರೋಡೆಗಳನ್ನು ಮಾಡವು, ಸುಳ್ಳನ್ನು ಹೇಳವು, ಅನೈತಿಕ ಕೆಲಸಗಳಲ್ಲಿ ತೊಡಗವು.

ಪಾಪ, ಪ್ರಾಣಿಗಳು ಬರೆಯಲಾರವು. ಅವೇನಾದರೂ ಬರೆದಿದ್ದರೆ (ಅವು ಬರೆದದ್ದನ್ನು ಪ್ರಕಾಶಕ ಯಾರಿಗಾದರೂ ಅಚ್ಚುಹಾಕುವ ಧೈರ್ಯವಿದ್ದಿದ್ದರೆ) ಮನುಷ್ಯರ ಬಗ್ಗೆ ಅವು ಏನು ಹೇಳಬಹುದೆಂಬುದು ನಿಜವಾಗಿಯೂ ಕುತೂಹಲಕಾರಿಯೇ. ಆದರೆ ಕೋಗಿಲೆ, ಕುದುರೆ, ಇರುವೆ ಅಥವಾ ಕಾಗೆ ಬರೆಯುವುದಕ್ಕಾದರೂ ಏಕೆ ಹೋಗುತ್ತವೆ? ಅವುಗಳಿಗೆ ಮಾನವನ ಬಗ್ಗೆ ಬರೆಯುವುದಕ್ಕಿಂತ ಉತ್ತಮವಾದ ಎಷ್ಟೋ ಕೆಲಸಗಳಿರುತ್ತವೆ. ಉದಾಹರಣೆಗೆ: ಹಕ್ಕಿಗಳು ಬೆಳಕು ಹರಿಯುತ್ತಿದ್ದಂತೆಯೇ ಹಾಡುವುದಕ್ಕಾರಂಭಿಸುತ್ತವೆ, ಅದನ್ನು ಮಾಡಲಾರರು.

ಈಗ ನಾನು ಬರೆಯುವುದಕ್ಕಾರಂಭಿಸಿರುವುದರಿಂದ, ಜನರು ಪ್ರಾಣಿಗಳ ಮೇಲೆ ನಡೆಸುವ ಕಠೋರ ದಬ್ಬಾಳಿಕೆ ಬಗ್ಗೆ ನನಗಿರುವ ಖೇದವನ್ನು ಬಚ್ಚಿಡಲಾರೆ. (ಇದು ಮಾನವ ಕುಲದ ನೈತಿಕ ಅಧಃಪತನದ ಚಿಹ್ನೆಯೇ ಸರಿ) ಪಟ್ಟಣಗಳಲ್ಲಿ ವಾಸಿಸುವ ಮಕ್ಕಳು ಪ್ರಾಣಿಗಳನ್ನಾದರೂ ಎಲ್ಲಿ ನೋಡಿರುತ್ತಾರೆ? ತೋಟವೊಂದಕ್ಕೆ ಮೊದಲ ಬಾರಿ ಭೇಟಿಯಿತ್ತ ಪಟ್ಟಣದ ಮಗುವು, ಹಸುಗಳ ಗೊರಸುಗಳನ್ನು ನೋಡಿ, ಅವು ಕೈ ಚೀಲಗಳೇ? ಎಂದು ಕೇಳಿದ್ದನ್ನು ನಾನು ಬಲ್ಲೆ. ಇದೇ ಮಗು (ಮೃಗಾಲಯದಲ್ಲಿ ಸಿಂಹ, ಹುಲಿ, ಉಡ, ಆನೆ ಇವೆಲ್ಲವನ್ನೂ ಈಗಾಗಲೇ ನೋಡಿದ್ದರೂ) ತಾನು ಒಂಭತ್ತು ವರ್ಷ ವಯಸ್ಸಿನದಾಗಿದ್ದಾಗ ಮೊದಲಬಾರಿ ಆಡೊಂದನ್ನು ನೋಡಿದಾಗ ಅತ್ಯಂತ ಭಯದಿಂದ ಹೆದರಿತ್ತು.

ಹಿಂದೆ ಜನರು ಉದಾತ್ತ ಮನೋಭಾವ

ಫೆಬ್ರವರಿ ೧೯೭೮ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾನ್ ಸ್ಟೇಸೆಲ್‌ರ "ಆಫ್ ಅನಿಮಲ್ಸ್ ಅಂಡ್ ಮೆನ್" ಲೇಖನದ ಭಾವಾನುವಾದ

ದವರಾಗಿದ್ದರು. ಆದರೂ ಕುದುರೆ ಸವಾರಿಯನ್ನು ಏಕೆ ಮಾಡುತ್ತಿದ್ದರೋ ಕಾಣೆ. ಅದೊಂದು ಅತಿಸ್ಪಷ್ಟವಾದ ಅನ್ಯಾಯವೇ ಸರಿ. ಕುದುರೆಯಂತಹ ಸುಂದರ ಹಾಗೂ ನಯವಾದ ಪ್ರಾಣಿಯ ಬೆನ್ನಮೇಲೆ ಸವಾರಿ ಮಾಡುವುದಕ್ಕೆ ಮನುಷ್ಯನಷ್ಟು ಅಸಮಗ್ರ ಹಾಗೂ ಕುರೂಪಿ ಜೀವಿಗೆ ಯಾವ ಹಕ್ಕಿದೆಯೋ ನಾನಂತೂ ತಿಳಿಯೆ. ಇದು ತದ್ವಿರುದ್ಧವಾಗಿರಬೇಕು- ಆದರೆ ಮನುಷ್ಯರಿಗೆ ಕುದುರೆಯನ್ನು ಹೊರುವ ಶಕ್ತಿಯಾದರೂ ಎಲ್ಲಿದೆ, ಅವರು ತೀರಾ ನಿಶ್ಯಕ್ತರು. ಮನುಷ್ಯರು ತಮ್ಮ ಈ ಕೀಳರಿಮೆಯನ್ನು ಮುಚ್ಚಿಡಲು, ಕಾರುಗಳೆಂಬ ಅಸಹ್ಯವಾದ ಲೋಹದ ನಿರ್ಜೀವ ವಸ್ತುಗಳನ್ನು ಕಂಡುಹಿಡಿದರು.

ಒಂದು ಸಣ್ಣ ಚಿಗಟ ಕೂಡ ಮನುಷ್ಯನಿಗಿಂತ ಎಷ್ಟೋ ಬುದ್ಧಿಶಾಲಿಯಾಗಿರುತ್ತದೆ. ಮಾನವನ ಬೆನ್ನಿನ ಮೇಲೆ (ದೊಂಬರಾಟದವನಿಗೂ ಕೆರೆದು ಕೊಳ್ಳಲಾಗದ) ಜಾಗವೊಂದನ್ನು ಹುಡುಕಿ ಅದು ಕಡಿಯಬಲ್ಲದು ಎಂಬುದಾಗಿ ಚಿಗಟಗಳ ಬಗ್ಗೆ ಅಧ್ಯಯನ ಮಾಡಿರುವ ನನ್ನ ಮಿತ್ರರೊಬ್ಬರು ಹೇಳುತ್ತಾರೆ. ಮನುಷ್ಯನಿಗೆ ಈ ಸಾಮರ್ಥ್ಯವಿಲ್ಲ. ಸೃಷ್ಟಿಯ ಒಡೆಯರೂ ಮತ್ತು ಪ್ರಕೃತಿಯನ್ನು ಗೆದ್ದಿರುವವರೂ ಎಂದು ಕೊಚ್ಚಿಕೊಳ್ಳುವ ನಮಗೆ, ಈಗ ಬಚ್ಚಿಟ್ಟುಕೊಳ್ಳಲೂ ಜಾಗವಿಲ್ಲ-ವಿಜ್ಞಾನ ಅಷ್ಟು ಮುಂದುವರಿದಿದೆ ! (ಐನ್‌ಸ್ಟೈನ್‌ರವರು ದ್ರವ್ಯರಾಶಿ-ಶಕ್ತಿ ಸೂತ್ರವನ್ನು ಕಂಡುಹಿಡಿದ ಮೇಲಂತೂ)

ಪ್ರಿಯ ಸ್ನೇಹಿತರೆ, ನನ್ನ ಧ್ವನಿಯಲ್ಲಿರುವ ಈ ರೋಷವನ್ನು ಕ್ಷಮಿಸಿ. ನನಗೇಕೆ ಕೋಪವೆಂಬುದನ್ನು ನೀವು ತಿಳಿದಿದ್ದೀರೆಂದು ಕೊಂಡಿದ್ದೇನೆ. ಮುಗಿಸುವುದಕ್ಕೆ ಮುಂಚೆ ಪ್ರಾಣಿ ಪ್ರಪಂಚದ ಹಿರಿಮೆಯ ಬಗ್ಗೆ ಮತ್ತೊಂದು ಸಾಕ್ಷಿಯನ್ನು ಕೊಡಲು ಇಚ್ಛಿಸುತ್ತೇನೆ : ಪ್ರಾಣಿಗಳು ವೃತ್ತ ಪತ್ರಿಕೆಗಳನ್ನು ಮುದ್ರಿಸಲಾರವು. ಅವುಗಳ ಹತ್ತಿರ ರೇಡಿಯೋ ಇಲ್ಲ. ಜೊತೆಗೆ ಅವು ಟಿ.ವಿ. ನೋಡುವ ಬದಲು, ಭಗವಂತನು ಸೃಷ್ಟಿಸಿರುವ ಈ ಸುಂದರ ಪ್ರಪಂಚವನ್ನು ವೀಕ್ಷಿಸುತ್ತವೆ.

ಪರಿಸರವ ನೀ ರಕ್ಷಿಸಿದರೆ ಪರಿಸರ ನಿನ್ನ
ಪೊರೆಯುವುದು ಪರಿಸರಕೆ ನೀ ಗಾಸಿ
ಮಾಡಿದರೆ
ಪರಿಸರವು ನಿನ್ನ ಸಂಹರಿಸುವುದು ವಿಜ್ಞಾನ
ದುರುಪಯೋಗವೆ ವಿನಾಶಕೆ ನಾಂದಿ
ಅತ್ರಿಸೂನು.

ಹಲವರು, ಜೀವಮಾನವೆಲ್ಲ ಅನೇಕ ದುರ್ಘಟನೆಗಳ ಬಗ್ಗೆಯೇ ಚಿಂತಿಸುತ್ತಿರುತ್ತಾರೆ. ಆದರೆ ಆಶ್ಚರ್ಯವೆಂದರೆ, ಅವರು ಚಿಂತಿಸುವ ಹಲವು ದುರ್ಘಟನೆಗಳು ಅವರ ಜೀವನದಲ್ಲಿ ಸಂಭವಿಸುವುದಿಲ್ಲ ಕೂಡಾ. ಆದ್ದರಿಂದ ಅಂಥ ಚಿಂತೆ ಎಷ್ಟು ವ್ಯರ್ಥವೆಂಬುದನ್ನವರು ಮೊದಲೇ ತಿಳಿದುಕೊಂಡರೆ ಹರ್ಷಚಿತ್ತರಾಗಿರಬಹುದು.

- ಹಬಾಸ್

ಸಹಜೀವನ

ಪ್ರೊ.ಎಂ.ಎನ್. ಗೋಪಾಲನ್
೫೭ ಮಾರುತಿ ದೇವಸ್ಥಾನ ರಸ್ತೆ
ನಾಲ್ಕನೆಯ ಮುಖ್ಯ ರಸ್ತೆ
ಕುವೆಂಪುನಗರ
ಮೈಸೂರು ೫೭೦ ೦೦೯

ಮಾನವನು ಪ್ರಕೃತಿದೇವಿಯ ಮಡಿಲಲ್ಲಿ ಬೆಳೆದ ಒಂದು ಕೂಸು. ಈತ ಬುದ್ಧಿ ಜೀವಿ ಕೂಡ. ತಾನು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ತರ್ಕಿಸುವ ವಿವೇಚನಾಶಕ್ತಿ ಈತನಲ್ಲಿದೆ. ಇವನೊಬ್ಬ ಸಂಘಜೀವಿ ಕೂಡ. ತಾನು ಮಾಡುವ ಅನೇಕ ಕರ್ಮಗಳಿಂದ ಲಭಿಸುವ ಫಲಗಳು ಸಮಾಜದ ಮೇಲೆ ಯಾವ ಪರಿಣಾಮ ಬೀರಲಿವೆ ಎಂದು ಮುಂಚೆಯೇ ತಿಳಿದುಕೊಳ್ಳುವ ಸಾಮರ್ಥ್ಯ ಇವನಿಗೆ ಇದೆ. ಸಮಾಜದ ಏಳಿಗೆಯನ್ನೇ ಪ್ರಧಾನವಾಗಿಟ್ಟುಕೊಂಡು ಮಾಡುವ ಕರ್ಮವೇ ಸತ್ಕರ್ಮ ಎನಿಸಿಕೊಳ್ಳುತ್ತದೆ. ಮಿಕ್ಕೆಲ್ಲವೂ ದುಷ್ಕರ್ಮಗಳು. ದುಷ್ಕರ್ಮದಿಂದ ಸಮಾಜಕ್ಕೆ ಹಾನಿ ತಪ್ಪಿದ್ದಲ್ಲ. ಸಮಾಜ ಅಳಿದರೆ ಸರ್ವನಾಶವಾಗುತ್ತದೆ. ಈ ಘೋರ ಅಂತ್ಯವನ್ನು ತಪ್ಪಿಸಲು ಮನುಷ್ಯ ಸತತ ಪ್ರಯತ್ನ ಮಾಡಬೇಕು. ಸಮಾಜದ ಅಭಿವೃದ್ಧಿಗಾಗಿ ಪ್ರತಿಯೊಬ್ಬ ಮಾನವನು ದುಡಿಯಬೇಕು. ದುಡಿಮೆಯಲ್ಲಿ ಯಾವುದೂ ಹಿರಿಮೆ ಅಲ್ಲ ಮತ್ತು ಯಾವುದೂ ಕಿರಿಮೆ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕೈಲಾಯಾದಷ್ಟು ದುಡಿಮೆ ಮಾಡಬೇಕು. ಕೆಲಸದಲ್ಲಿ ಸ್ವಲ್ಪವು ಆಲಸ್ಯ ಮತ್ತು ಉದಾಸೀನತೆ ಇರಕೂಡದು. ಮಾಡಿದ ಕಾರ್ಯ ಉತ್ತಮ ಗುಣಮಟ್ಟದ್ದಾಗಿರಬೇಕು. ಯಾವ ಕೆಲಸವನ್ನೇ ಆಗಲಿ ಮಿತಕಾಲದಲ್ಲಿ ಮಾಡಬೇಕು.

ಮಾನವನು ಪ್ರಕೃತಿಯಲ್ಲಿರುವ ಪ್ರತಿಯೊಂದು ಕ್ರಿಮಿಕೀಟ ಮತ್ತು ಪ್ರಾಣಿಗಳಿಂದ ಸಮಾಜದ ನೀತಿ ಕಲಿತುಕೊಳ್ಳಬೇಕು. ಇದರಿಂದ ಸಮಾಜವು ಸಂಪದ್ಭರಿತವಾಗುತ್ತದೆ. ಆದರೆ ಇಂದು ಮಾನವನು ತನ್ನ ಅಹಂಕಾರದಿಂದಾಗಿ ತನ್ನ ಸಮಾಜಕ್ಕೆ ಕೊಡಲಿಪೆಟ್ಟು ಹಾಕಲು ಪ್ರಯತ್ನ ನಡೆಸುತ್ತಿದ್ದಾನೆ. ಪ್ರಕೃತಿಯಲ್ಲಿ ಇರುವ ಯಾವ ಪ್ರಾಣಿಯೂ ತನ್ನದೇ ಆದ ಜಾತಿಯ ಪ್ರಾಣಿಗೆ ಶತ್ರುವಾಗಿಲ್ಲ. ಆದರೆ, ದುರ್ದೈವವಶಾತ್, ಮಾನವನಿಗೆ ಮಾನವನೇ ಶತ್ರುವಾಗಿದ್ದಾನೆ. ಪ್ರಪಂಚವೇ ತಲ್ಲಣಿಸಿ ಹೋಗುವಂತಹ ಭಯಂಕರ ಮಾರಕಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿದ್ದಾನೆ. ಈ ಮಾರಕಾಸ್ತ್ರಗಳ ಪ್ರಯೋಗ ತನ್ನ ಜಾತಿಯ ಮಾನವನಲ್ಲದೇ ಬೇರೆ ಯಾರ ಮೇಲೆ? ಮಾನವನು ಪ್ರಕೃತಿಯ ಮೇಲೆ ಅತ್ಯಂತ ಹೇಯವಾಗಿ ದಬ್ಬಾಳಿಕೆ ನಡೆಸುತ್ತಿದ್ದಾನೆ.

ಹೀಗಾಗಿರುವುದರಿಂದಲೇ ಪ್ರಕೃತಿ ತನ್ನ ಮಗುವಿನ ಮೇಲೆ ಮುನಿದಿರುವುದು. ಈಗಲೂ ಕಾಲ ಮಿಂಚಿಹೋಗಿಲ್ಲ. ಮಾನವನು ಎಚ್ಚೆತ್ತು ಕೊಂಡು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕು. ಪ್ರಕೃತಿಯೊಡನೆ ನಮ್ರತಾ ಭಾವನೆಯಿಂದ ಇರಬೇಕು ಮತ್ತು ಸತ್ಕಾರ್ಯದಲ್ಲಿ ನಿರತನಾಗಬೇಕು. ಪ್ರಕೃತಿಯ ಮಿಕ್ಕ ಎಲ್ಲ ಮೃಗ, ಪಕ್ಷಿ, ಪ್ರಾಣಿ ಸಂತಾನಗಳೊಡನೆ ಸಹಬಾಳ್ವೆ ನಡೆಸಬೇಕು. ಇದರಿಂದಲೇ ಮಾನವನ ಅಭ್ಯುದಯ ಮತ್ತು ಸಮಾಜದ ಕಲ್ಯಾಣ. ವಸುದೈವ ಕುಟುಂಬಕಂ ಎಂದರೆ ಈ ವಿಶ್ವವೇ ಒಂದು ಕುಟುಂಬ ಎಂಬ ಮನೋಧರ್ಮವನ್ನು ತಾಳಿ ಮಾನವ ಬಾಳಲು ಕಲಿಯಬೇಕು. ಶರೀರ ಮಾದ್ಯಂ ಖಲು ಧರ್ಮಸಾಧನಂ ಎಂದರೆ ಮಾನವನು ತನ್ನ ಶರೀರವನ್ನು ಧರ್ಮರಕ್ಷಣೆಗಾಗಿ ಮುಡುಪಾಗಿಡಬೇಕು. ಧರ್ಮ

ಎಂದರೇನು? ಅಧರ್ಮವಲ್ಲದ್ದೇ ಧರ್ಮ. ಹಾಗಿದ್ದರೆ ಅಧರ್ಮದ ಗುಣಗಳೇನು? ಅಧರ್ಮದ ಮೂಲಗಳು ಷಡ್ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ. ಎಲ್ಲಿಯುವರೆಗೆ ಮಾನವನು ಈ ಷಡ್ವೈರಿಗಳನ್ನು ದಮನ ಮಾಡುವುದಿಲ್ಲವೋ, ಅಲ್ಲಿವರೆಗೆ ಸಮಾಜದ ತಳಪಾಯ ಭದ್ರವಾಗಿರುವುದಿಲ್ಲ. ಸಮಾಜ ಕುಸಿದು ಬೀಳುತ್ತದೆ. ಇದರಲ್ಲಿ ಲವಲೇಶ ಸಂಶಯವೂ ಇಲ್ಲ. ಸಮಾಜ ದೊಂದಿಗೆ ಮಾನವನೂ ಹೂತು ಹೋಗುತ್ತಾನೆ. ಈ ದುಸ್ಥಿತಿ ಬರಬಾರದು. ಮಾನವನು ಸತತ ಪ್ರಯತ್ನಪಟ್ಟರೆ ಸಮಾಜ ನಿರ್ನಾಮವಾಗುವುದಿಲ್ಲ. ತಾನೂ ಸಹ ಅಳಿದು ಹೋಗುವುದಿಲ್ಲ. ಕಾಲ ಇನ್ನೂ ಮೀರಿಲ್ಲ. ಮಾನವನು ತನ್ನ ತಪ್ಪನ್ನು ಅರಿತು ಮುಂದಿನ ಹೆಜ್ಜೆ ಇಡಬೇಕು ಮತ್ತು ಪ್ರಪಂಚದಲ್ಲಿ ವಿಶ್ವಶಾಂತಿ ಸ್ಥಾಪನೆ ಮಾಡಬೇಕು. ಹಿಂದೆ ವಿಶ್ವಶಾಂತಿಗಾಗಿ ಮಾನವನು ಸಾಕಷ್ಟು ರಕ್ತ ಪ್ರವಾಹ ಹರಿಸಿದ್ದಾನೆ. ಇದು ಶುದ್ಧ ಅವಿವೇಕದ ಮಾರ್ಗ. ಉಗುರಿ ನಿಂದ ಆಗುವ ಕೆಲಸಕ್ಕೆ ಕೊಡಲಿ ಬೇಕೇನು? ಶಾಂತಿ ಸ್ಥಾಪನೆಯು ಅತ್ಯಂತ ಸರಳವಾದ ಕಾರ್ಯ. ಪ್ರತಿಯೊಬ್ಬ ಮಾನವನು ತನ್ನನ್ನು ತಾನೇ ಅರಿತುಕೊಂಡು ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹೆಜ್ಜೆ ಹಾಕಬೇಕು ಅಷ್ಟೆ. ಬೇರೆನೂ ಬೇಕಾಗಿಲ್ಲ. ದೋಣಿ ಸರಿಯಾಗಿ ಹುಟ್ಟು ಹಾಕಿದರೆ ದಡ ಸೇರುತ್ತದೆ.



ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ,
ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ
ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು.
ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸ್‌ವರ್ಥ

ಅನಿರೀಕ್ಷಿತ

ಎಚ್.ಆರ್. ಚಂದ್ರವದನ ರಾವ್
೭೫೮, ೪೭ನೇ ತಿರುವು
೮ನೇ ಬ್ಲಾಕ್, ಜಯನಗರ
ಬೆಂಗಳೂರು-೫೬೦ ೦೮೨

ಆ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಬರಲೋ ಬೇಡವೋ ಎನ್ನುತ್ತಾ ವಸಂತ ಉದಯವಾಗಿತ್ತು. ಕೊಳಚೆ ಪ್ರದೇಶದ ಮನೆಯ ಮುಂದಿರುವ ಹೂಕುಂಡದಲ್ಲಿ ಬೆಳೆಸಿದ ಹೂವಿನಂತೆ ಅಪರೂಪವಾಗಿ ಅಲ್ಲೊಂದು ಇಲ್ಲೊಂದು ಹೂವು. ಎಂದಿನಂತೆ, ಆ ಭಾನುವಾರವೂ ನಿಧಾನವಾಗಿ ಎದ್ದು ಏನೋ ಓದುತ್ತಿದ್ದೆ. ನನ್ನ ಕೊಠಡಿಯಲ್ಲೇ ಮಲಗಿದ್ದ ನನ್ನ ಗಣಿ ಗೆಳೆಯ ಕೋಸ್ಸಿ ಇದ್ದಕ್ಕಿದ್ದ ಹಾಗೆ 'ನಾನು ಇನ್ನುಮುಂದೆ ಇಲ್ಲಿರುವುದಿಲ್ಲ, ಹೊರಟು ಹೋಗುತ್ತೇನೆ. ನೀನೂ ನನ್ನೊಡನೆ ಬರುತ್ತೀಯಾ ?' ಎಂದು ಕೇಳಿದ.

ಪೋಲೆಂಡಿನಿಂದ ಬಂದವರು ಪೈರು ಕಟಾವು ಕಾಲಕ್ಕೆ ಗಣಿ ಕೆಲಸ ಬಿಟ್ಟು ವಾಪಸ್ಸು ಪೋಲೆಂಡಿಗೆ ಹೋಗುತ್ತಾರೆಂದು ನಾನು ಬಲ್ಲೆ. ಆದರೆ ಕೋಸ್ಸಿ ಪೋಲೆಂಡಿಗೆ ಹೋಗುವ ಹಾಗಿಲ್ಲ. ಆದುದರಿಂದ ಇವನನ್ನು ಕೇಳಿದೆ

'ಎಲ್ಲಿಗೆ ?'

'ಅಲೆದಾಡುತ್ತಾ ಬೆಲ್ಜಿಯಂ ಮೂಲಕ ಜರ್ಮನಿಗೆ. ರೈನ್ ನದಿ ಪಾತ್ರದಲ್ಲಿರುವ ಗದ್ದೆ ತೋಟಗಳಲ್ಲಿ ಕೆಲಸ ಮಾಡಲು ಕೆಲಸ ಸಿಕ್ಕುತ್ತದೆ'.

ಕ್ಷಣ ಮಾತ್ರದಲ್ಲಿ ತೀರ್ಮಾನಿಸಿ 'ಒಳ್ಳೆಯ ಯೋಜನೆ' ಎಂದೆ.

ಮಾರನೇ ದಿನ ಕೋಸ್ಸಿ ಗಣಿಯ ಫೋರ್ ಮನ್‌ಗೆ ಇನ್ನು ಮುಂದೆ ನಾವು ಕೆಲಸಕ್ಕೆ ಬರುವುದಿಲ್ಲ ಎಂದು ಹೇಳಿದ. ನನ್ನ ಮಿತ್ರನೊಬ್ಬ ನನ್ನ ಕೈ ಚೀಲ ತೆಗೆದುಕೊಂಡು ತನ್ನ ಹೆಗಲು ಮೇಲೆ ಹಾಕಿಕೊಳ್ಳುವ ದೊಡ್ಡ ಚೀಲ ಕೊಡಲು ಒಪ್ಪಿದ. ನನಗೆ ಬೇಡದ ಆದರೆ ಉಪಯೋಗಕ್ಕೆ ಬರುವ ಬಟ್ಟೆಗಳನ್ನು ಮನೆ ಒಡತಿ ಮೇಡಂ ಲೀಕ್ಲೇರ್‌ಳ ಮಕ್ಕಳಿಗೆ ಕೊಟ್ಟೆ. ಅವು ಅವರ ಅಳತೆಗೆ ಸರಿಯಾಗಿತ್ತು.

ಕಾಫಿ ಕುಡಿದು ಮನೆಯ ಒಡತಿಗೆ ವಿದಾಯ ಹೇಳಿ ನಾವು ಮನೆ ಬಿಟ್ಟೆವು. ಪೈರು ಕಟಾವಿಗೆ ಬರಲು ಇನ್ನು ಸ್ವಲ್ಪ ಕಾಲ ಬೇಕಾಗಿತ್ತು. ಹಾಗಾಗಿ, ನಿಧಾನವಾಗಿ ದಿನಕ್ಕೆ ೧೦-೧೨ ಮೈಲಿ ಮಾತ್ರ ನಡೆಯುತ್ತಾ, ಅನುಕೂಲವಾದ ಕಡೆ ಉಳಿದು ಕೊಳ್ಳುತ್ತಾ, ನಾವು ಪ್ರಯಾಣ ಮಾಡಿದೆವು. ಭೂಮಿಯ ಗರ್ಭದಲ್ಲಿ ತಿಂಗಳುಗಟ್ಟಲೆ ಕೆಲಸಮಾಡಿ ನಂತರ ಭಾಗ್ಯ ಪ್ರಪಂಚದಲ್ಲಿ ಓಡಾಡುವುದು ಎಷ್ಟು ಹರ್ಷ! ಹಸುರು ಹುಲ್ಲು, ಎಲೆ ಚಿಗುರದ ಆದರೆ ಎಲ್ಲಾ ಕೊಂಬೆಗಳ ಮೇಲೂ... ಹಸುರು...ಮೊಗ್ಗುಗಳಿರುವ ಗಿಡಮರಗಳು ಎಷ್ಟು ಚಿತ್ತಾಕರ್ಷಕ ಎಂದು ನನಗೆ ಇಲ್ಲಿಯ ತನಕ ಗೊತ್ತಿಗಲಿಲ್ಲ.

ಕೋಸ್ಸಿ ನನಗೆ ಜರ್ಮನ್ ಭಾಷೆ ಹೇಳಿ ಕೊಡಲು ಶುರುಮಾಡಿದ. ದಾರಿ ಸವೆಸುತ್ತಾ ಹೋಗುವಾಗ ಕಣ್ಣಿಗೆ ಕಂಡ ಗಿಡ-ಮರ, ಪ್ರಾಣಿ-ಪಕ್ಷಿಗಳಿಗೆ ಜರ್ಮನ್ ಭಾಷೆಯಲ್ಲಿ ಏನನ್ನುತ್ತಾರೆ ಎಂದು ತಿಳಿಸುತ್ತಾ ಸರಳ ಜರ್ಮನ್ ವಾಕ್ಯಗಳನ್ನು ಹೇಳಿ ನಾನು ಅವನ್ನು ಪುನಃ ಪುನಃ ನುಡಿಯುವಂತೆ ಮಾಡುತ್ತಿದ್ದ.

ಎಮರ್ಸೆಟ್ ಮಾಮ್‌ನ 'ರೇಜರ್ಸ್ ಎಡ್ಜ್'ನಲ್ಲಿ ಬರುವ ಒಂದು ಪ್ರಸಂಗ.

ಅವನಿಗೆ ಫ್ರೆಂಚ್‌ನಷ್ಟೇ ಜರ್ಮನ್ ಭಾಷೆ ಗೊತ್ತಿತ್ತು. ನಾವು ಜರ್ಮನಿಗೆ ಹೋಗುವುದರೊಳಗೆ ನನಗೆ ಬೇಕಾದ ವಸ್ತುಗಳನ್ನು ಜರ್ಮನ್ ಭಾಷೆಯಲ್ಲಿ ಕೇಳುವಷ್ಟು ಭಾಷೆ ಬಂದಿತ್ತು. ಕೊಲೋನ್ ನಗರ ನಮ್ಮ ದಾರಿಯಲ್ಲಿಲ್ಲದಿದ್ದರೂ ಅಲ್ಲಿರುವ ಹೆಸರಾಂತ ಚರ್ಚ್ ನೋಡಲು ಕೋಸ್ಟಿ ಇಷ್ಟಪಟ್ಟ. ನಾವು ಅಲ್ಲಿಗೆ ಹೋದಮೇಲೆ ಕೋಸ್ಟಿ ಮೂರು ದಿನ ಕಾಣಿಸಿಕೊಳ್ಳಲಿಲ್ಲ. ಬಂದಾಗ ಕಣ್ಣಿನ ಸುತ್ತಲೂ ಕಪ್ಪು, ಹರಿದ ತುಟಿ. ಅವನು ಎಲ್ಲೋ ಜಗಳಕ್ಕಿಳಿದು ಹೊಡೆತ ತಿಂದಿದ್ದ. ಬಂದು ಮಲಗಿದವನು ೨೪ ಗಂಟೆ ಹಾಸಿಗೆಯಿಂದ ಏಳಲಿಲ್ಲ. ಅನಂತರ ನಾವು ರೈನ್ ಕಣಿವೆಯಲ್ಲಿ ಹೊರಟೆವು. ಅಲ್ಲಿ ಬೆಳೆ ಚೆನ್ನಾಗಿತ್ತು. ನಮಗೆ ಕೆಲಸ ಸಿಕ್ಕುವ ಸಂಭವ ಜಾಸ್ತಿ ಅನಿಸಿತು.

ನನಗೆ ಯಾವುದೂ ಇಷ್ಟು ಸಂತೋಷ ಕೊಟ್ಟಿರಲಿಲ್ಲ. ಒಳ್ಳೆಯ ಹವ. ನಾವು ಹಳ್ಳಿ, ಪಟ್ಟಣಗಳ ಮೂಲಕ ಪ್ರವಾಸ ಬೆಳೆಸಿದೆವು. ನೋಡುವುದು ಏನಾದರೂ ಇದ್ದರೆ ಆ ಸ್ಥಳದಲ್ಲಿ ಒಂದೆರಡು ದಿನ ಇರುತ್ತಿದ್ದೆವು. ಒಂದೆರಡು ಸಲ ಇರಲು ತಾಣ ಸಿಕ್ಕದೆ ಹುಲ್ಲು ಮೆದೆಯ ಮೇಲೆ ಮಲಗಿದ್ದೂ ಉಂಟು. ದಾರಿ ಪಕ್ಕದ ಪ್ರವಾಸಿ ಗೃಹದಲ್ಲಿ ನಮ್ಮ ಊಟ. ನಾವು ದ್ರಾಕ್ಷಿ ಬೆಳೆಯುವ ಪ್ರದೇಶಕ್ಕೆ ಬಂದಾರಾಭ್ಯ ಬಿಯರ್ ಬಿಟ್ಟು ದ್ರಾಕ್ಷಾರಸ (ವೈನ್) ಕುಡಿಯಲು ಪ್ರಾರಂಭಿಸಿದೆವು. ಮದ್ಯದಂಗಡಿಗೆ ಬರುತ್ತಿದ್ದವರ ಸ್ನೇಹ ತಾನೇ ತಾನಾಗಿ ಆಗುತ್ತಿತ್ತು. ಕೋಸ್ಟಿಯ ಒರಟು ಹಾಸ್ಯ ಅವರಿಗೆ ನಮ್ಮ ಬಗ್ಗೆ ವಿಶ್ವಾಸ ಹುಟ್ಟುವಂತೆ ಮಾಡಿತ್ತು. ಇಸ್ಪೀಟು ಆಡುವಾಗ ಹಾಸ್ಯದ ಚಟಾಕಿ ಹಾರಿಸಿ ಅವರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಿದ್ದ. ಆಟದಲ್ಲಿ ಸೋಲಿಸಿ ಅವರಿಂದ ಹಣ ಕೀಳುತ್ತಿದ್ದ. ಸ್ವಲ್ಪ ಹಣ ಕಳೆದುಕೊಳ್ಳುವುದಕ್ಕೆ ಅವರೇನೂ ಯೋಚಿಸುತ್ತಿರಲಿಲ್ಲ. ನಾನು ಅವರ ಮೇಲೆ ಜರ್ಮನ್ ಭಾಷೆಯ ಪ್ರಯೋಗ ನಡೆಸುತ್ತಿದ್ದೆ. ಕೊಲೋನ್‌ನಲ್ಲಿದ್ದಾಗ ನಾನು ಕೊಂಡ ಇಂಗ್ಲಿಷ್-ಜರ್ಮನ್ ವ್ಯಾಕರಣದ ಪುಸ್ತಕ ನನಗೆ ತುಂಬ ಪ್ರಯೋಜನಕ್ಕೆ ಬಂತು. ಕೆಲವು ಲೀಟರ್ ವೈಟ್ ವೈನ್ ಹೊಟ್ಟೆಗೆ ಸೇರಿದ ಮೇಲೆ ರಾತ್ರಿ ಕೋಸ್ಟಿ ನನ್ನೊಡನೆ ವಿಚಿತ್ರವಾಗಿ, ಒಂಟಿತನದಿಂದ ಒಂಟಿತನದ ಕಡೆಗೆ ಪಲಾಯನ 'ಆತ್ಮದ ಕತ್ತಲ ರಾತ್ರಿ' 'ಜೀವಾತ್ಮ ಪರಮಾತ್ಮ ಒಂದಾದಾಗ ಆಗುವ ಅದ್ಭುತ ಆನಂದದ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಿದ್ದ. ಆದರೆ ಮುಂಜಾವು ನಾವು ಇಬ್ಬನಿ ಬಿದ್ದ ಹುಲ್ಲು ಹಾಸಿಗೆಯ ಮೇಲೆ ಹೋಗುತ್ತಿರುವಾಗ ಅವನು ಮಾತನಾಡಿದ ಬಗ್ಗೆ ವಿವರ ಕೇಳಿದಾಗ- 'ಮುಚ್ಚ್ಕೇ, ದಡ್ಡ ಶಿಖಾಮಣಿ, ಇವೆಲ್ಲಾ ನಿನಗೇಕೆ ಬೇಕು ; ಜರ್ಮನ್ ಕಲಿಯುವುದರಲ್ಲಿ ಆಸಕ್ತಿ ಬೆಳೆಸಿಕೋ' ಎನ್ನುತ್ತಿದ್ದ.

''ಅವನ ಜೊತೆ ವಾಗ್ವಾದಕ್ಕಿಳಿಯುವುದು ಸಾಧ್ಯವಿಲ್ಲ. ಅವನ ಮುಷ್ಟಿಗೆ ಸುತ್ತಿಗೆಗೆ ಇರುವಷ್ಟು ಬಲ. ಕೋಪ ಬಂದರೆ ನನ್ನನ್ನು ತದಕಿ, ಚರಂಡಿಗೆ ಎಸೆದು ಅವನು ಹೋಗಬಲ್ಲ ಅನ್ನುವುದು ನನಗೆ ಗೊತ್ತು. ಅವನ ಬಗ್ಗೆ ಇಷ್ಟು ದಿನವಾದರೂ ನನಗೆ ತಲೆಬಾಲ ಗೊತ್ತಾಗಿಲ್ಲ. ಕುಡಿದು ನಾಲಗೆ ಹರಿದು ಬಿಟ್ಟಾಗ ಅವನ ಬಾಯಿಯಲ್ಲಿ ಬರುತ್ತಿದ್ದುದು ಗಣಿಯಲ್ಲಿ ಆಡುತ್ತಿದ್ದ ಒರಟು ಪೋಲಿ ಮಾತಲ್ಲ. ಅವನು ಮಾತನಾಡುತ್ತಿದ್ದುದು ಆ 'ವರ್ಣನಾತೀತನ' ಬಗ್ಗೆ. ಆದೇನೂ ತೋರಿಕೆ ಯಲ್ಲ ಎಂದು ನನ್ನ ನಂಬಿಕೆ, ಗಣಿಯಲ್ಲಿ ಅಮಾನುಷ, ಕಷ್ಟದ ಕೆಲಸಕ್ಕೆ ಆತ ತೊಡಗಿಸಿಕೊಂಡದ್ದು

ದೇಹದಂಡನೆಗೆ ಎಂದು ನನ್ನ ಅಭಿಪ್ರಾಯ. ತನ್ನ ಅಂದವಲ್ಲದ ಭಾರಿ ದೇಹದ ಬಗ್ಗೆ ಅವನಿಗೆ ಪ್ರೀತಿ ಇರಲಿಲ್ಲ.

'ವಸಂತಋತು' ಎಲ್ಲೆಲ್ಲೂ ಹಸುರು ಹುಲ್ಲು, ಗಿಡಮರಗಳಲ್ಲಿ ಹಸುರು ಎಲೆ, ತೋಟದಲ್ಲಿ ಬೆಳೆದ ದ್ರಾಕ್ಷಿ ಬಳ್ಳಿಗಳಲ್ಲಿ ದ್ರಾಕ್ಷಿ ಗೊಂಚಲು! ನಮ್ಮಲ್ಲಿದ್ದ ಹಣ ಕಡಿಮೆ ಆಗುತ್ತಿತ್ತು. ಸಾಧ್ಯವಾದರೆ ನನ್ನಲ್ಲಿದ್ದ ಟ್ರಾವೆಲರ್ಸ್ ಚೆಕ್‌ಗಳನ್ನು ಹಾಗೆಯೇ ಉಳಿಸಿಕೊಳ್ಳುವ ಯೋಜನೆ ನನ್ನದು. ಕೆಲಸ ಸಿಗಬಹುದೆಂದು ಒಂದು ತೋಟದ ಮನೆಗೆ ಹೋಗಿ ಕೋಸ್ಟಿ ವಿಚಾರಿಸಿದ. ಧೂಳು ರಸ್ತೆಯ ಮೇಲೆ ನಡೆದೂ ನಡೆದೂ ನಮ್ಮ ಬಟ್ಟೆ ಬರೆ ಎಲ್ಲಾ ಕೊಳೆ, ಮುಖದಲ್ಲಿ ಬೆವರು. ಕೋಸ್ಟಿ ಒಬ್ಬ ದಾರಿಗಳ್ಳನ ಹಾಗೆ ಕಾಣುತ್ತಿದ್ದ, ಬಹುಶಃ ನಾನೂ ಹಾಗೆಯೇ ಕಾಣಿಸುತ್ತಿದ್ದೆ. ಹೀಗಾಗಿ, ನಮಗೆ ಕೆಲಸ ಸಿಗಲಿಲ್ಲ. ಎಲ್ಲಿಗೆ ಹೋದರೂ ನಮಗೆ ಕೆಲಸವಿಲ್ಲ. ಒಂದು ಕಡೆ ಕೋಸ್ಟಿಗೆ ಕೆಲಸ ಸಿಕ್ಕಿತು, ನನಗಿಲ್ಲ. 'ನೀನು ಕೆಲಸಮಾಡು, ನಾನು ಹೋಗುತ್ತೇನೆ' ಎಂದೆ. ಅವನು ಒಪ್ಪಲಿಲ್ಲ. ನನ್ನ ಬಗ್ಗೆ ಅವನಿಗೆ ಏನೋ ಪ್ರೀತಿ. 'ಕೆಲಸಕ್ಕೆ ಒಪ್ಪಿಕೊಳ್ಳಬೇಕಾಗಿತ್ತು' ಎಂದೆ. ನನ್ನ ತಲೆ ಕುಕ್ಕಿ 'ಸುಮ್ಮನಿರು' ಎಂದ ಕೋಸ್ಟಿ.

ಕೊನೆಗೆ ನಮ್ಮ ಅದೃಷ್ಟದ ಬಾಗಿಲು ತೆರೆಯಿತು. ನಾವು ಒಂದು ಹಳ್ಳಿಯ ಮೂಲಕ ಹೋಗುವಾಗ ಒಂದು ತೋಟದ ಮನೆ ಕಾಣಿಸಿತು. ಕೋಸ್ಟಿ ಹೋಗಿ ಬಾಗಿಲು ತಟ್ಟಿದ. ಒಬ್ಬಾಕೆ ಬಂದು ಬಾಗಿಲು ತೆರೆದಳು. ಕೋಸ್ಟಿ 'ನಮಗೆ ಕೆಲಸಕ್ಕೆ ಕೂಲಿ ಬೇಡ. ಊಟ, ಉಳಿದುಕೊಳ್ಳಲು ಜಾಗ ಕೊಟ್ಟರೆ ಕೆಲಸ ಮಾಡುತ್ತೇವೆ' ಎಂದ. ಅವಳು ಬಾಗಿಲನ್ನು ರಪ್ ಎಂದು ಹಾಕದೆ ಕಾಯುವಂತೆ ಹೇಳಿದ್ದು ನಮಗೆ ಆಶ್ಚರ್ಯ. ಒಳಗಿದ್ದ ಯಜಮಾನ ಹೊರಗೆ ಬಂದು ನಮ್ಮನ್ನು ನೋಡಿ, ನಾವು ಯಾರು, ಎಲ್ಲಿಂದ ಬಂದದ್ದು ಎಂದು ವಿಚಾರಿಸಿದ. ನಾನು ಅಮೆರಿಕನ್ ಎಂದು (ಗುರುತು ಚೀಟಿ ನೋಡಿ) ಗೊತ್ತಾದಾಗ ಅವನಿಗೆ ಏಕೋ ನನ್ನ ಕಂಡರೆ ಇಷ್ಟವಾಗಲಿಲ್ಲ. ಹಾಗಾದರೂ ನಮ್ಮನ್ನು ಒಳಗೆ ಕರೆದು ಕೂರಿಸಿ ಕುಡಿಯಲು ವೈನ್ ಕೊಟ್ಟ. ನಂತರ ಮಾತನಾಡುತ್ತಾ ಜಮೀನಿನಲ್ಲಿ ಕೆಲಸ ಮಾಡುವುದಕ್ಕೆ ಕೂಲಿಗಳು ಸಿಗುವುದು ಕಷ್ಟ, ಕೂಲಿಗಳೆಲ್ಲಾ ಎಲ್ಲೆಲ್ಲೂ ತಲೆ ಎತ್ತುತ್ತಿರುವ ಕಾರ್ಖಾನೆಗಳಿಗೆ ಸೇರುತ್ತಿದ್ದಾರೆ ಎಂದು ಹೇಳಿ ತಮ್ಮನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಹೇಳಿದ. ಅವರ ಮನೆಯಲ್ಲಿಯೇ ನಾವು ಮಲಗಲು ಬೇಕಾದಷ್ಟು ಜಾಗವಿತ್ತು. ಆದರೂ ಅವನು ಹೊರಗೆ ಹುಲ್ಲು ಮೆದೆಯ ಮೇಲೆ ಎರಡು ಹಾಸಿಗೆ ಇದೆ. ಅದರ ಮೇಲೆ ನೀವು ಮಲಗಬಹುದು' ಎಂದ.

ಕೆಲಸವೇನೂ ಕಷ್ಟದ್ದಲ್ಲ. ಹಸುಗಳನ್ನು ಮತ್ತು ಹಂದಿಗಳನ್ನು ನೋಡಿಕೊಳ್ಳುವುದು ನಮ್ಮ ಕೆಲಸ. ರೈತರು ವ್ಯವಸಾಯಕ್ಕೆ ಉಪಯೋಗಿಸುವ ಕೆಲವು ಯಂತ್ರಗಳು ಕೆಟ್ಟು ನಿಂತಿದ್ದವು. ಅವನ್ನು ದುರಸ್ತಿ ಮಾಡಬೇಕು, ಪೈರು ಕಟಾವಿಗೆ ಸಹಾಯ ಮಾಡಬೇಕು, ಅಷ್ಟೆ. ನಮಗೆ ಅಲ್ಲಿಯ ಜೀವನ ಸುಖಮಯವಾಗಿತ್ತು:

ಅವರ ಮನೆಯಲ್ಲಿದ್ದವರು-

ಯಜಮಾನ ಬೆಕರ್, ಅವನ ಹೆಂಡತಿ, ವಿಧವೆ ಸೊಸೆ ಮತ್ತು ಅವಳ ಮಕ್ಕಳು . ಬೆಕರ್ ಒಬ್ಬ ಭಾರಿ ಆಳು, ಸುಮಾರು ೪೦ ವರ್ಷ, ಬೆಳ್ಳಗಾಗುತ್ತಿರುವ ಕೂದಲು, ಯುದ್ಧದಲ್ಲಿ ಭಾಗವಹಿಸಿ ಅಲ್ಲಿ ಕಾಲಿಗಾದ ಗಾಯದಿಂದ ಇನ್ನೂ ಅವನು ಕುಂಟುತ್ತಿದ್ದ. ಗಾಯದ ನೋವು, ನೋವನ್ನು ಮರೆಯಲು ಅವನು ಕುಡಿಯುವುದನ್ನು ಕಲಿತ. ಈಗ ಮಲಗುವ ವೇಳೆಗೆ ಅವನು ಕಂಠಭರ್ತಿ

ಕುಡಿದಿರುತ್ತಾನೆ. ಕೋಸ್ಕಿ ಅವನೊಡನೆ ಚೆನ್ನಾಗಿ ಹೊಂದಿಕೊಂಡ. ಇಬ್ಬರೂ ಒಟ್ಟಿಗೆ ಕುಡಿದು ಬಂದು ಊಟವಾದ ಮೇಲೆ ಇಸ್ಕೀಟ್ ಆಡಿ ನಂತರ ವೈನ್ ಕುಡಿಯುತ್ತಿದ್ದರು.

ಫ್ರಾ ಬೆಕರ್ ಕೂಲಿಯಾಗಿ ಬಂದ ಹುಡುಗಿ. ಬೆಕರ್ ಅವಳನ್ನು ಒಂದು ಅನಾಥಾಶ್ರಮದಿಂದ ಕರೆದು ಕೊಂಡು ಬಂದಿದ್ದ. ಹೆಂಡತಿ ಸತ್ತ ಮೇಲೆ ಅವಳನ್ನೇ ಮದುವೆಯಾದ . ಅವನಿಗಿಂತ ವಯಸ್ಸಿನಲ್ಲಿ ಬಹಳ ಚಿಕ್ಕವಳು. ನೋಡಲು ಅಂದವಾಗಿದ್ದಳು. ಸುಪುಷ್ಟವಾಗಿ ಬೆಳೆದ ದೇಹ ಕೆಂಪು ಕೆನ್ನೆಗಳು, ಸುಂದರ ಕೇಶರಾಶಿ, ಕಾಮದ ಹಸಿವು ತೋರಿಸುವ ಮುಖ. ಕೋಸ್ಕಿ ಕೂಡಲೇ ಅವಳಿಗೆ ಲೈಂಗಿಕ ತೃಪ್ತಿ ಸಿಕ್ಕಿಲ್ಲವೆಂಬ ತೀರ್ಮಾನಕ್ಕೆ ಬಂದ. ಅವಳಿಗೆ ಬೇರೆಯವರ ಸಹವಾಸ ಬೇಕಾಗಿದೆ ಎಂದು ನನ್ನಲ್ಲಿ ಹೇಳಿದ. ಸಭ್ಯತೆಯ ಬಗ್ಗೆ ಅವನಿಗೆ ಹೇಳುವುದು ಉಪಯೋಗವಿಲ್ಲವೆಂದು ತಿಳಿದು ಎಚ್ಚರಿಕೆ ಯಿಂದ ಇರು ಎಂದು ಹೇಳಿದೆ. ಬೆಕರ್‌ಗೆ ಗೊತ್ತಾಗದೆ ಇರಬಹುದು, ಮನೆಯಲ್ಲಿರುವವರ ಕಣ್ಣು ತಪ್ಪಿಸಿ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಎಚ್ಚರಿಕೆ ಕೊಟ್ಟೆ.

ಎಲಿ ೩೦ವರ್ಷ ಪ್ರಾಯದ , ದೊಡ್ಡ ದೇಹದ ಹೆಂಗಸು-ಕರಿ ಕಣ್ಣು , ಕಪ್ಪುಕೂದಲು, ಪ್ರಸನ್ನ ವದನ. ಅವಳಿನ್ನು ಯುದ್ಧದಲ್ಲಿ ಮಡಿದ ಗಂಡನಿಗಾಗಿ ದುಃಖ ಸೂಚಕ ಉಡುಗೆಯನ್ನು ತೊಡುತ್ತಿದ್ದಳು. ದೇವರಲ್ಲಿ ಭಕ್ತಿ. ಭಾನುವಾರ ದಂದು ತಪ್ಪದೆ ಹಳ್ಳಿಯ ಚರ್ಚಿಗೆ ಹೋಗು ತ್ತಿದ್ದಳು. ಅವಳಿಗೆ ಮೂರು ಜನ ಮಕ್ಕಳು. ಒಂದು ಮಗು ಗಂಡ ಸತ್ತ ಮೇಲೆ ಹುಟ್ಟಿದ್ದು. ಅವಳು ತೋಟದ ಕೆಲಸ ಮಾಡುತ್ತಿದ್ದುದು ಸ್ವಲ್ಪ. ಮಕ್ಕಳನ್ನು ನೋಡಿಕೊಳ್ಳುವುದು ಮತ್ತು ಕಾದಂಬರಿ ಓದುವುದರಲ್ಲೇ ಅವಳು ಕಾಲ ಕಳೆಯುತ್ತಿದ್ದಳು.

ಎಲಿ ಮತ್ತು ಫ್ರಾ ಮಧ್ಯೆ ಸ್ನೇಹ ಸೌಹಾರ್ದ ವಿರಲಿಲ್ಲ, ಇದ್ದದ್ದು ದ್ವೇಷ ಮಾತ್ರ. ಎಲಿಗೆ ಫ್ರಾ ಬೆಕರನ್ನು ಕಂಡರೆ ಕೀಳುಭಾವನೆ. ಕೆಲಸದ ಆಳಾಗಿ ಬಂದು ಮನೆಯ ಯಜಮಾನಿಯಾಗಿ ರುವುದು ಅವಳ ಮನಸ್ಸಿಗೆ ಒಗ್ಗದ ವಿಷಯ. ಎಲಿ ಒಬ್ಬ ಅನುಕೂಲಸ್ಥ ರೈತನ ಮಗಳು. ಮದುವೆ ಯಾದಾಗ ಗಂಡನ ಮನೆಯಿಂದ ಹಣ ತಂದವಳು. ಅವಳು ಓದಿದ್ದು ಹಳ್ಳಿಯ ಪಾಠಶಾಲೆ ಯಲ್ಲಲ್ಲ ; ಹತ್ತಿರದಲ್ಲಿದ್ದ ವಿಂಗ್ ಎನ್ ಬರ್ಗ್ ಶಾಲೆಯಲ್ಲಿ. ಹದಿನಾಲ್ಕು ವರ್ಷ ವಯಸ್ಸಾದಾಗ ಫ್ರಾ ತೋಟಕ್ಕೆ ಬಂದಳು. ಅವಳಿಗೆ ಓದು ಬರಹ ಮಾತ್ರ ಗೊತ್ತಿತ್ತು. ಆ ಇಬ್ಬರು ಹೆಂಗಸರ ಮಧ್ಯೆ ಇದ್ದ ವೈಮನಸ್ಸಿಗೆ ಇದೂ ಒಂದು ಕಾರಣ. ಸಮಯ ಒದಗಿದಾಗಲೆಲ್ಲಾ ಎಲಿ ತನ್ನ ಪಾಂಡಿತ್ಯ ಪ್ರದರ್ಶಿಸುತ್ತಿದ್ದಳು. ಆಗ ಕೋಪದಿಂದ ಫ್ರಾ ಬೆಕರ್, ಮುಖ ಕೆಂಪಗೆ ಮಾಡಿಕೊಂಡು, ರೈತನ ಹೆಂಡತಿಗೆ ಇವೆಲ್ಲ ಏಕೆ ಅನ್ನುತ್ತಿದ್ದಳು. ಎಲಿ ತನ್ನ ಮುಂಗೈಗೆ ಕಟ್ಟಿಕೊಂಡ ಗಂಡನ 'ಪರಿಚಯದ ಲೋಹದ ಬಿಲ್ಲೆ'ಯನ್ನು ತೋರಿಸುತ್ತಾ, 'ನಾನು ರೈತನ ಹೆಂಡತಿ ಅಲ್ಲ, ರೈತನ ವಿಧವೆ. ದೇಶಕ್ಕಾಗಿ ಹೋರಾಡಿ ಯುದ್ಧದಲ್ಲಿ ಮಡಿದ ಒಬ್ಬ ಯೋಧನ ಮಡದಿ' ಎನ್ನುತ್ತಿದ್ದಳು.

ಎಲಿಗೆ ನಾನು ಜರ್ಮನ್ ಭಾಷೆ ಕಲಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎಂದು ಗೊತ್ತಾದೊಡನೆ ಅವಳು ಮನೆಯಲ್ಲಿದ್ದ ತನ್ನ ಹಳೆಯ ಜರ್ಮನ್ ಪುಸ್ತಕಗಳನ್ನು ಕೊಟ್ಟು ಪಾಠ ಹೇಳಿ ಕೊಡುವುದಾಗಿ ತಿಳಿಸಿದಳು. ಸಂಜೆ ಊಟವಾದ ಮೇಲೆ ನಾನು ಅವಳು ವೆರಾಂಡದಲ್ಲಿ ಪಾಠಕ್ಕೆ ಕುಳಿತುಕೊಳ್ಳುತ್ತಿದ್ದೆವು. ನಾನು ಓದುವಾಗ ನನ್ನ ಉಚ್ಚಾರಣೆಯನ್ನು ಸರಿಪಡಿಸುತ್ತಿದ್ದಳು. ಹೊಸ ಪದಗಳಿಗೆ ಅರ್ಥ

ಹೇಳುತ್ತಿದ್ದಳು. ಫ್ರಾ ಬೆಕರ್ ಆಗ ಅಡುಗೆ ಮನೆಯಲ್ಲಿ ಕೆಲಸದಲ್ಲಿ ತೊಡಗಿರುತ್ತಿದ್ದಳು.

ಫ್ರಾ ಬೆಕರಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳ ಬೇಕೆಂದು ಕೋಸ್ಟಿ ಪ್ರಯತ್ನ ಮಾಡುತ್ತಲೇ ಬಂದ. ಅವಳು ಸಂತೋಷವಾಗಿ ಅವನೊಡನೆ ಮಾತನಾಡುತ್ತಿದ್ದಳು ನಿಜ. ಆದರೆ ಅವನು ಒಮ್ಮೆ ಅವಳನ್ನು ಚಿವುಟದಾಗ ಅವನ ಕೆನ್ನೆಗೆ ಬಾರಿಸಿದಳು.

ನನ್ನನ್ನು ನೋಡಿ ಹೆಂಗಸರು ಮಾರು ಹೋಗುತ್ತಾರೆ ಎಂದು ನಾನು ಎಂದೂ ಯೋಚಿಸಿರಲಿಲ್ಲ. ಆದರೆ ಫ್ರಾ ಬೆಕರ್ ನನ್ನನ್ನು ನೋಡಿ ಮೋಹಗೊಂಡಿದ್ದಳು. ಆಕೆ ನನಗಿಂತ ತುಂಬ ವಯಸ್ಸಾದವಳು, ಜೊತೆಗೆ ನನ್ನ ದಣಿಯ ಪತ್ನಿ. ಅವನಿಗೆ ಎರಡು ಬಗೆಯುವುದು ನನಗೆ ಇಷ್ಟವಿರಲಿಲ್ಲ. ಕೋಸ್ಟಿ ನನ್ನೊಡನೆ 'ನೋಡು, ಫ್ರಾಗೆ ನಾನು ಬೇಕಿಲ್ಲ; ನಿನ್ನ ಸಂಗ ಬೇಕಾಗಿದೆ, ಮಜಾ ಮಾಡು' ಎಂದ. ಅದಕ್ಕೆ ನಾನು 'ಅರ್ಥವಿಲ್ಲ, ಅವಳಿಗೆ ನಮ್ಮಮ್ಮನಷ್ಟು ವಯಸ್ಸಾಗಿದೆ' ಎಂದೆ.

'ಆದರೇನಂತೆ, ಅವಳು ಚಿಕ್ಕ ಹುಡುಗಿ ಯಲ್ಲ. ಆದರೆ ನೋಡಲು ಅಂದವಾಗಿರುವ ಹೆಂಗಸು' ಎಂದು ಹೇಳಿದ.

ಫ್ರಾ ಬೆಕರ್, ಊಟ ಮಾಡುವಾಗ ನನಗೆ ಧಾರಾಳವಾಗಿ ಬಡಿಸುತ್ತಿದ್ದಳು. ನನ್ನನ್ನು ಏಕಾಂತ ದಲ್ಲಿ ಕಂಡಾಗ ಮಾದಕ ನಗೆ ನಗುತ್ತಿದ್ದಳು. ನನಗೆ ಯಾರಾದರೂ ಸ್ನೇಹಿತೆಯರು ಇದ್ದಾರೆಯೆ ಎಂದು ಕೇಳಿ, ನನ್ನಂತಹ ಯುವಕನಿಗೆ ಇಂತಹ ಜಾಗದಲ್ಲಿ ಯಾರೂ ಸಿಕ್ಕುವುದಿಲ್ಲ ವೆನ್ನುವುದು ದುಃಖದ ವಿಷಯ ಎಂದು ತಿಳಿಸಿದಳು. ನನ್ನ ಬಳಿ ಇದ್ದ ಮೂರು ಷರಟು ಗಳೆಲ್ಲವೂ ಹರಿದು ಹೋಗಿತ್ತು. ಹರಿದ ಬಟ್ಟೆ ಹಾಕಿಕೊಳ್ಳುವುದು ಅವಮಾನವೆಂದು ಹೇಳಿ, ತಂದುಕೊಟ್ಟರೆ ರಿಪೇರಿ ಮಾಡಿಕೊಡುತ್ತೇನೆ ಎಂದು ತಿಳಿಸಿದಳು. ಎಲಿಗೆ ಅವಳು ಹೇಳಿದ್ದು ಕೇಳಿ ಬಂತು. ಪಾಠ ಹೇಳಿ ಕೊಡುವ ಸಮಯ ದಲ್ಲಿ ನಿಮ್ಮ ಬಟ್ಟೆಗಳು ಹರಿದಿದ್ದರೆ ನನ್ನ ಬಳಿ ಕೊಡಿ, ತೇಪೆ ಹಾಕಿ ಕೊಡುತ್ತೇನೆ ಎಂದಳು. ಒಂದೆರೆಡು ದಿನಗಳಲ್ಲಿ ನನ್ನ ಕಾಲು ಚೀಲ ರಿಪೇರಿ ಯಾಗಿತ್ತು, ಹರಿದ ಷರಟಿಗೆ ತೇಪೆ ಹಾಕಿತ್ತು, ಹೀಗೆ ಮಾಡಿದ್ದು ಯಾರೋ ನನಗೆ ಗೊತ್ತಿಲ್ಲ.

ಒಮ್ಮೆ ನಾನು ಮತ್ತು ಫ್ರಾ ಬೆಕರ್ ಇಬ್ಬರೇ ಅಡುಗೆಮನೆಯಲ್ಲಿದ್ದಾಗ ಎಲಿ ಇದ್ದಕ್ಕಿದ್ದಂತೆ ಅಲ್ಲಿಗೆ ಬಂದಳು. ಅವಳು ನಮ್ಮ ಮೇಲೆ ಕಣ್ಣಿಟ್ಟು ನಮ್ಮನ್ನು ಹಿಡಿಯಬೇಕೆಂದಿದ್ದಾಳೆ ಎಂದು ನನಗೆ ಅನುಮಾನಬಂತು. ಅವಕಾಶ ಸಿಕ್ಕಿದೊಡನೆ ತುಂಬ ರಂಪ ಮಾಡುತ್ತಾಳೆ ಎನಿಸಿತು. ಹೊಟ್ಟೆಕಿಚ್ಚಿನ ಪ್ರಾಣಿ. ಕಥೆ ಕಟ್ಟಿ ಬೆಕರ್ ಕಿವಿಗೆ ಇದ್ದದ್ದು, ಇಲ್ಲದ್ದು ಎಲ್ಲಾ ಹೇಳಬಹುದು. ಆಗ ನನ್ನ ಪಾಡೇನು ? ಪೈರು ಕಟಾವು ಆಗುವವರೆಗೂ ಹಳ್ಳಿಯನ್ನು ಬಿಡಲು ನನಗೆ ಇಷ್ಟವಿರಲಿಲ್ಲ.

ಬೇಸಿಗೆ ಶುರುವಾಗಿತ್ತು. ನಾವು ದೈತ್ಯರಂತೆ ಕೆಲಸ ಮಾಡುತ್ತಿದ್ದೆವು-ಹುಲ್ಲನ್ನು ಕತ್ತರಿಸು ವುದು, ಚೆರ್ರಿ ಹಣ್ಣುಗಳನ್ನು ಕೀಳುವುದು , ಜಾನುವಾರು ಗಳನ್ನು ನೋಡಿಕೊಳ್ಳುವುದು ಇತ್ಯಾದಿ. ಬೆಕರ್ ಹಣ್ಣುಗಳನ್ನು ಏನ್‌ಸನ್ ಬರ್ಗ್‌ಗೆ ಹೋಗಿ ಮಾರಿ ಬರುತ್ತಿದ್ದ. ಸೂರ್ಯ ಹುಟ್ಟುವ ಮುಂಚೆ ಎದ್ದರೆ ಸಂಜೆವರೆಗೂ ಕೆಲಸ ಮಾಡಿ ರಾತ್ರಿ ಊಟವಾದೊಡನೆ ನಾನು ಮಲಗಿ ಕೊಳ್ಳುತ್ತಿದ್ದೆ. ನನ್ನ ಜರ್ಮನ್ ಕಲಿಕೆ ನಿಂತಿತ್ತು. ಸಂಜೆ ಕೋಸ್ಟಿ ಮತ್ತು ಬೆಕರ್ ಹಳ್ಳಿಯ ಮದ್ಯದಂಗಡಿಗೆ ಹೋಗಿ ವಾಪಸ್ಸು

ಬರುವುದರಲ್ಲಿ ನನಗೆ ಗಾಢ ನಿದ್ದೆ.

ಒಂದು ರಾತ್ರಿ ನಾನು ನಿದ್ದೆಯಲ್ಲಿರುವಾಗ ಯಾರೋ ಎಬ್ಬಿಸಿದರು. ಅರ್ಧ ನಿದ್ದೆ. ಯಾರು ಎಂದು ಗೊತ್ತಾಗಲಿಲ್ಲ. ಒಂದು ಬೆಚ್ಚನೆಯ ಕೈ ನನ್ನ ಬಾಯಿಯನ್ನು ಹಗುರವಾಗಿ ಮುಚ್ಚಿತು. ಯಾರೋ ನನ್ನ ಪಕ್ಕದಲ್ಲಿ ಮಲಗಿದ್ದಾರೆ ಅನಿಸಿತು. ನಾನು ಕೈ ಕಿತ್ತು ಹಾಕಿದೆ. ಆದರೆ ನನ್ನ ಬಾಯಿಯ ಮೇಲೆ ಇನ್ನೊಂದು ಬಾಯಿ ಬಂದು ಒತ್ತಲು ಶುರುಮಾಡಿತು. ಎರಡು ಕೈಗಳು ನನ್ನನ್ನು ಅಪ್ಪಿಕೊಂಡವು. ಫ್ರಾ ಬೆಕರಳ ದಪ್ಪ ಸ್ತನಗಳು ನನ್ನ ಎದೆಯನ್ನು ಒತ್ತುತ್ತಿದ್ದವು. ಅವಳು 'ಸದ್ದುಮಾಡಬೇಡ' ಎಂದಳು. ನನ್ನನ್ನು ಬಿಗಿಯಾಗಿ ಹಿಡಿದು ನನ್ನ ಮುಖಕ್ಕೆ ತನ್ನ ಮಾದಕ ತುಟಿಗಳಿಂದ ಮುತ್ತಿಟ್ಟಳು. ಕೈಗಳು ನನ್ನ ಶರೀರದ ಮೇಲೆಲ್ಲಾ ಓಡಾಡಿದವು. ಅವಳ ಕಾಲುಗಳು ನನ್ನ ಕಾಲುಗಳೊಡನೆ ಹೊಸೆದುಕೊಂಡವು. ಕೋಸ್ಪಿ ಗಾಢನಿದ್ದೆಯಲ್ಲಿದ್ದ. ನನಗಾಗ ೨೩. ವರ್ಷ. ಗಲಾಟೆ ಎಬ್ಬಿಸಿ ಅವಳನ್ನು ಆಚೆ ದಬ್ಬಲು ಆಗುತ್ತಿರಲಿಲ್ಲ. ಜೊತೆಗೆ ಆಸೆಪಟ್ಟು ಬಂದವಳ ಅಭಿಲಾಷೆಯನ್ನು ತಿರಸ್ಕರಿಸಿ ಅವಳ ಮನ ನೋಯಿಸಲು ನನಗೆ ಇಷ್ಟವಾಗಲಿಲ್ಲ. ಹಾಗಾಗಿ ಅವಳು ನನ್ನಿಂದ ಏನನ್ನು ಅಪೇಕ್ಷಿಸಿದಳೋ ಅದನ್ನು ಮಾಡಿದೆ. ನಂತರ ಅವಳು ಕಷ್ಟಪಟ್ಟು ಏಣಿಯಿಂದ ಇಳಿದು ಹೋದಳು. ನಾನು ಭಾರಿ ನಿಟ್ಟುಸಿರುಬಿಟ್ಟೆ. ಎಂತಹ ಗಂಡಾಂತರ! ಬೆಕರ್ ಹೆಂಡತಿ ಪಕ್ಕದಲ್ಲಿ ಇಲ್ಲದಿರುವುದನ್ನು ನೋಡಿ ಏನು ಮಾಡಬಹುದು? ಎಲಿಗೆ ಎಂದೂ ಗಾಢ ನಿದ್ದೆ ಹತ್ತುವುದಿಲ್ಲ. ಅವಳು ಎಚ್ಚರವಾಗಿದ್ದರೆ ಫ್ರಾ ಇಲ್ಲಿಗೆ ಬಂದದ್ದು ಗೊತ್ತಾಗುವುದು. ಆಗ?

ಇದ್ದಕ್ಕಿದ್ದ ಹಾಗೆ ನನಗೆ ಏನೋ ಹೊಳೆಯಿತು. ಅವಳು ನನ್ನ ಜೊತೆ ಇದ್ದಾಗ ಮುಂಗೈಗೆ ಕಟ್ಟಿಕೊಂಡಿದ್ದ ಲೋಹದ ಬಿಲ್ಲೆ ನನ್ನ ಚರ್ಮಕ್ಕೆ ತಾಕುತ್ತಿತ್ತು. ಅದು ಎಲಿಯ ಗಂಡನ ಗುರುತಿನ ಬಿಲ್ಲೆ. ಅಂದರೆ ನನ್ನ ಹಾಸಿಗೆ ಬಂದವಳು ಫ್ರಾ ಬೆಕರ್ ಅಲ್ಲ; ಎಲಿ. ಹೌದು. ಬಂದವರು ಯಾರು ಎಂದು ನನಗೆ ಗೊತ್ತಾಗಲಿಲ್ಲ. ಕಾರಣ ಅಮಾವಾಸ್ಯೆ ಕತ್ತಲು. ಅವಳು 'ನಿಶ್ಶಬ್ದ' ಅನ್ನುವುದನ್ನು ಬಿಟ್ಟು ಇನ್ನು ಯಾವ ಮಾತನ್ನು ಆಡಲಿಲ್ಲ. ಫ್ರಾ ಮತ್ತು ಎಲಿ ಇಬ್ಬರೂ ದೊಡ್ಡ ದೇಹದ ಹೆಂಗಸರು. ಫ್ರಾಗೆ ನನ್ನ ಮೇಲೆ ಮೋಹ ಅಂದುಕೊಂಡಿದ್ದೆ, ಎಲಿ ನನ್ನನ್ನು ಇಷ್ಟಪಡುತ್ತಾಳೆ ಎಂದು ಒಂದು ಕ್ಷಣವೂ ಅಂದುಕೊಂಡಿರಲಿಲ್ಲ.

ನನಗೆ ಅಲ್ಲಿರುವುದು ಉಚಿತವಲ್ಲ ಅನಿಸಿತು. ಕೋಸ್ಪಿ ನಿದ್ದೆಯಲ್ಲಿದ್ದ. ದೀಪ ಹೊತ್ತಿಸಿ ಬಟ್ಟೆ ಹಾಕಿಕೊಂಡೆ. ನನ್ನ ಸಾಮಾನುಗಳನ್ನು ಚೀಲಕ್ಕೆ ಹಾಕಿ, ಶಬ್ದ ಮಾಡದೆ ಮನೆ ಬಿಟ್ಟೆ.

ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

ತಲೆಯೊಳಗೆ ಗುಂಡು ಇದ್ದ ಹುಡುಗಿ

ಜಿ.ವೈದೇಹಿ
೩೫೮ ಪುನರ್ವಸು,
ನವಿಲು ಮುಖ್ಯ ರಸ್ತೆ
ಕುವೆಂಪುನಗರ
ಮೈಸೂರು-೫೭೦ ೦೨೩.

ಸರ್ಕಾರದ ವಿರುದ್ಧ ಎದ್ದ ದಂಗೆಕೋರರಿಂದ ತಪ್ಪಿಸಿಕೊಳ್ಳಲು ಗಣಿ ಇಂಜನಿಯರ್ ಮಲೊಮೊ ಕೋಲ್ ಮತ್ತು ಆತನ ಗರ್ಭಿಣಿ ಪತ್ನಿ ಮರಿಯುಮ ಉತ್ತರದ ಕಡೆ ಪಯಣಿಸಿದರು. ಆಗ ೧೯೯೫ರ ಜನವರಿ ತಿಂಗಳು. ಆಫ್ರಿಕದ ಪಶ್ಚಿಮ ತೀರದ ಉತ್ತರ ಸಿಯೆರ ಲಿಯೋನ್‌ನಲ್ಲಿ ಉಗ್ರತಮ ಪ್ರಾಂತೀಯ ದಂಗೆ ಪ್ರಾರಂಭವಾಗಿತ್ತು. ಸಶಸ್ತ್ರ ದಂಗೆಕೋರರು ಹಳ್ಳಿಗಳ ಮೇಲೆ ಧಾಳಿ ಇಟ್ಟು ಸರ್ಕಾರಕ್ಕೆ ಪ್ರಾಮಾಣಿಕನೆಂದು ಕಂಡುಬಂದ ಪ್ರತಿಯೊಬ್ಬನನ್ನೂ ಕತ್ತರಿಸುತ್ತಿದ್ದರು.

ದಂಪತಿಗಳು ಆ ರಾತ್ರಿಯನ್ನು ಒಂದು ಮುರುಕಲು ತೋಟದ ಮನೆಯಲ್ಲಿ ಕಳೆಯಬೇಕೆಂದು ಯೋಚಿಸುತ್ತಿರುವಂತೆಯೇ ಅಳುವ ಧ್ವನಿಯೊಂದು ಕೇಳಿಸಿತು. ಹೊರಗೆ ಹುಲ್ಲಿನ ಮಧ್ಯದಲ್ಲಿ ಮುದುಡಿಕೊಂಡು ಬಿಕ್ಕುತ್ತಿದ್ದ ಸುಮಾರು ನಾಲ್ಕು ವರ್ಷದ ಪುಟ್ಟ ಹುಡುಗಿಯನ್ನು ಕಂಡರು. ಆಘಾತದಿಂದಾಗಿ ಮಗುವು ತನ್ನ ಹೆಸರನ್ನು ಹೇಳುವುದಿರಲಿ ಮಾತನ್ನೇ ಆಡಲಿಲ್ಲ. ಆದರೆ ಟ್ಯಾಪಿಯೋಕ (ಗೆಡ್ಡೆ) ಮತ್ತು ಅನ್ನವನ್ನೊಳಗೊಂಡ ಅವರ ಊಟದಲ್ಲಿ ಪಾಲ್ಗೊಂಡು ಗಬಗಬನೆ ತಿಂದಳು. ರಾತ್ರಿ ಬಹಳ ಹೊತ್ತು ಅಳುತ್ತಲೇ ಇದ್ದಳು.

ಮರುದಿನ ಬೆಳಿಗ್ಗೆ ದಂಪತಿಗಳು ರಾಜಧಾನಿಯಾದ ಫ್ರೀಟಾನ್‌ಗೆ ನಡೆಯಲು ಪ್ರಾರಂಭಿಸಿದಾಗ ಗಂಭೀರವಾಗ ಅವರನ್ನು ಹಿಂಬಾಲಿಸಿದಳು. ಕೋಲ್ ದಂಪತಿಗಳು ಅವಳಿಗೇನಾಗಿರಬಹುದೆಂದು ಕೇವಲ ತಮಗೆ ತೋಚಿದಂತೆ ಊಹಿಸಿಕೊಂಡರು. ಬಹುಶಃ ಅವಳ ಇಡೀ ಕುಟುಂಬವೇ ಕೊಲೆಗೀಡಾಗಿರಬಹುದೆಂದು ಯೋಚಿಸಿದರು. ದೇವರು ತಮಗೆ ಆ ಮಗುವನ್ನು ಕರುಣಿಸಿರಬಹುದೆಂದು ತಿಳಿದು ಮಲೊಮೊ ಅವಳಿಗೆ ತನ್ನ ತಾಯಿಯ ಹೆಸರನ್ನಿಟ್ಟು 'ಟೆನ್ನಿ' ಎಂದು ಕರೆದನು.

ನಾಲ್ಕು ದಿನಗಳ ಅನಂತರ ಒಂದು ಸಂಜೆ ಮಲೊಮೊ ರಾತ್ರಿ ಅಡುಗೆಗೆ ಸಿದ್ಧ ಮಾಡುತ್ತಿದ್ದಾಗ ಬಂದೂಕಿನ ಶಬ್ದ ಕೇಳಿಸಿತು. ತತ್‌ಕ್ಷಣವೇ ಟೆನ್ನಿ ಕಿರುಚಿಕೊಂಡು ನೆಲದಮೇಲೆ ಬಿದ್ದಳು. ಅವಳ ನಡುನೆತ್ತಿಯಿಂದ ರಕ್ತ ಚಿಮ್ಮಿತು. ಮಲೊಮೊ ತನಗೆ ತಿಳಿದಂತೆ ಗಾಯವನ್ನು ತೊಳೆದು ಚಿಕಿತ್ಸೆ ಮಾಡಿದನು. ನೆಲದ ಮೇಲೆ ಗುಂಡು ಬಿದ್ದಿದ್ದರ ರಭಸಕ್ಕೆ ಕಲ್ಲಿನ ಚೂರು ಸಿಡಿದು ಟೆನ್ನಿಯ ತಲೆಗೆ ತಗುಲಿರ ಬಹುದೆಂದು ಊಹಿಸಿದನು.

ಮರುದಿನ ಮೂವರೂ ಒಂದು ಹಳ್ಳಿಯನ್ನು ತಲುಪಿದರು. ಅಲ್ಲಿ ಮರಿಯಮಗೆ ಒಂದು ಗಂಡುಮಗುವಾಯಿತು. ಅವರ ಆ ಮೊದಲ ಮಗು ಹುಟ್ಟಿದ ಕೆಲವು ಗಂಟೆಗಳು ಮಾತ್ರ ಬದುಕಿತ್ತು. ಕಂಗೆಟ್ಟ ದಂಪತಿಗಳು ಟೆನ್ನಿಯ ಪರಿಸ್ಥಿತಿ ಬಿಗಡಾಯಿಸುತ್ತಿರುವುದನ್ನು ಗಮನಿಸಿದರು. ನೋವಿನಿಂದಾಗಿ ಅವಳಿಗೆ ಜ್ವರ ಬಂದಿತ್ತು. ಅವಳ ಬಲಗಣ್ಣು ಅತಿಯಾಗಿ ಅದಿರತೊಡಗಿ ಗಾಬರಿ ಹುಟ್ಟಿಸಿತು.

೧೯೯೫ರ ಡಿಸೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ಡೇವಿಡ್ ಹೊಲ್ಲರ್‌ರವರ ಗರ್ಲ್ ವಿತ್ ಎ ಬುಲೆಟ್ ಇನ್ ಹರ್ ಹೆಡ್" ಎಂಬ ಲೇಖನದ ಅನುವಾದ

ಮಗುವಿಗೆ ತುರ್ತು ಚಿಕಿತ್ಸೆ ಬೇಕೆಂಬುದು ಸ್ಪಷ್ಟವಾಯಿತು. ಆದರೆ ಮೊರಂಬದಲ್ಲಿ ಇದ್ದ ಒಂದೇ ಆಸ್ಪತ್ರೆ ದಂಗೆಕೋರರ ವಶವಾಗಿತ್ತು. ಯಾತನೆ ಅತಿಯಾಗುತ್ತಿದ್ದಂತೆಯೇ ದೇವರು ಕಳುಹಿಸಿದ ಈ ಮಗುವನ್ನು ನೋಡಿಕೊಳ್ಳ ಬೇಕಾದುದು ನಮ್ಮ ಕರ್ತವ್ಯವೆಂದು ಯೋಚಿಸಿ ಟೆನ್ನಿಯೊಂದಿಗೆ ದಂಗೆಕೋರರಿಗೆ ಶರಣಾಗ ಬೇಕೆಂದು ನಿರ್ಧರಿಸಿದನು.

ಮೊದಮೊದಲು ಇದೊಂದು ಕುಯುಕ್ತಿ ಇರಬಹುದೆಂದು ದಂಗೆಕೋರರು ಅನು ಮಾನಿಸಿದರು. 'ನೀನೊಬ್ಬ ಸರ್ಕಾರಿ ಸಿಪಾಯಿ' 'ನೀನೊಬ್ಬ ಗೂಢಚಾರಿ' ಎಂದು ಮಲೊಮೊ ನನ್ನು ಹೊಡೆದು ಅವನನ್ನೂ ಮಗುವನ್ನೂ ಗುಂಡಿಕ್ಕಿ ಕೊಲ್ಲುವುದಾಗಿ ಬೆದರಿಸಿದರು. ರಾಜಕೀಯ ಜಗಳದಲ್ಲಿ ತನಗೆ ಯಾವ ಆಸಕ್ತಿಯೂ ಇಲ್ಲವೆಂದು ಕೊನೆಗೂ ಅವರ ಮನವೊಲಿಸಿ ''ನಾನು ಈ ಮಗುವನ್ನು ಉಳಿಸಿಕೊಳ್ಳಲು ಮಾತ್ರ ಬಂದಿದ್ದೇನೆ'' ಎಂದನು.

ಅವನನ್ನು ಬಂದಿಯಾಗಿ ತೆಗೆದು ಕೊಂಡಿದ್ದ ವರು ಒಬ್ಬ ದಾದಿಯನ್ನು ಕರೆದು ಟೆನ್ನಿಯನ್ನು ಗಮನಿಸುವಂತೆ ಹೇಳಿದರು. ಕೊನೆಗೂ ತಲೆಯ ಗಾಯಕ್ಕೆ ಯುಕ್ತ ಚಿಕಿತ್ಸೆಯಾಯಿತು. ನಿಧಾನವಾಗಿ ಗಾಯ ಮಾಗುತ್ತಾ ಬಂತು. ಬಂಧಿತನಾದ ನಾಲ್ಕನೆಯ ದಿನ ಕತ್ತಲಾಗುತ್ತಿ ದ್ದಂತೆ ಮಲೊಮೊ ಪುಟ್ಟಹುಡುಗಿ ಟೆನ್ನಿ ಯನ್ನು ಎತ್ತಿಕೊಂಡು ಮರಿಯಮಳನ್ನು ಸೇರಲು ಪೊದೆಗಳ ನಡುವೆ ಕಣ್ಮರೆಯಾದನು.

ಮತ್ತೆ ಬಂಧಿತವಾಗುವೆವೆಂಬ ಭಯ ದಿಂದ ಎಲ್ಲಾ ರಸ್ತೆಗಳನ್ನೂ ಬಿಟ್ಟು ಉತ್ತರದ ಕಡೆ ಧಾವಿಸಿದರು. ಪ್ರಯಾಣವು ಭಯಂಕರ ವಾಗಿಯೂ ಅತ್ಯಂತ ಪ್ರಯಾಸಕರವಾಗಿಯೂ ಇತ್ತು. ಟೆನ್ನಿ ಬೇಸರವನ್ನು ತೋರಿಸಿಕೊಳ್ಳಲಿಲ್ಲ. ಅಲ್ಲಿನ ಪ್ರಾಂತೀಯ ಭಾಷೆಯಾದ 'ಮೆಂಡೆ' ಯಲ್ಲಿ ಅವಳು ಕೋಲ್ಸ್ ದಂಪತಿಗಳೊಂದಿಗೆ ಮಾತಿಗೆ ತೊಡಗಿದಳು. ಆದರೆ ತನ್ನ ಕಳೆದು ಹೋದ ಜೀವನದ ಬಗ್ಗೆ ಒಂದು ಮಾತೂ ಆಡಲಿಲ್ಲ. ಆಗಾಗ ಒಂದು ಮುಗುಳ್ನಗೆ ಯೊಂದಿಗೆ ಅವರನ್ನು ಸಂತೋಷಪಡಿಸು ತ್ತಿದ್ದಳು. ಚೂಟಿಯೂ ತೀಕ್ಷ್ಣ ದೃಷ್ಟಿಯುಳ್ಳ ವಳೂ ಆದ ಟೆನ್ನಿ ದಾರಿಯಲ್ಲಿ ಸಿಗುವ ಟ್ಯಾಪಿಯೋಕ, ಕೋಲ ಇತರ ತಿನ್ನುವ ಬೇರು ಮತ್ತು ಸಸ್ಯಗಳನ್ನು ಸಂಗ್ರಹಿಸಲು ನೆರವಾಗುತ್ತಿ ದ್ದಳು. ಆದರೆ ಬಹಳ ವಿಚಿತ್ರವಾದ ರೀತಿಯಲ್ಲಿ ಅವಳು ತಲೆಯನ್ನು ತಿರುಗಿಸುತ್ತಿದ್ದುದನ್ನು ಮಲೊಮೊ ಗಮನಿಸಿದನು. ಟೆನ್ನಿಗೆ ಒಂದು ಕಣ್ಣು ಕಾಣುವುದಿಲ್ಲವೆಂದು ಆಗ ಅವನಿಗೆ ತಿಳಿಯಿತು.

ವಲಸೆ ಬಂದ ದಂಪತಿಗಳಿಗೆ ಫ್ರೀ ಟೌನ್ ಸೇರಲು ಮೂರು ತಿಂಗಳು ಹಿಡಿಯಿತು. ನಾಲ್ಕು ನೂರು ಕಿಲೊಮಿಟರ್‌ಗಿಂತಲೂ ಅಧಿಕ ದೂರ ನಡೆದಿದ್ದರು. ಸಾವಿರಾರು ಜನ ನಿರಾಶ್ರಿತರಲ್ಲಿ ಒಬ್ಬರಾಗಿ ಕೋಲೊ ದಂಪತಿಗಳು ಟೆನ್ನಿಯೊಂದಿಗೆ ರಾಜಧಾನಿಯಲ್ಲಿದ್ದ ಬ್ರಿಕ್‌ವರ್ಕ್ ಎಂಬ ಬಿಡಾರವನ್ನು ಸೇರಿದರು.

ಟೆನ್ನಿಗೆ ಬೇಕಾದ ಪೌಷ್ಟಿಕ ಆಹಾರ ಮತ್ತು ಅವಳಿಗೆ ಅವಶ್ಯವಾದ ವೈದ್ಯಕೀಯ ಸೌಲಭ್ಯ ದೊರಕಿಸಿಕೊಡುವುದರ ಬಗ್ಗೆ ಕೆಲಸವಿಲ್ಲದ ನೆಲೆಯಿಲ್ಲದ ಮಲೊಮೊಗೆ ಚಿಂತೆ ಕಾಡ ತೊಡಗಿತು. ಹ್ಯಾನ್ಸಿ (Help a needy child International) ಸಂಸ್ಥೆಯ ಅಧಿಕಾರಿಗಳು ಬಿಡಾರದಲ್ಲಿದ್ದ ಅನಾಥರನ್ನು ನೋಂದಾಯಿಸುವ ಕೆಲಸದಲ್ಲಿ ತೊಡಗಿರು ರೆಂದು ಕೋಲ್ ದಂಪತಿಗಳಿಗೆ ತಿಳಿಯಿತು. ಫ್ರೀಟೌನಿನ ಪೂರ್ವಕ್ಕೆ ಇನ್ನೂರು ಕಿಲೊ

ಮೀಟರ್ ದೂರದ ಮಕೆನಿಯಲ್ಲಿರುವ ಬ್ರಿಟಿಷ್ ಧರ್ಮಸಂಸ್ಥೆಯು ಸ್ಥಾಪಿಸಿರುವ ಒಂದು ಅನಾಥಾಲಯಕ್ಕೆ ಟೆನ್ನಿಯನ್ನು ಸೇರಿಸುವುದಾಗಿ ಒಪ್ಪಿಗೆಯಾಯಿತು. ಕೋಲ್ ದಂಪತಿಗಳು ಬಹಳ ದುಃಖದಿಂದ ಅವಳನ್ನು ಬೀಳ್ಕೊಟ್ಟರು.

೧೯೯೫ರ ಡಿಸೆಂಬರ್‌ನಲ್ಲಿ ಅವಳು ಇನ್ನೂ ೨೩ ಅನಾಥರೊಂದಿಗೆ ಸೇರಿದಳು. ಆದರೆ ಕೆಲವೇ ದಿನಗಳಲ್ಲಿ ಟೆನ್ನಿಗೆ ಚಿತ್ತವಿಭ್ರಮ ಸ್ಥಿತಿ ಒದಗಿತು. ಹತ್ತು ದಿನಗಳು ಜ್ವರ ಕಾದ ನಂತರ ಅವಳಿಗೆ ಕಿವುಡುತನ ಉಂಟಾಯಿತು. ಅವಳ ಬಲಗಣ್ಣು ಇನ್ನೂ ಹೆಚ್ಚು ಊದಿಕೊಂಡಿತು.

ಟೆನ್ನಿಯನ್ನು ಫ್ರೀ ಟೌನಿನ ಒಂದು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ತೆಗೆಯಲ್ಪಟ್ಟ ಒಂದು ಎಕ್ಸ್‌ರೇ ಇಂದ ಅತ್ಯಾಶ್ಚರ್ಯಕರವಾದ ಸಂಗತಿ ಹೊರಬಿತ್ತು. ಅವಳ ಬಲಗಣ್ಣಿನ ಹಿಂದೆ ಒಂದು ಗುಂಡು ಅಡಗಿ ಕುಳಿತಿತ್ತು ! ಅದು ಅಲ್ಲಿ ಒಂದು ವರ್ಷದಿಂದಲೂ ಇತ್ತು !

ಅದನ್ನು ತೆಗೆಯದಿದ್ದರೆ ಮಿದುಳಿಗೆ ಸೋಂಕು ತಗುಲಿ ಮಾರಕಸ್ಥಿತಿ ಉಂಟಾಗುವುದೆಂದು ವೈದ್ಯರಿಗೆ ತಿಳಿಯಿತು. ಸಿಯರ ಲಿಯೋನ್‌ನಲ್ಲಿ ಅಂತಹ ಅನುಭವೀ ಶಸ್ತ್ರತಜ್ಞನಾಗಲೀ ಅಂತಹ ಸೌಲಭ್ಯವಾಗಲೀ ಇರಲಿಲ್ಲ. ಹ್ಯಾನ್ಸಿ ಸಂಸ್ಥೆಯ ಅಧ್ಯಕ್ಷ ರೋಲ್ಯಾಂಡ್ ಕಾರ್ಗಬೊ ಟೆನ್ನಿ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದನು. ಮಕೆನಿ ಅನಾಥಾಲಯ ಸ್ಥಾಪನೆಗೆ ಸಹಾಯ ಮಾಡಿದ ಮಾರ್ಕ್ ಕುಕ್ ಮತ್ತು ಕ್ಯಾರೊಲಿನ್ ಕುಕ್ ಬ್ರಿಟಿಷ್ ದಂಪತಿ ಗಳು ಟೆನ್ನಿಗೆ ಸಹಾಯ ಮಾಡಬಹುದೆಂದು ಕಾರ್ಗಬೊ ಯೋಚಿಸಿದನು.

ಸಂಯುಕ್ತ ಸಂಸ್ಥಾನಗಳ ರಕ್ಷಣಾದಳದ ಬ್ರಿಟಿಷ್ ಸೈನಿಕ ವಿಭಾಗದ ನಾಯಕನಾಗಿ ೧೯೯೨ರಲ್ಲಿ ಕ್ರಟೋರಿಯದ ಕರ್ನಲ್ ಮಾರ್ಕ್ ಕುಕ್, ಲಿಪಿಕ್ ಎಂಬ ಊರಿಗೆ ಭೇಟಿ ಕೊಟ್ಟಿದ್ದನು. ಸರ್ಬಿಯನ್ ಧಾಳಿಯಿಂದಾಗಿ ನಾಶವಾದ ಪಟ್ಟಣ ಲಿಪಿಕ್. ಅನಾಥಾಲಯವು ಸುಟ್ಟು ಭಸ್ಮವಾಗಿದ್ದನ್ನು ಮಾರ್ಕ್ ಕುಕ್ ಕಣ್ಣಾರೆ ಕಂಡಿದ್ದನು. ಇದರಿಂದಾಗಿ ೬೫ ಅನಾಥ ಯುವಕರು ಮದ್ದುಗುಂಡುಗಳ ಮಳೆಯಡಿ ನಿಂತಿದ್ದರು. ಅವರ ನಿವಾಸವನ್ನು ಹೇಗಾದರೂ ಮಾಡಿ ಮತ್ತೆ ಕಟ್ಟಿಸಿಕೊಡುವುದರಲ್ಲಿ ಸಹಾಯ ಮಾಡುವೆನೆಂದು ಕುಕ್ ಆ ಅನಾಥರಿಗೆ ಆಶ್ವಾಸನೆ ನೀಡಿದನು.

ಕುಕ್ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕ್ರಟೋರಿಯ, ಬಾಸ್ನಿಯ ಮತ್ತು ಆಲ್ಬೇನಿಯಗಳಲ್ಲಿ ಅನಾಥಾಲಯಗಳನ್ನು ಕಟ್ಟಿಸಲು ಹಣವನ್ನು ಹದಿನೆಂಟು ತಿಂಗಳುಗಳಲ್ಲಿ ಸಂಗ್ರಹಿಸಿದನು. ಈ ನಿಟ್ಟಿನಲ್ಲಿ ಅನಾಥ ಮಕ್ಕಳಿಗೆ ಭರವಸೆ ನೀಡುವ ಮತ್ತು ನಿವಾಸಗಳನ್ನು ಕಟ್ಟಿಸಿಕೊಡುವ ಹೊಸ ಉದ್ಯೋಗವನ್ನೇ ಕುಕ್ ಕಂಡುಕೊಂಡನು. "ಮಕ್ಕಳು ಎಲ್ಲವನ್ನು ಕಳೆದುಕೊಂಡಾಗ, ಸಂಪೂರ್ಣ ನಿರ್ಗತಿಕರಾದಾಗ ಅವರಿಗೆ ಆಸರೆಯಾಗಬಹುದಾದ ಒಂದು ಅಂಶವೆಂದರೆ-ಭರವಸೆ" ಎಂಬುದೇ ಆ ಸಂಸ್ಥೆಯ ಮೂಲ ತತ್ವವಾಗಿತ್ತು.

ಸಾರಾಜೆವೊನಲ್ಲಿ ಕ್ಯಾರೋಲಿನ್ ಟೆನ್ನಿಯ ಬಗ್ಗೆ ತಿಳಿಸಲು ಪತಿ ಮಾರ್ಕ್‌ನನ್ನು ಸಂಪರ್ಕಿಸಿದಳು. "ಖಂಡಿತವಾಗಿಯೂ ನಾವು ಸಹಾಯ ಮಾಡೋಣ" ಎಂದು ಮಾರ್ಕ್ ಆಶ್ವಾಸನೆ ಕೊಟ್ಟನು.

ಕೆಲವು ದಿನಗಳ ಅನಂತರ ಇಂಗ್ಲೆಂಡಿನ ನಾರ್‌ಫೋಕ್ ಮತ್ತು ನಾರ್‌ವಿಚ್ ಆಸ್ಪತ್ರೆಯ

ಸಲಹಾಮಂಡಳಿಯವರು ಸಿಯರ ಲಿಯೋನ್‌ನಿಂದ ಬಂದ ಎಕ್ಸ್‌ರೇಯನ್ನು ವೀಕ್ಷಿಸುತ್ತಿದ್ದರು. ಒಂದು ಮಗುವಿನ ತಲೆಬುರುಡೆಯನ್ನೂ ಅದರಲ್ಲಿದ್ದ ಒಂದು ಗುಂಡಿನ ನಿರ್ದಿಷ್ಟ ಆಕಾರವನ್ನು ತೋರಿಸಿ, ''ಈ ಪುಟ್ಟಹುಡುಗಿಗೆ ನಾನು ಏನಾದರೂ ಸಹಾಯ ಮಾಡಬಲ್ಲೆನೇ?'' ಎಂದು ಆಸ್ಪತ್ರೆ ಆಡಳಿತಾಧಿಕಾರಿ ರಿಚರ್ಡ್ ಡ್ಯೂ ಕೇಳಿದರು.

ಮೂರು ವಾರಗಳ ತರುವಾಯ ಮಾರ್ಕ್ ಮತ್ತು ಕ್ಯಾರೊಲಿನ್ ಕುಕ್ ಟೆನ್ನಿಯನ್ನು ಕರೆತರಲು ಸಿಯರ ಲಿಯೋನ್‌ಗೆ ಹೋದರು. ವಿಮಾನದಲ್ಲಿ ಹೋಗುತ್ತಿರುವಾಗ ಒಂದು ವರ್ಷದ ಹಿಂದೆ ಆ ದೇಶಕ್ಕೆ ಭೇಟಿ ಕೊಟ್ಟಿದ್ದನ್ನು ಮಾರ್ಕ್ ನೆನಪಿಸಿಕೊಂಡನು. ಬ್ರಿಕ್‌ವರ್ಕ್ ಬಿಡಾರದಲ್ಲಿ ಒಬ್ಬ ಹುಡುಗಿಯು ತನ್ನಲ್ಲಿ ಬಹಳ ವಿಶ್ವಾಸವಿಟ್ಟುಕೊಂಡಿದ್ದಳು. ಸ್ವಲ್ಪ ಹೊತ್ತಿನಲ್ಲಿ ಅವಳು ಪುಟ್ಟ ಕೈಗಳಿಂದ ತನ್ನ ಕೈ ಹಿಡಿದುಕೊಂಡಿದ್ದಳು. ತಾನು ಅಲ್ಲಿಂದ ಹೊರಡುವುದಕ್ಕೆ ಮುಂಚೆ, ''ನಾನು ನನ್ನ ಕೈಲಾದುದೆಲ್ಲವನ್ನೂ ನಿನಗೂ ನಿನ್ನ ಸ್ನೇಹಿತೆಯರಿಗೂ ಮಾಡುತ್ತೇನೆ'' ಎಂದು ಹೇಳಿದಾಗ ಭರವಸೆ ಹೊತ್ತ ಕಣ್ಣುಗಳು ಪ್ರೀತಿಯಿಂದ ತನ್ನನ್ನು ನೋಡಿದ್ದವು.

ಮಕೆನಿ ಅನಾಥಾಲಯದಲ್ಲಿ ಟೆನ್ನಿಯನ್ನು ಪರಿಚಯಿಸಿದಾಗ ಅಂತಹುದೇ ಭರವಸೆ ಹೊತ್ತ ಕಣ್ಣುಗಳನ್ನು ಮಾರ್ಕ್ ನೋಡಿದನು. ಆದರೆ ಇವಳು ಇನ್ನೂ ಬಿಗು ಸ್ವಭಾವದವಳಾಗಿದ್ದಳು. ಬೇರೆ ಮಕ್ಕಳು ಹಾಡುತ್ತಾ ಕುಣಿಯುತ್ತಾ ಇದ್ದರೆ ಟೆನ್ನಿ ಮಾತ್ರ ತನ್ನ ಕಿವುಡುತನದಿಂದಾಗಿ ಒಂದು ಕಡೆ ಕುಳಿತು ತನ್ನದೇ ಆದ ಪ್ರಪಂಚದಲ್ಲಿ ಮೈಮರೆತಂತೆ ಇರುತ್ತಿದ್ದಳು. ಆದರೆ ಅವಳ ಮುಖದಲ್ಲಿ ಸಾಯದೆ ಉಳಿಯುವೆನೆಂಬ ದೃಢನಿರ್ಧಾರ ವ್ಯಕ್ತವಾಗುತ್ತಿತ್ತು.

ಮತ್ತೆ ಬ್ರಿಟನ್ನಿಗೆ ಟೆನ್ನಿ ಸಂತೋಷದಿಂದ ಕುಕ್ ದಂಪತಿಗಳ ಜೊತೆ ಹೊರಟಳು. ವಿಮಾನದಲ್ಲಿ ಕ್ಯಾರೊಲಿನ್ ಅನ್ನು ತಬ್ಬಿಕೊಂಡು ಕುಳಿತಿದ್ದಳು. ಅವಳ ಕೈ ಚೀಲವನ್ನು ಕೆದಕುತ್ತಾ ಅದರಲ್ಲಿದ್ದ ವಸ್ತುಗಳನ್ನು ಒಂದೊಂದಾಗಿ ನೋಡತೊಡಗಿದಳು. ಮಾರ್ಕ್‌ನ ಟ್ರೇಯಲ್ಲಿದ್ದ ಮಾಂಸದ ತಿನಿಸನ್ನು ಕಂಡಕೂಡಲೇ ತನ್ನ ಕೈ ಚಳಕದಿಂದ ಅಷ್ಟನ್ನೂ ಒಮ್ಮೆಗೇ ತೆಗೆದುಕೊಂಡು ತಿನ್ನ ತೊಡಗಿದಳು. ಅನಂತರ ಮಾಂಸಿನ ತಿನಿಸನ್ನು ಫೋರ್ಕ್‌ನಲ್ಲಿ ತೆಗೆದುಕೊಂಡು ಮಾರ್ಕ್‌ನ ಬಾಯಿಗೆ ಇಟ್ಟಳು. ಮಾರ್ಕ್ ಸಂತೋಷದಿಂದ ತಿಂದನು.

ನಾರ್‌ಫೋಕ್ ಮತ್ತು ನಾರ್‌ವಿಚ್ ಆಸ್ಪತ್ರೆಯ ವಿಭಾಗದಲ್ಲಿ ಟೆನ್ನಿ ಊಟದ ಗಾಡಿಯನ್ನು ತಳ್ಳುತ್ತಿದ್ದಳು. ಹಾಸಿಗೆ ಸರಿಪಡಿಸಲು ನೆರವಾಗುತ್ತಿದ್ದಳು. ಉಳಿದ ರೋಗ ಪೀಡಿತ ಮಕ್ಕಳಿಗೆ ಅವರನ್ನು ನೋಡಿಕೊಳ್ಳಲು ಅವರ ತಂದೆತಾಯಂದಿರು ಇರುತ್ತಿದ್ದರು. ಹೆಲೆನ್ ಶಾರ್ಟನ್ ಎಂಬ ನರ್ಸನ್ನು ಟೆನ್ನಿ ಬಹುವಾಗಿ ಹಚ್ಚಿಕೊಂಡಿದ್ದಳು. ಹೆಲೆನ್ ಬರೆಯುವ ಕೆಲಸದಲ್ಲಿ ತೊಡಗಿದ್ದಾಗ ಟೆನ್ನಿಯು ಅವಳ ತೊಡೆಯ ಮೇಲೆ ಕುಳಿತಿರುತ್ತಿದ್ದಳು. ರೋಗಿಗಳ ತನಿಖೆಗೆ ಮಂಚದಿಂದ ಮಂಚಕ್ಕೆ ಹೋದಾಗ ಟೆನ್ನಿ ಅವಳ ಕೈ ಹಿಡಿದು ಅವಳೊಂದಿಗೆ ಹೋಗುತ್ತಿದ್ದಳು.

ಇನ್ನೂ ಕೆಲವು ಎಕ್ಸ್‌ರೇಗಳನ್ನು ತೆಗೆದು ಮಿದುಳಿನ ಸ್ಕ್ಯಾಯನ್ ಮಾಡಿದ ಬಳಿಕ ಶಸ್ತ್ರಚಿಕಿತ್ಸೆ ಮಾಡಲು ಚೆನೆ ನಿರ್ಧರಿಸಿದನು. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಗುಂಡು ನೇರವಾಗಿ ನಿಂತಿತ್ತು. ಅದರ ಮೂರನೇ ಒಂದು ಭಾಗ ಮೂಗಿನ ಹಿಂಭಾಗದಲ್ಲಿಯೂ ಮೂರನೇ ಎರಡು ಭಾಗ ಕಣ್ಣಿನ ಹಿಂಭಾಗದಲ್ಲಿಯೂ ಇತ್ತು. ಅದನ್ನು ತೆಗೆಯುವ ಮುಂಚೆ ಅದನ್ನು ಅದರ ಸ್ಥಿತಿಗಿಂತ ಕಾಲು ಭಾಗದಷ್ಟು ತಿರುಗಿಸಬೇಕಿತ್ತು.

೧೯೯೬ರ ಮೇ ೧೪ರಂದು ಬೆಳಿಗ್ಗೆ ೮.೩೦ಕ್ಕೆ ಹೆಲೆನ್ ಶಾರ್ಟನ್ ಟೆನ್ನಿಯನ್ನು ಎತ್ತಿಕೊಂಡು ಶಸ್ತ್ರಚಿಕಿತ್ಸಾ ಕೋಣೆಗೆ ಕರೆದೊಯ್ದ . ಮಗುವಿಗೆ ಅರಿವಳಿಕೆಯನ್ನು ಕೊಟ್ಟು ಜ್ಞಾನ ತಪ್ಪಿಸಿ ಅವಳ ಬಾಯಿಯ ಮೇಲಿನ ಅಂಗಳದ ಬಲಭಾಗದ ಎರಡನೇ ದವಡೆ ಹಲ್ಲಿನ ಅಂಚಿನಲ್ಲಿಯೇ ನಿಧಾನವಾಗಿ ಮೂಳೆಯನ್ನು ಕೊರೆಯುತ್ತಾ ಚೆನೆ ಗುಂಡನ್ನು ತಲುಪಿದನು.

ಇಪ್ಪತ್ತು ನಿಮಿಷಗಳ ಅನಂತರ ಚೆನೆ ತಂಡದವರು ಗುಂಡನ್ನು ನೋಡಲು ಅವನ ಹಿಂದಿನಿಂದ ಕುತೂಹಲದಿಂದ ಇಣುಕಿ ನೋಡಿದರು-ಕಪ್ಪಗಿನ ಒಂದು ಲೋಹದ ತುಂಡು! ಚೆನೆ ಸೂಕ್ಷ್ಮವಾಗಿ ಅದನ್ನು ಚಿಮ್ಮಟದಲ್ಲಿ ಹಿಡಿದುಕೊಳ್ಳಲು ಪ್ರಯತ್ನಿಸಿದನು. ಆದರೆ ಅದು ನುಣುಚಿಹೋಗುತ್ತಿತ್ತು.

ಅನಂತರ ಅವಳ ಬಲಗಣ್ಣಿನ ಕೆಳಗೆ ಒಂದು ಸೆಂಟಿಮೀಟರ್ ಅಡ್ಡಗಲಕ್ಕೆ ಮೂಳೆಯನ್ನು ಕತ್ತರಿಸಿದನು. ಅಲ್ಲಿ ಹರಿಯುತ್ತಿದ್ದ ಕಣ್ಣಿನ ನರವನ್ನು ಪ್ರತ್ಯೇಕಿಸಿ ಕೊನೆಗೂ ಗುಂಡನ್ನು ಹೊರತೆಗೆಯುವುದರಲ್ಲಿ ಯಶಸ್ವಿಯಾದನು.

ಕಪ್ಪು ಲೋಹದ ತುಂಡನ್ನು ಚೆನೆ ಹೊರತೆಗೆಯುತ್ತಿದ್ದಂತೆಯೇ ಕೋಣೆಯಲ್ಲಿದ್ದ ಆತಂಕಭರಿತ ಮೌನ ಒಮ್ಮೆಗೆ ಮುರಿಯಿತು. ''ಇಲ್ಲಿದೆ'' ಎಂದು ಚೆನೆ ಸ್ಟೀಲ್ ಟ್ರೇಯಲ್ಲಿ ಠಣ್ಣನೆ ಹಾಕಿದನು. ಸೋಂಕು ತಗುಲಿದ ಅಂಗಾಂಶದ ಮುದ್ದೆ ಈಗ ಕಂಡಿತು.

ಸೋಂಕು ಪೀಡಿತ ಅಂಗಾಂಶವನ್ನೆಲ್ಲಾ ತೆಗೆದು ಹಾಕಿ ಅಲ್ಪಸ್ವಲ್ಪ ಸೋಂಕೇನಾದರೂ ಉಳಿದಿದ್ದರೆ ಜೀವನಿರೋಧಕ ಚುಚ್ಚುಮದ್ದಿನಿಂದ ವಾಸಿಮಾಡಬಹುದೆಂದು ಯೋಚಿಸಿದನು. ಕತ್ತರಿಸಿದ ಕಣ್ಣಂಚಿನ ಮೂಳೆಯನ್ನು ಕುಶಲತೆಯಿಂದ ಮತ್ತೆ ಜೋಡಿಸಿದನು. ಮೂಳೆ ಯಥಾಸ್ಥಿತಿಯಲ್ಲಿರಲು ಐದು ಸೂಕ್ಷ್ಮ ತಿರುಪುಗಳುಳ್ಳ ಬಾಗಿದ ಒಂದು ಟಿಟಾನಿಯಂ ತಗಡನ್ನು ಅದಕ್ಕೆ ಜೋಡಿಸಿದನು. ೧೦.೪೫ಕ್ಕೆ ಶಸ್ತ್ರಚಿಕಿತ್ಸೆ ಮುಗಿಯಿತು.

ಶಸ್ತ್ರಕ್ರಿಯೆ ಯಶಸ್ವಿಯಾಗಿ ನಡೆಯಿತು. ಟೆನ್ನಿ ಅಂತಹ ಒಂದು ದುರ್ಘಟನೆಯಿಂದ ಅದುವರೆಗೂ ಹೇಗೆ ಬದುಕಿದ್ದಳೆಂಬುದು ಮಾತ್ರ ಚೆನೆಗೆ ಕೊನೆಗೂ ತಿಳಿಯಲಿಲ್ಲ. ಒಂದು ಸೆಕೆಂಡಿಗೆ ೭೦೦ ಮೀಟರ್ ವೇಗದಲ್ಲಿ ಹೋಗುವ ಆ ಗುಂಡು ಅದರ ಪಥದ ಕೊನೆಯಲ್ಲಿ ಟೆನ್ನಿಯ ತಲೆಯೊಳಗೆ ನುಗ್ಗಿರಬಹುದು. ಇಲ್ಲದಿದ್ದಲ್ಲಿ ಅದು ಮಗುವಿನ ಮುಖದ ಬಹುಭಾಗವನ್ನು ತಿಂದುಹಾಕುತ್ತಿತ್ತು. ಆದರೂ ಆ ಗುಂಡು ಎಲ್ಲಿ ಪ್ರವೇಶಿಸಿರಬಹುದೆಂದು ಎಕ್ಸ್‌ರೇಗಳು ಸುಳಿವು ಕೊಟ್ಟಿದ್ದವು. ಅದೃಷ್ಟವಶಾತ್ ಮಿದುಳಿಗೆ ಯಾವ ಆಘಾತವೂ ಆಗಿರಲಿಲ್ಲ. ಶಸ್ತ್ರಚಿಕಿತ್ಸೆಯಾದ ಎರಡು ದಿನಗಳ ನಂತರ ಯಥಾಪ್ರಕಾರ ಟೆನ್ನಿ ದಾದಿಗಳಿಗೆ ಸಹಾಯ ಮಾಡುತ್ತಾ ಅವರ ಬಳಿ ಸುತ್ತಾಡ ತೊಡಗಿದಳು.


ಮೇ ತಿಂಗಳ ಕೊನೆಯಲ್ಲಿ ಟೆನ್ನಿ ಮತ್ತೆ ಮಕೆನಿ ಅನಾಥಾಲಯಕ್ಕೆ ಹಿಂದಿರುಗುವ ವೇಳೆ ಬಂದಿತು. ತನ್ನ ಹಳೆಯ ಸ್ನೇಹಿತರೊದಿಗೆ ಚಿರಪರಿಚಿತ ವಾತಾವರಣದಲ್ಲಿ ಮತ್ತೆ ಬೆಳೆಯ ತೊಡಗಿದಳು.

ಒಂದೊಂದು ಸಲ ತನ್ನ ಕಿವುಡುತನದಿಂದಾಗಿ ಬೇಸರಗೊಂಡರೂ ಶ್ರವಣ ಸಾಧನವನ್ನು ಉಪಯೋಗಿಸಿಕೊಳ್ಳಲೂ ತುಟಿ-ಚಲನೆಯಿಂದ ಇಂಗ್ಲೀಷ್ ಭಾಷೆಯನ್ನು ಕಲಿಯಲೂ ತೊಡಗಿದ ಟೆನ್ನಿ ಕಿವುಡರ ಶಾಲೆಯ ಮಕ್ಕಳೊಡನೆ ಚೆನ್ನಾಗಿ ಬೆರೆಯ ತೊಡಗಿದಳು.

ಅವಳು ಹಿಂತಿರುಗಿ ಬಂದಾಗಿನಿಂದಲೂ ವಿಶೇಷ ಅತಿಥಿಗಳು ಅವಳನ್ನು ಭೇಟಿಯಾಗ

ತೊಡಗಿದರು. ಬ್ರಿಕ್‌ವರ್ಕ್ಸ್ ನಿರ್ಗತಿಕ ಬಿಡಾರದಿಂದ ನೆಂಟರೊಡನೆ ಮನೆಗೆ ಬಂದ ಮಲೊಮೊ ಮತ್ತು ಮರಿಯಮ ಕೋಲ್ ಗ್ರೇಟರ ಜುಲೈನಲ್ಲಿ ಟೆನ್ನಿಯನ್ನು ಭೇಟಿಯಾದರು. ಅವಳ ಪ್ರಗತಿಯನ್ನು ಕಂಡು ಅವರಿಗೆ ಅತೀವ ಸಂತೋಷವಾಯಿತು. ಅಕ್ಟೋಬರ್ ತಿಂಗಳಲ್ಲಿ ಮತ್ತೊಂದು ಸವಾಗಮವಾಯಿತು. ಸಿಯರ್ ಲಿಯೋನ್‌ನಲ್ಲಿ ಒಂದು ಹೊಸ ಅನಾಥಾಲಯವನ್ನು ಉದ್ಘಾಟಿಸಲು ಕ್ಯಾರೊಲಿನ್ ಮತ್ತು ಮಾರ್ಕ್ ಕುಕ್ ಮನೆಗೆ ಬಂದು ಮಕ್ಕಳು ಶಾಲೆಯಿಂದ ಹಿಂತಿರುಗುವ ಸಮಯಕ್ಕೆ ಟೆನ್ನಿ ಇದ್ದ ಅನಾಥಾಲಯಕ್ಕೆ ಬಂದರು. ಕುಕ್ ದಂಪತಿಗಳು ಮಕ್ಕಳಿಗೆ ಶುಭಾಶಯ ಕೋರಿದರು. ಆರು ವರ್ಷದ ಬಳುಕುವ ಹುಡುಗಿಯನ್ನು ಕಂಡರು. ಆ ಪುಟ್ಟ ಹುಡುಗಿಯು ಅವರನ್ನು ಗುರುತಿಸಿ ನಾಚಿಕೆಯಿಂದ ತಲೆತಗ್ಗಿಸಿದಳು. ಆದರೆ ದಂಪತಿಗಳು ಇವಳನ್ನು ಅಪ್ಪಿಕೊಳ್ಳುತ್ತಿದ್ದಂತೆಯೇ ತುಂಬು ಹೃದಯದಿಂದ ಮುಗುಳ್ನಕ್ಕಳು.

ಮಾರ್ಕ್ ಕುಕ್‌ಗೆ ಅದೊಂದು ಅವಿಸ್ಮರಣೀಯ ಕ್ಷಣ. ಅವನು ಇದುವರೆಗೂ ಚಿಕಿತ್ಸೆ ನಡೆಸಿದ್ದ ಎಲ್ಲಾ ಯುದ್ಧ ಸಂತ್ರಸ್ತ ಮಕ್ಕಳ ಮುಂದೆ ಟೆನ್ನಿಯ ಧೈರ್ಯ, ದೃಢನಿರ್ಧಾರ ಕಳಶಪ್ರಾಯವಾಗಿದ್ದವು. ಎಳೆಯ ವಯಸ್ಸಿನಲ್ಲಿ ಅಂದರೆ ನಾಲ್ಕನೆಯ ವಯಸ್ಸಿನಲ್ಲಿ ತನ್ನ ಮನೆಯನ್ನೂ ತಾಯಿತಂದೆಯರನ್ನೂ ಒಂದು ಕಣ್ಣನ್ನೂ ಶ್ರವಣ ಶಕ್ತಿಯನ್ನೂ ಕಳೆದುಕೊಂಡಳು. ಆದರೂ ಅವಳು ಎದೆಗುಂದದ ಮುನ್ನಡೆಯುವ ಸಿಪಾಯಿ! ಭರವಸೆಯೇ ಅವಳ ಆಸರೆ.



ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.
-ವಿಲಿಯಮ್ ಬ್ಲೇಕ್

ಇರಾನಿನ ಅಂತರಂಗ : ಸರ್ವನಾಶದ ದಶವರ್ಷಗಳು

ಸರಸ್ವತಿ ಬಡೆಕ್ಕಿಲ
ಮನೆ ಸಂಖ್ಯೆ ೧೨, ದೀಪಾನಗರ,
ಬೋಗಾದಿ, ಮೈಸೂರು-೫೭೦೦೦೬

ಮೂಲಭೂತವಾದಿಗಳೆನ್ನಲಾಗುವ ಇವರ ಅಧಿಕಾರ ಶಾಹಿಯ ಫಲ ಪುಷ್ಪಗಳಿವು. ಲಂಚಖೋರ ಮುಲ್ಲಾಗಳ ಭ್ರಷ್ಟ ದುರಾಡಳಿತ; ಕುಸಿದು ಹೋದ ಅರ್ಥವ್ಯವಸ್ಥೆ ಮತ್ತು ಆಶಾಭಂಗ ಹೊಂದಿ ಭಗ್ನ ಹೃದಯಿಗಳಾದ ಆತ್ಮ ವಿಶ್ವಾಸ ಕಳೆದುಕೊಂಡ ಪ್ರಜಾಕೋಟಿ!

ಆಯತುಲ್ಲಾ ಖೊಮೇನಿ ಮತ್ತು ಆತನ 'ಶೈಯತ್' ಅತಿರೇಕವಾದಿ ಸಂಗಡಿಗರು ರಾಜಶಾಹಿ(ಶಾಹನ) ಶಾಸನ ವ್ಯವಸ್ಥೆಯನ್ನು ಕಿತ್ತೊಗೆದು ೧೩ ವರ್ಷಗಳೇ ಉರುಳಿವೆ. ಆದರೆ ಇರಾನಿನ ಜನತೆಗೆ ಈ ಇಸ್ಲಾಮ್ ಕ್ರಾಂತಿ ತಂದು ಕೊಟ್ಟುದು ಬಡತನ, ನೋವು, ಮಾತ್ರ! ಪುಡಿ ಪುಡಿಯಾಗಿ ಚದರಿಹೋದ ಅರ್ಥ ವ್ಯವಸ್ಥೆಯ ಜತೆ ಹೋರಾಟ ನಡೆಸುತ್ತಿರುವ ಜನತೆ ಒಂದೆಡೆಯಾದರೆ, ದೇಶನಾಯಕರೆನಿಸಿ ಕೊಂಡವರು ವಿನಾಕಾರಣ ಸಾವಿರಾರು ಮಿಲಿಯ ಡಾಲರುಗಳನ್ನು ಲೆಕ್ಕವಿಲ್ಲದಷ್ಟು ರಾಶಿರಾಶಿ ಶಸ್ತ್ರಾಸ್ತ್ರಗಳಿಗಾಗಿ ಖರ್ಚು ಮಾಡುತ್ತಿರುವುದು ಇನ್ನೊಂದೆಡೆ. ಇರಾಕಿನೊಡನೆ ನಿರಂತರ ಎಂಟು ವರ್ಷಗಳ ಯುದ್ಧದಲ್ಲಿ ಸಂಪೂರ್ಣ ಒಂದು ತಲೆಮಾರಿನ ತರುಣ ಇರಾನಿಗಳು ನಿರರ್ಥಕವಾಗಿ ಆಹುತಿಯಾಗಿ ಹೋದರು! ಆಯತುಲ್ಲಾನ ವಿದೇಶನೀತಿಯ ಮಹಿಮೆ ಇಷ್ಟೇ- ಎಲ್ಲೆಡೆ ಕೊಲೆಕಗ್ಗೊಲೆ!

ರೀಡರ್ಸ್ ಡೈಜೆಸ್ಟ್‌ನ ವರದಿ ಸಂಪಾದಕ ಫರ್ಗ್ಯುಸ್ ಬೋರ್ಡ್‌ವಿಕರು ೧೯೯೨ರ ಮೊದಲ ದಿನಗಳಲ್ಲಿ ಟೆಹರಾನಿಗೆ ಪ್ರಯಾಣ ಮಾಡಿ ಸಂಗ್ರಹಿಸಿದ ವಿಷಯಗಳಿವು- ಹಬೆಯಿಲ್ಲದೆ ಒಳಗೊಳಗೆ ಕುದಿದು ಬೇಯುತ್ತಿದ್ದ ಅಲ್ಲಿಯ ಜನಮನಗಳನ್ನು ಪ್ರತ್ಯಕ್ಷ ಕಂಡು ತಿಳಿದುಕೊಂಡ ಸಂಗತಿಗಳಿವು!

ಕ್ರೋಧ ಸಂತಪ್ತ ಕಣ್ಣುಗಳಿಂದ ಕೆಕ್ಕರಿಸಿ ನೋಡುತ್ತಿರುವ ಆಯತುಲ್ಲಾ ಖೊಮೇನಿಯ ಬೃಹದಾಕಾರದ ಚಿತ್ರವನ್ನು ಆ ಹೋಟೆಲಿನ ಎತ್ತರವಾದ ಗೋಡೆಗೆ ಮುಂಬಾಗಿಲ ಮೇಲ್ಭಾಗದಲ್ಲಿ ತಗಲಿಸಲಾಗಿತ್ತು; ಚಿತ್ರದ ಮೇಲಂಚಿನ ಮೇಲಕ್ಕೆ ದೊಡ್ಡ ದಪ್ಪ ಅಕ್ಷರಗಳಲ್ಲಿ ಈ ರೀತಿ ಬರೆಯಲಾಗಿತ್ತು. 'ಅಮೇರಿಕಾ ನಿನಗಿದೋ ಮರಣದಂಡನೆ!'

ಆದರೆ ಈ ಭೀಷಣತೆಯು ಒಳಸತ್ಯದ ಮೇಲ್ಮುಸುಕು ಮಾತ್ರವೇ ಆಗಿ ಪರಿಣಮಿಸಿದೆಯೆಂದು, ತುಸುಹೊತ್ತಿನಲ್ಲೇ ತಿಳಿದು ಹೋಯಿತು. ನನ್ನನ್ನು ಕಂಡೊಡನೆ ಹೋಟೆಲಿನ ಗುಮಾಸ್ತ ತನ್ನೆದುರಿನ ಮೇಜಿನಮೇಲಿಂದ ಬಾಗಿ ಕೈಚಾಚಿ, ಬಹಳ ಉತ್ಸಾಹದಿಂದ ಕೈ ಕುಲುಕುತ್ತಾ ಹೇಳಿದ- "ಸ್ವಾಗತ ಸುಸ್ವಾಗತ! ಅಂತೂ ಕೊನೆಗೆ ಈಗಲಾದರೂ, ನೀವು-ಅಮೇರಿಕದವರು- ಪುನಃ ಇಲ್ಲಿಗೆ ಬರತೊಡಗಿದಿರಿ! ಸಂತೋಷ! ಸಂತೋಷ!" ಆತ ದೊಡ್ಡ ಸ್ವರದಲ್ಲಿ ಕಿರುಚಿದ. ಅವನ ದೀರ್ಘ ಹಸ್ತಲಾಘವವು ಇರಾನಿನಲ್ಲಿ ತೆರೆದುಕೊಳ್ಳುತ್ತಿದ್ದ ಬದಲಾದ ಪರಿಸ್ಥಿತಿಯ ಇಂಗಿತವನ್ನು ತಿಳಿಸುವಂತಿತ್ತು.

ರೀಡರ್ಸ್ ಡೈಜೆಸ್ಟಿನ ೧೯೯೨ ನವಂಬರ್ ಸಂಚಿಕೆಯಲ್ಲಿ ಪ್ರಕಟವಾದ ವಿಲಿಯಂ ಹೆಂಡ್ರಿಕ್ಸ್ ನವರ ಇಪ್ ಸೈಡ್ ಇರಾನ್-ಡಿಕೇಡ್ ಆಫ್ ಡಿಸ್ಟ್ರಕ್ಷನ್ ಲೇಖನದ ಭಾವಾನುವಾದ.

ಬಹುಶಃ ಧರ್ಮಾಂಧತೆ ತನ್ನ ನಾಟಕದ ಕೊನೆಯ ಅಂಕಕ್ಕೆ ತಲುಪಿ, ಇನ್ನೇನು, ಪರದೆ ಬೀಳಿಸುವ ಸನ್ನಾಹದಲ್ಲಿರಬಹುದೇ?

ಹಿಂದೆ ೧೯೭೯ರಲ್ಲಿ ಇಸ್ಲಾಮ್ ಕ್ರಾಂತಿ ಪ್ರಾರಂಭವಾಗುವ ಮೊದಲು ನಾನು ಬಂದಿದ್ದಾಗ ಟೆಹರಾನ್ ಒಂದು ಸುಂದರ ಸುಸಜ್ಜಿತ ನಗರವಾಗಿತ್ತು. ಇರಾನಿಯರದೇ ಸ್ವಂತ ರಚನೆಯ ಸಿಂಫೋನಿ ವೃಂದಗಾನದೊಂದಿಗೆ, ಮಧ್ಯಮವರ್ಗದ ಉಲ್ಲಸಿತ ನಾಗರಿಕರಿಂದ ತುಂಬಿ ತುಳುಕಾಡುತ್ತಿತ್ತು. ಅತಿ ಸ್ವಚ್ಛ ಹೆದ್ದಾರಿಗಳು, ಇಕ್ಕಡೆಗಳಲ್ಲೂ ಬೆಳೆಸಿದ ಸಾಲುಮರಗಳುಳ್ಳ ವಿಶಾಲ ರಾಜಬೀದಿಗಳು; ಎಲ್ಲೆಲ್ಲಿ ಹೇಗಿರಬೇಕೋ ಹಾಗೆ, ನಾಮಫಲಕಗಳು, ಮಾರ್ಗಸೂಚಿಗಳು, ಶಾಲೆಗಳು, ಆಸ್ಪತ್ರೆಗಳು ಮುಗಿಲೆತ್ತರದ ಕಟ್ಟಡದ ಕಮಾನುಗಳು! ಇನ್ನೇನು ಬೇಕು? "ಮಧ್ಯಪೂರ್ವ ದೇಶಗಳಲ್ಲಿ ಇಂತಹ ನಗರ ಇದೊಂದೇ!" ಎಂದು ಹೆಮ್ಮೆಪಡುವಂತ ಟೆಹರಾನ್ ಇಂದು ಇಪ್ಪತ್ತು ವರ್ಷಗಳನಂತರ ನೋಡಹೊರಟಿದ್ದೇನೆ. ಹೇಗಾಗಿದೆ? ಬೀದಿಗಳಲ್ಲೆಲ್ಲ ಹಳ್ಳಗುಂಡಿಗಳು, ಕಟ್ಟಡ ನಿರ್ಮಾಣಕ್ಕಾಗಿ ಅಂದು ಬಳಸುತ್ತಿದ್ದ ಕ್ರೇನ್‌ಗಳು ನಿಂತ ಕಡೆಯಲ್ಲೇ ತುಕ್ಕು ಹಿಡಿದು ಹಾಳಾಗುತ್ತಿರುವ ನೋಟಗಳು! ಮೂಲಭೂತವಾದವೆಂಬ ಕ್ರಾಂತಿಯ ಹುಚ್ಚು ಹಿಡಿದಂದೇ ನಿಲ್ಲಿಸಲಾದ, ಅರ್ಧದಲ್ಲೇ ನಿಂತುಹೋದ ಕಟ್ಟಡಗಳು ಕೆಲಸ ಕಾಮಗಾರಿಗಳು, ಕಲ್ಲುಗೋಡೆಗಳು, ಖಾಲಿಬಿದ್ದ ನಿವೇಶನ ಪ್ರದೇಶಗಳು!

ನಾನು ಟೆಹರಾನ್ ತಲಪಿದೊಡನೆ ಫಾತಿಮಾ ಎಂಬಾಕೆಯನ್ನು ಸಂಪರ್ಕಿಸಬಹುದೆಂದು ನನ್ನ ಅಮೇರಿಕಾ ಗೆಳೆಯನೊಬ್ಬ ತಿಳಿಸಿದ್ದ. ಅದಕ್ಕಾಗಿ ಆ ಹೋಟೆಲಿನ ಗೊತ್ತಾದ ಒಂದು ಕೊಠಡಿಯಲ್ಲಿ ನಮ್ಮ ಭೇಟಿಯನ್ನು ಮುಂದಾಗಿಯೇ ವ್ಯವಸ್ಥೆಮಾಡಲಾಗಿತ್ತು. ಶಿರದಿಂದ ಪಾದದವರೆಗೆ ಬೃಹತ್ತಾದ ಕಪ್ಪು ಬುರುಖಾದೊಳಗೆ ಅಡಗಿದ್ದ 'ಆಕೆ' ಗಾಬರಿಯಿಂದ ಅತ್ತಿತ್ತ ದೃಷ್ಟಿ ಹಾಯಿಸುತ್ತ "ಈ ಕೆಲಸವನ್ನು ನಾನೇತಕ್ಕೆ ಒಪ್ಪಿಕೊಂಡೆನೋ ತಿಳಿಯುತ್ತಿಲ್ಲ! ಯಾರಾದರೂ ನೋಡಿಬಿಟ್ಟರೆ?" ಏದುಸಿರು ಬಿಡುತ್ತ ಭಯದಿಂದ ನುಡಿದಳು.

ಕ್ರಾಂತಿಯಿಂದ ಇರಾನಿಗೆ ಸ್ವರ್ಣಯುಗ ಬರಲಿದೆ ಎಂದು ನಂಬಿದ್ದಳಾಕೆ. ಫ್ರಾನ್ಸಿನಲ್ಲಿ ಹಲವು ವರ್ಷ ವಿದ್ಯಾಭ್ಯಾಸ ಮಾಡಿ ಮುಗಿಸಿ ೧೯೭೯ರಲ್ಲಿ ಕ್ರಾಂತಿಯಲ್ಲಿ ಭಾಗವಹಿಸಲಿಕ್ಕೆಂದೇ ಟೆಹರಾನಿಗೆ ಹಿಂತಿರುಗಿ ಬಂದವಳವಳು. ಶಾಹನ ಕಠೋರ ದುರಾಡಳಿತಕ್ಕಿಂತ ಬೇರೆ ಯಾವ ಶಾಸನವಾದರೂ ಉತ್ತಮವಾಗಿರುವುದೆಂಬ ದೃಢವಿಶ್ವಾಸ ಅವಳಿಗಿತ್ತು. ಆದರೆ ಬಲುಬೇಗನೆ ಅವಳ ಆಸೆ ಭರವಸೆಗಳು ಸಿಡಿದು ಚೂರಾಗಿ ಚದರಿಹೋದವು. ಮತಾಂಧ ಮೂಲಭೂತ ವಾದಿಗಳು ಪರಮತಸಹಿಷ್ಣುತೆಯ, ಸಮತಾ ಸಂಸ್ಕೃತಿಯ, ಸ್ಪರ್ಶವಿದ್ದಲ್ಲೆಲ್ಲ ಹುಡುಕಿ ಕೆದಕಿ ಜಾಲಾಡಿ ವಿಧ್ವಂಸ ಮಾಡುತ್ತಿರುವುದನ್ನು ಕಂಡು ದಿಗ್ಭ್ರಾಂತಳಾದಳು. ನರ್ತನ ಕೂಟಗಳು ಕಾನೂನು ಬಾಹಿರವೆಂದೆನಿಸಿಕೊಂಡವು ಮಾತ್ರವಲ್ಲ, ನೃತ್ಯವನ್ನೇ ಇಸ್ಲಾಮ್ ವಿರೋಧಿ ಎಂದು ಘೋಷಿಸಿದರು. ನೈಟ್‌ಕ್ಲಬ್‌ಗಳನ್ನು ಇಸ್ಲಾಮ್ ಮೂಲ ಸಿದ್ಧಾಂತಗಳ ಪ್ರಚಾರ ಮಾಡುವ ಸಿನೆಮಾ ಥಿಯೇಟರುಗಳಾಗಿ ಪರಿವರ್ತಿಸಿದರು. ಶಾಲಾ ಕಾಲೇಜುಗಳಲ್ಲಿ ಮೂಲಭೂತವಾದಿ ಮುಖ್ಯಸ್ಥರಿಂದ ಅನುಮತಿ ಹೊಂದಿದ ಪಠ್ಯಪುಸ್ತಕಗಳನ್ನು ಮಾತ್ರ ಉಪಯೋಗಿಸ ಬೇಕೆಂದು ಕಡ್ಡಾಯವಾಯಿತು. ವಿದ್ಯಾರ್ಹತೆ ಇಲ್ಲದ ಕ್ರಾಂತಿ ಕಾರ ಯುವಕರನ್ನು ಕಾಲೇಜಿನ ಉನ್ನತಶಿಕ್ಷಣ ತರಗತಿಗಳಿಗೆ ಲೆಕ್ಕಮಿತಿ ಇಲ್ಲದೆ ಭರ್ತಿಮಾಡಿದರು. ಅಂಥವರಿಗೆ ಕಡಿಮೆ ಅಂಕಗಳನ್ನಿತ್ತ ಶಿಕ್ಷಕರು

ಕ್ರಾಂತಿ ವಿರೋಧಿಗಳೆಂದು ನಿಂದೆಗೆ ಗುರಿಯಾಗಬೇಕಾಯಿತು.

''ಈ ದೇಶಕ್ಕೆ ಕ್ರಾಂತಿಯಿಂದಾಗಿ ದೊರೆತುದು ದುರಂತಗಳು ಮಾತ್ರ. ಯಾರಿಗಾದರೂ ಲಾಭವಾಗಿದೆಯೆಂದರೆ ಅದು ಮುಲ್ಲಾಗಳಿಗೆ ಮಾತ್ರ''-ಫಾತಿಮಾ ಹೇಳಿದಳು.

ಆದರೆ ಇತ್ತೀಚೆಗೆ ಮುಲ್ಲಾಗಳು ಇಸ್ಲಾಮ್ ಮತೀಯ ಪದಾಧಿಕಾರಿ ಮತ್ತು ಅವರ ಮೂಲಭೂತವಾದಿ ಹಿಂಬಾಲಕರು ಇರಾನಿನ ಆತ್ಮವನ್ನು ಸ್ವಾಧೀನಪಡಿಸಿಕೊಳ್ಳುವ ಹೋರಾಟದಲ್ಲಿ ಸೋಲುತ್ತಿರುವ ಲಕ್ಷಣಗಳು ಸ್ಪಷ್ಟವಾಗಿ ಕಾಣತೊಡಗಿವೆ. ಸಾರ್ವಜನಿಕ ಜೀವನದ ನೀತಿ ನಡತೆಗಳ ಮೇಲೆ ಬಿಗಿ ಕಡಿವಾಣ ಹಾಕಿರುವ ಈ ಸಂಘಟನೆಯ ಹೆಸರು ಕೊಮಿತೇ. ಇರಾನಿನಲ್ಲೆಲ್ಲ ಜನರ ಕಿವಿಸಂದಿಗೆ ಪಿಸ್ತೂಲ್ ಹಿಡಿದು ಸಜ್ಜಾಗಿರುವ ಕೋಮಿತೇಯರ ಭೀಷಣತೆಯನ್ನು ನಿರ್ಲಕ್ಷಿಸಿ ದೊಡ್ಡದನಿಯಲ್ಲಿ ತಮ್ಮ ಅಭಿಪ್ರಾಯ ಹೇಳತೊಡಗಿದ್ದನ್ನು ಕಂಡು ದಂಗಾಗಿ ಹೋದೆ!-ಒಂದು ದಿನ ಒಬ್ಬ ಟಾಕ್ಸಿ ಚಾಲಕ ನನ್ನನ್ನು ಪ್ರಶ್ನಿಸಿದ- ''ನೀವು ಅಮೇರಿಕದವರು-ಆಯತುಲ್ಲಾ ಖುಮೇನಿಯನ್ನು ಮೆಚ್ಚುತ್ತೀರಾ?'' ''ಅಷ್ಟೇನೂ ಇಲ್ಲ'' ನಾನು ತಪ್ಪೊಪ್ಪಿಸುವವನ ದನಿಯಲ್ಲಿ ಹೇಳಿದೆ. ಅವನು ಕ್ರೋಧಗೊಳ್ಳುತ್ತಾನೆಂದು ಭಾವಿಸಿದ್ದೆ. ಆದರೆ ಅವನು ತಿರಸ್ಕಾರದಿಂದ ತುಟಿಗಳನ್ನು ತಿರುಚಿ ''ನಾವು ಇಷ್ಟಪಡುತ್ತಿಲ್ಲ! ''ಎಂದಾಗ ಕಿವಿಬಳಿಯಲ್ಲೇ ಗುಂಡು ಸಿಡಿದಂತೆ ಬೆಚ್ಚಿಬಿದ್ದೆ ನಾನು!

ಮಿತಿಮೀರಿದ ಅಸಂತೃಪ್ತಿ ಎಲ್ಲ ಕಡೆ ಚಿಗುರುತ್ತಾ ಇತ್ತು. ಮುಖ್ಯ ಕಾರಣ-ಆರ್ಥಿಕ ಅನುಕೂಲತೆಯೊದಗಿಸಲು 'ಮೂಲಭೂತ' ಚಳುವಳಿ ವಿಫಲವಾಗಿತ್ತು. ಇರಾನಿನ ಜನನ ಪ್ರಮಾಣ ಜಗತ್ತಿನಲ್ಲೇ ಅತಿ ಹೆಚ್ಚಾದುದು ಇನ್ನೊಂದು ಪ್ರಮಾದ. ದೇಶದ ಜನಸಂಖ್ಯೆಗೆ ಪ್ರತಿವರ್ಷ ಒಂದು ಮಿಲಿಯಕ್ಕಿಂತಲೂ ಹೆಚ್ಚು ಪ್ರಜೆಗಳನ್ನು ಸೃಷ್ಟಿಸುತ್ತಾ ಇದೆ. ಇರಾನಿನ ೫೬ ಮಿಲಿಯ ಜನಸಮುದಾಯಕ್ಕೆ ವರ್ಷ ವರ್ಷವೂ ಒಂದೊಂದು ಮಿಲಿಯಕ್ಕೂ ಹೆಚ್ಚು ನವ ಜಾತರು ಸೇರಿಕೊಳ್ಳುತ್ತಿದ್ದಾರೆ. ಖೊಮೇನಿಯು ಬಡಜನರ ಕಷ್ಟ ನಿವಾರಣೆಯ ವಾಗ್ದಾನ ಮಾಡಿದ್ದ. ಆದರೆ ನಡೆದದ್ದೇ ಬೇರೆ. ಶೇ ೩೦ರಷ್ಟು ಪ್ರಜಾಕೋಟಿ ನಿರುದ್ಯೋಗಿಗಳಾದರು. ಹಣದುಬ್ಬರದ ಉತ್ಕರ್ಷವೆಷ್ಟಾಯಿತೆಂದರೆ, ಹತ್ತು ವರ್ಷ ಹಿಂದೆ ಇದ್ದ ಒಂದು ಕಿಲೋ ಅಕ್ಕಿಯ ಬೆಲೆಯು ಹತ್ತುಪಟ್ಟು ಇಂದಿನ ದರವಾಗಿದೆ. ಮಾಂಸದ ಬೆಲೆ ಹದಿನೈದು ಮಡಿ ಏರಿದೆ. ಮುಲ್ಲಾಗಳಿಂದ ನಡೆಸಲಾಗುತ್ತಿರುವ ರಾಷ್ಟ್ರೀಕೃತ ಉದ್ಯೋಗ ಸಂಸ್ಥೆಗಳ ಉತ್ಪಾದನಾ ಸಾಮರ್ಥ್ಯ ೧೯೭೮ರಲ್ಲಿ ಇದ್ದುದಕ್ಕಿಂತ ಮೂರನೇ ಎರಡು ಭಾಗಕ್ಕೂ ಹೆಚ್ಚು ಕೆಳಕ್ಕಿಳಿದಿದೆ. ಇದರಂತೆ ತೈಲೋತ್ಪಾದನೆಯಲ್ಲೂ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಅಂಶ ಕಡಿಮೆಯಾಗಿದೆ. ಮೊದಲು ಇರಾನಿನಲ್ಲೇ ಉತ್ಪಾದನೆಯಾಗುತ್ತಿದ್ದ ಆಹಾರ ಸಾಮಗ್ರಿಗಳಲ್ಲೂ ಬಹಳ ಕೊರತೆ ಉಂಟಾಗಿರುವುದರಿಂಥ ಸರಕಾರಕ್ಕೆ ಸಂದಾಯವಾಗುತ್ತಿರುವ ವಾರ್ಷಿಕ ತೆರಿಗೆ ೧೫ ಬಿಲಿಯ ಡಾಲರ್‌ಗಳಲ್ಲಿ ಹೆಚ್ಚಿನ ಹಣ ಕೊರತೆ ತುಂಬಲು ಆಹಾರ ಆಮದಿಗೆ ಖರ್ಚಾಗುತ್ತಿದೆ.

ಇರಾನಿನ ಮಹಾದುರಂತಕ್ಕೆ ಪ್ರತ್ಯಕ್ಷ ನಿದರ್ಶನ ಬೇಕೇ? ಹಾಗಿದ್ದರೆ ದಕ್ಷಿಣ ಟೆಹರಾನಿನ ಕೆಳದರ್ಜೆಯ ಹೋಟೆಲೊಂದರೊಳಗೆ ಕಣ್ಣು ಹಾಯಿಸಿರಿ. ಅದೋ! ಕೊಳಕು ತುಂಬಿದ ಮುಸುಕು ಮಬ್ಬಿನ ಕೋಣೆಯಲ್ಲಿ, ಒಂದು ಮುಗಿದಾಗ ಮತ್ತೊಂದು ಗ್ಲಾಸು ಅತಿ ಕಡುಪಿನ ಸಿಹಿ ಚಹ ಹೀರುತ್ತಾ, ಸಾಲಾಗಿ

ಕುಳಿತ ಮ್ಲಾನವದನದ ಆಸೆಗಣ್ಣಿನ ಯುವಕರು! ಬೆಂಚಿನ ಕೊನೆಯಲ್ಲಿದ್ದಾನಲ್ಲ, ಅವನ ಹೆಸರು ರೇಜಾ, ೩೨ ವರ್ಷದ ಕಾರ್ಮಿಕ. ಕೆಲಸಕೊಡಿಸುವ ಒಬ್ಬ ಕಂಟ್ರಾಕ್ಟರನಾದರೂ ಅಲ್ಲಿ ಪ್ರತ್ಯಕ್ಷನಾಗಲಿ ಎಂದು ಪ್ರಾರ್ಥಿಸುತ್ತಿರುತ್ತಾನೆ. ಹಲವು ವಾರಗಳಿಂದ ಪ್ರತಿದಿನ ಅಲ್ಲಿ ಬಂದು ಕಾಯುತ್ತಿದ್ದಾನೆ. ರೇಜಾ ಐದು ಮಕ್ಕಳ ತಂದೆ. ಇಂದು ಕೆಲಸ ದೊರೆತರೆ ಅವರಿಗಾಗಿ ಒಂದಿಷ್ಟು ಮಾಂಸ ಕೊಂಡೊಯ್ಯು ಆಸೆ ಅವನದು. ಇಲ್ಲವಾದಲ್ಲಿ ಎಂದಿನಂತೆ ಅವರಿಗೆ ಬರಿ ಅನ್ನ.

ವರ್ಷಗಳ ಹಿಂದೆ ರೇಜಾ ಕ್ರಾಂತಿ ಚಳವಳಿಯ ಪದಾತಿಯಾಗಿದ್ದ. ಖೊಮೇನಿಯನ್ನು ಅಧಿಕಾರಕ್ಕೇರಿಸಲು ಇವನಂಥ ನೂರಾರು ಜನ ಆತ್ಮಾರ್ಪಣೆ ಮಾಡಿದ್ದರು. ಅದಾದ ಮೇಲೆ ನಡೆಯಿತು ಇನ್ನೊಂದು ಯುದ್ಧ, ಇರಾಕಿನೊಡನೆ ಆಯತುಲ್ಲಾ ಯುದ್ಧ ಹೂಡಿದ್ದ. ನೂರಾರು ಸಾವಿರ ಸೈನಿಕರು ಆಗ ಹತರಾದರು!

ಮುಲ್ಲಾಗಳು ಮೊದಲಿಗೆ ರೇಜಾನೊಡನೆ ಹೇಳಿದ್ದು-"ಮಹಾಸೈತಾನರೆಂದರೆ ಅಮೇರಿಕದವರು; ನಮ್ಮನ್ನೆಲ್ಲ ಬಡತನಕ್ಕೆ ತಳ್ಳಿದವರು!" ಆಮೇಲೆ ಹೇಳಿದ್ದು-"ಇರಾಕಿನೊಡನೆ ಯುದ್ಧವಾಯಿತಲ್ಲಾ, ಅದರಿಂದ ಬಡತನ ಹೆಚ್ಚಿದೆ." ಮತ್ತೆ ಕೊನೆಗೀಗ ದೂರುವುದಕ್ಕೆ ಯಾರೂ ಸಿಗುತ್ತಿಲ್ಲ.

ಚಹದ ಅಂಗಡಿಯಲ್ಲಿ ನಿಧಾನವಾಗಿ ಹಗಲು ಕಳೆದು ಸಂಜೆಯಾಗುತ್ತಿದೆ. ಸಂಜೆ ಕಳೆದು ಮುಸ್ಸಂಜೆ ಕವಿಯುತ್ತಿದೆ. ರೇಜಾವಿಗೆ ಈ ದಿವನೂ ಕೆಲಸ ಸಿಕ್ಕಿಲ್ಲ ಅವನ ಸಂಸಾರದ ಊಟದ ತಟ್ಟೆಗೆ ಮಾಂಸವೂ ದಕ್ಕಿಲ್ಲ.

ಅರೆಹೊಟ್ಟೆಯ ಇಂಥ ಪ್ರಸಂಗಗಳ ಸರಣಿ ಎಲ್ಲೆಡೆ ಹಬ್ಬಿದೆ. "ಹಿಂದೆ ಮಸೀದಿಗಳಲ್ಲಿ ಜನ ಕಿಕ್ಕಿರಿದು ತುಂಬಿರುತ್ತಿದ್ದರು. ಆದರೆ ಇತ್ತೀತ್ತಲಾಗಿ ಅಲ್ಲಿಗೆ ಬರುವವರೇ ಇಲ್ಲ."-೩೯ವಯಸ್ಸಿನ ಇಂಜಿನಿಯರರು ಹೀಗೆನ್ನುತ್ತಾರೆ- ಇದು ಜನರ ಪ್ರತಿಭಟನೆಯ ಒಂದು ಸ್ವರೂಪ ಅಷ್ಟೆ. ತಮ್ಮ ಕಣ್ಣೆದುರೇ ದಿನದಿಂದ ದಿನಕ್ಕೆ ಮುಲ್ಲಾಗಳು ಧನಿಕರಾಗುತ್ತಾ ಬರುವುದು, ತಾವು ಮಾತ್ರ ಬಡತನದ ಪ್ರಪಾತಕ್ಕೆ ಜಾರಿ ಬೀಳುತ್ತಿರುವುದು, ಜನರ ಗಮನಕ್ಕೆ ಬಂದಿದೆ. ತಮಗೆ ಅನ್ಯಾಯವಾಗುತ್ತಿದೆ, ತಮ್ಮನ್ನು ವಂಚಿಸಲಾಗಿದೆ, ಎಂಬ ಅರಿವು ಸ್ಪಷ್ಟವಾಗಿ ಮೂಡತೊಡಗಿದೆ.

ಆಡಳಿತದ ಎಲ್ಲ ಕ್ಷೇತ್ರಗಳ ಮೇಲೆ ಭ್ರಷ್ಟಾಚಾರ ಆಕ್ರಮಣ ನಡೆಸಿದೆ. ವ್ಯಾಪಾರ, ವಹಿವಾಟುಗಳ ಪರವಾನಗಿ ದೊರಕಿಸಿಕೊಳ್ಳಬೇಕಿದ್ದಲ್ಲಿ, ಸರಕಾರಕ್ಕೆ ಕೊಡಬೇಕಾಗುವ ಶುಲ್ಕದ ಶೇ ೨೦ರಷ್ಟು ಲಂಚ ಕೊಟ್ಟೇ ತೀರಬೇಕು! ಒಬ್ಬ ವಹಿವಾಟುದಾರ ಹೀಗೆಂದ- 'ಪ್ರಾಮಾಣಿಕತೆ ಎಂಬ ವಸ್ತು ಯಾವ ಕಛೇರಿಯಲ್ಲೂ ಕಾಣಸಿಗುತ್ತಿಲ್ಲ. ಸರಕಾರದೊಂದಿಗೆ ನಡೆಸಿದ ನನ್ನ ನೂರು ವ್ಯವಹಾರಗಳಲ್ಲಿ ಲಂಚವಿಲ್ಲದೆ ಹಕ್ಕು ಪತ್ರಪಡೆದುಕೊಳ್ಳಲು ಸಾಧ್ಯವಾದ್ದು ಒಂದರಲ್ಲಿ ಮಾತ್ರ!

ಎಲ್ಲಕ್ಕಿಂತ ಹೆಚ್ಚಿನ ಅನ್ಯಾಯವೆಂದರೆ ಸ್ತ್ರೀಯರ ಮೇಲಿನ ದಬ್ಬಾಳಿಕೆ. ಮುಲ್ಲಾಗಳು ತಮ್ಮ ಅಸಮರ್ಥತೆಗೆ ಸ್ತ್ರೀಯರೇ ಕಾರಣವೆಂದು ಆಪಾದಿಸುವುದರೊಂದಿಗೆ ಕುರಿ ಆಡುಗಳನ್ನು ಬಲಿಕೊಡಲು ಕೊಂಡೊಯ್ಯುವ ಹಾಗೆ ಅವರನ್ನು ಎಳೆದೊಯ್ಯುತ್ತಿರುತ್ತಾರೆ. ಸೌಂದರ್ಯ ವರ್ಧಕಗಳನ್ನು ಬಳಸುವ ಸ್ತ್ರೀಯರು ಬೀದಿಯಲ್ಲಿ ನಡೆದು ಹೋಗುತ್ತಿದ್ದರೆ. ಅಲ್ಲಿಂದಲೇ ಅವರನ್ನು ಸೆರೆಹಿಡಿದು ಬಂದೀಖಾನೆಗೆ ತಳ್ಳುತ್ತಾರೆ. ಅವರ ಮೇಲಿನ

ಅನುಚಿತ ವರ್ತನೆಗಳು, ದೌರ್ಜನ್ಯಗಳು, ನೀಚತನದ ಪರಮಾವಧಿಗೇರಿವೆ. ತೀವ್ರ ಪ್ರತಿಗಾಮಿಗಳೆನಿಸಿದ 'ಕೊಮಿತೆ' ಸಂಘಟನೆಯವರು ಯಾವ ಕ್ಷಣದಲ್ಲಾದರೂ ವಸತಿ ಪ್ರದೇಶಗಳ ಎಲ್ಲ ಮಾರ್ಗಗಳಲ್ಲಿ ತಡೆಯೊಡ್ಡಿ ಘೇರಾಯಿಸಿ ಯಾವಳೊಬ್ಬ ಸ್ತ್ರೀಯ ತಲೆಗೂದಲು ಅವಳ ಬುರಖಾದಿಂದ ಹೊರಕ್ಕೆ ಇಣುಕುವಂತಿದ್ದರೆ, ಅಥವಾ ಪಾದಗಳ ಬಳಿ, ಕರಿನಿಲುವಂಗಿಯಿಂದ ಕೆಳಗೆ, ಒಳಗಿನ ಬಣ್ಣದ ಉಡುಪು, ಅಂಚು, ತೋರುವಂತಿದ್ದರೆ ಅದು ನಿರ್ಲಜ್ಜತೆಯೆಂದು, ಅಸಭ್ಯ ವರ್ತನೆಯೆಂದು, ಆರೋಪ ಹೊರಿಸಿ ದಂಡನೆಗೆ ಗುರಿಪಡಿಸುತ್ತಾರೆ.

ಉದ್ಯೋಗ ಮತ್ತು ನೌಕರಿಗಳಿಂದ ಸ್ತ್ರೀಯರನ್ನು ಹೊರಗಟ್ಟುವ ಯೋಜನಾಬದ್ಧ ಸಂಚು ಹೂಡಲಾಯಿತು. ಕಾರ್ಖಾನೆ ಕಛೇರಿಗಳಲ್ಲಿ ಲಿಂಗಕ್ಕನುಸಾರವಾಗಿ ವಿಭಾಗಗಳನ್ನು ರಚಿಸಿದರು. ಇವುಗಳಿಂದಾದ ಪರಿಣಾಮವೆಂದರೆ ಹಿಂದೆ ೧೯೭೮ರಲ್ಲಿ ಸ್ತ್ರೀ ನಿರುದ್ಯೋಗಿಗಳ ಸಂಖ್ಯೆ ಶೇಕಡಾವಾರು ಹನ್ನೆರಡು ಮಾತ್ರವೇ ಇತ್ತು. ಆದರೀಗ ಅವರ ಸಂಖ್ಯೆ ಶೇ ೭೦ಕ್ಕೇರಿದೆ.

ಇಸ್ಲಾಮ್ ಕ್ರಾಂತಿಗೆ ಮೊದಲು 'ಶಾನ್ಹಾಸ್ಜ್' ಎಂಬ ೩೦ವರ್ಷದ ಯುವತಿ, ಮಧ್ಯಪೂರ್ವ ದೇಶಗಳಲ್ಲೆಲ್ಲ ಶ್ರೇಷ್ಠವೆಂದು ಪ್ರಸಿದ್ಧವಾಗಿದ್ದ, ಮತ್ತು ಇರಾನ್ ಸಂಸ್ಕೃತಿಯ ಘನತೆಯನ್ನು ಸಾರುತ್ತಿದ್ದ ಹಾಗೂ ಅತಿ ಹೆಚ್ಚು ಲಾಭ ಗಳಿಸುತ್ತಿದ್ದ ಉದ್ದಿಮೆಯೊಂದರ ನಿರ್ವಹಣಾಧಿಕಾರಿಯಾಗಿದ್ದಳು. ಈಗ ಆಕೆ ಪುರುಷರೊಡನೆ ವ್ಯವಹಾರ ಮಾತುಕತೆ ನಡೆಸುವಾಗ ತಲೆಯಿಂದ ಕಾಲಿನವರೆಗೆ ಕರಿಮುಸುಕು ಧರಿಸಿರಬೇಕಾದ ನಿಯಮಕ್ಕೆ ಕಟ್ಟುನಿಟ್ಟಾಗಿ ಬದ್ಧಳಾಗಿರಬೇಕಾಗಿದೆ.

ಅವಳೆನ್ನುತ್ತಾಳೆ-''ಈ ಕ್ರಮವನ್ನು ನಾನು ಕಟುವಾಗಿ ದ್ವೇಷಿಸುತ್ತೇನೆ'' ಅವಳ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಯದರ್ಶಿಯರು ಬುರಖಾ ಧರಿಸದೆ ಇದ್ದುದಕ್ಕೆ ಹಲವು ತಿಂಗಳು ಸಂಸ್ಥೆಯನ್ನು ಮುಚ್ಚಿ ಬೀಗ ಜಡಿದಿದ್ದರು-ಈ ಸರಕಾರಿ ಏಜೆಂಟರು.'' ಇವರು ದೇಶದ ಉನ್ನತ ಸಂಸ್ಕಾರ, ಸಭ್ಯತೆಗಳನ್ನು ವಿರೂಪಗೊಳಿಸಿದ್ದಾರೆ. ಪರಂಪರೆಯನ್ನು ಸಂಪೂರ್ಣ ಅಳಿಸಿ ಹಾಕಿದ್ದಲ್ಲದೆ, ಜಗತ್ತಿನ ಎಲ್ಲ ಆಗುಹೋಗುಗಳಿಂದ, ವೈಜ್ಞಾನಿಕ ಮುನ್ನಡೆಯಿಂದ, ನಮ್ಮನ್ನು ಪ್ರತ್ಯೇಕಿಸಿ ದೂರ ವಿಟ್ಟಿದ್ದಾರೆ.'' ಇರಾನಿನ ವಿದ್ಯಾವಂತ ಮಹಿಳೆಯರ ಅನುಭವಕ್ಕೆ ಬಂದಿರುವಂತೆ ಶಾನ್ಹಾಸ್ಜ್‌ಳಿಗೂ ಗುಮಾಸ್ತಗಿರಿಯಲ್ಲಿ ಅಡಗಿರುವ ಅಪಾರ ಶಕ್ತಿಯ ಅರಿವಾಗಿದೆ ಮತ್ತು ಅದಕ್ಕೆ ಕಾರಣವೂ ಇದೆ.

ಒಂದು ಸಂಜೆ ನಗರದ ಹೊರವಲಯದ ಪ್ರಶಾಂತವಾದೊಂದು ಬಂಗಲೆಯಲ್ಲಿ ಸಂತೋಷಕೂಟದ ಏರ್ಪಾಡಾಗಿತ್ತು. ಶಾನ್ಹಾಸ್ಜ್ ಅದರಲ್ಲಿ ಭಾಗವಹಿಸಲು ಹೋಗಿದ್ದಳು. ಅಲ್ಲಿದ್ದವರೆಲ್ಲ ನವದಂಪತಿಗಳೇ ಕೆಲವರು ನರ್ತಿಸ ತೊಡಗಿದರು. ಕಾಕಟೇಲ್ ಸೇವೆ ಮುಂದುವರಿದಿತ್ತು. ಗಂಟೆರಾತ್ರಿ ಹತ್ತೂವರೆಯಾಗಿತ್ತು. ಹಠಾತ್ತನೆ ಸೈನಿಕ ಸಮವಸ್ತ್ರ ಧರಿಸಿದ ಮೂವರು ಉದ್ದಗಡ್ಡದಾರಿಗಳು ಅಲ್ಲಿ ಒಳನುಗ್ಗಿದರು. ಮೂವರೂ ಸಂಗೀತಗೋಷ್ಠಿಯ ಕಡೆಗೆ ಪಿಸ್ತೂಲಗಳನ್ನು ಗುರಿಹಿಡಿದರು. ಅವರ ನಾಯಕ ಗರ್ಜಿಸಿದ- ''ಎಲ್ಲರೂ ಅಲ್ಲೇ ಅಲುಗಾಡದೆ ನಿಂತಿರಿ! ನಾವು 'ಕೊಮಿತೆ'ಗಳು ! ಭಯದ ಅಲೆ ಅಲ್ಲಿ ನೆರೆದಿದ್ದವರ ಶರೀರಾದ್ಯಂತ ಹರಿಯ ತೊಡಗಿತು. ನಾಯಕ ಆಜ್ಞಾಪಿಸಿದ- ''ಗಂಡುಸರೂ ಹೆಂಗಸರೂ ದೂರ ಸರಿದು ಹೋಗಿರಿ. ಹೆಣ್ಣು ಗಂಡು ಒಟ್ಟೊಟ್ಟಿಗೆ ಕುಳಿತಿರುವುದು ಈ

ದೇಶದ ಕಾನೂನಿಗೆ ವಿರುದ್ಧವಾಗಿದೆ.''

ಕೊಮಿತೆಗಳು ಅಲ್ಲಿದ್ದ ಮದ್ಯದ ಬಾಟ್ಲಿಗಳನ್ನೂ ಸಂಗೀತದ ಧ್ವನಿಸುರುಳಿಗಳನ್ನೂ, ಸಾಕ್ಷ್ಯಾಧಾರಕ್ಕೆಂದು ಎತ್ತಿಕೊಂಡರು. ಒಂದು ಕಾರಲ್ಲಿ ಸ್ತ್ರೀಯರನ್ನೂ ಇನ್ನೊಂದರಲ್ಲಿ ಪುರುಷರನ್ನೂ, ಜಡಿದಂತೆ, ನುಗ್ಗುನುರಿಯಾಗುವಂತೆ ತುಂಬಿಕೊಂಡರು-''ಸಾಮಾಜಿಕ ಭ್ರಷ್ಟಾಚಾರ ತೊಲಗಿಸುವ ಹೋರಾಟ ಕೇಂದ್ರಕ್ಕೆ ಕರೆಯೊಯ್ದರು. ಶಾಹ್ನಾಜ್ ಮತ್ತು ಉಳಿದ ಇಪ್ಪತ್ತು ಮಹಿಳೆಯರನ್ನು ಎರಡುಮೀಟರ್ ಉದ್ದಗಲಕ್ಕಿಂತಲೂ ಕಡಿಮೆ ವಿಸ್ತೀರ್ಣದ ಕೊಳಕು ತುಂಬಿ ನಾರುತ್ತಿದ್ದ ಬಂದೀಖಾನೆಗೆ ತಳ್ಳಿಬೀಗ ಜಡಿದರು.

ಶಾಹ್ನಾಜ್ ಅತಿಯಾಗಿ ಭಯಗ್ರಸ್ತಳಾಗಿದ್ದಳು. ಮದ್ಯಪಾನಕ್ಕೆ ನೀಡುವ ಶಿಕ್ಷೆ ಕ್ರೂರವಾಗಿ ಥಳಿಸುವುದೆಂದು ಅವಳು ಕೇಳಿದ್ದಳು. ಇದೇ ರೀತಿಯ ಒಂದು ಪಾನಕೂಟದಲ್ಲಿ ಭಾಗಿಗಳಾಗಿದ್ದ ಮಹಿಳೆಯರನ್ನು ಸೆರೆ ಹಿಡಿದು ಪುರುಷ ಡಾಕ್ಟರ್‌ಗಳಿಂದ ಅವಮಾನಕರ ದೇಹ ಪರೀಕ್ಷೆ ನಡೆಸಿದ್ದರೆಂದೂ ಅವಳಿಗೆ ತಿಳಿದಿತ್ತು. ಇಂಥ ಹೇಯ ಕಾರ್ಯಗಳಿಗೆ ಶಾಹ್ನಾಜ್'ಳನ್ನು ಗುರಿಮಾಡದೆ ಇದ್ದುದೊಂದು ಅವಳ ಅದೃಷ್ಟವೆನ್ನಬೇಕು. ಆದರೆ ಹತ್ತು ದಿನಗಳ ಮೇಲೆ ಜಗನ್ಯ ಗಡ್ಡ ಸೊತ್ತ ಮೂಲಭೂತವಾದಿ ಒಡ್ಡನೊಬ್ಬ ಆಕೆಗೆ ಅನೈತಿಕ ಚಾರಿತ್ರ್ಯದ ಆಪಾದನೆ ಹೊರಿಸಿ ದೊಡ್ಡ ಮೊತ್ತದ ದಂಡವನ್ನು ವಿಧಿಸಿದನಲ್ಲದೆ ''ಮುಂದೆಂದೂ ಸಂತೋಷಕೂಟದಲ್ಲಿ ಭಾಗಿಯಾಗುವುದಿಲ್ಲ''ವೆಂಬ ಹೇಳಿಕೆ ಬರೆಯಿಸಿ ಜಾಮೀನು ಮುಚ್ಚಳಿಕೆ ಬರೆದು ಕೊಡಲು ಆಜ್ಞಾಪಿಸಿದನು. ಶಹ್ನಾಜ್ ಅಪಮಾನದಿಂದ ಕ್ರುದ್ಧಳಾಗಿದ್ದರೂ, ಆ ಪತ್ರಕ್ಕೆ ಋಜು ಮಾಡಿದ್ದಳು.

'' ಈ ಜನರ ತೀರ್ಪಿಗೆ ವಿರೋಧ ತೋರ್ಪಡಿಸುವುದು ಅಸಾಧ್ಯ ಸಂಗತಿ, ಅಥವಾ ಮೇಲ್ಮನವಿ ಮಾಡೋಣವೆಂದರೆ ಅದು ಇಲ್ಲವೇ ಇಲ್ಲ. ಅವರ ಈ ತೆರದ ಕಾರ್ಯಗಳನ್ನು ನಿಲ್ಲಿಸಲು ನಮಗೆ ಶಕ್ತಿಯೂ ಇಲ್ಲ. ನಾವೆಲ್ಲ ಅಸಹಾಯರಾಗಿ ನೋಡುತ್ತಾ ಇರಬೇಕು, ಅನುಭವಿಸಲೂ ಬೇಕು.

ಕೆಲವು ಪಾಶ್ಚಾತ್ಯ ನಿರೀಕ್ಷಕರು ಈ ರೀತಿ ಅಭಿಪ್ರಾಯ ಪಡುತ್ತಾರೆ- ಇಂಥ ಪರಿಸ್ಥಿತಿಯಲ್ಲಿ ಸ್ವಲ್ಪವಾದರೂ ಬದಲಾವಣೆ ಆಗಬೇಕಿದ್ದಲ್ಲಿ, ಇರುವ ಏಕೈಕ ಆಶಾಕಿರಣವೆಂದರೆ ೫೭ ವರ್ಷದ 'ಹಾಷೆಮಿ ರಫ್ಸಂಜಾನಿ'ಯವರು. ಇವರು ಕ್ರಾಂತಿಕಾರಿಗಳನ್ನು ಬಹಿರಂಗ ಸಭೆಗಳಲ್ಲಿ ಖಂಡಿಸಿದರು; ಹೊಸ ಸುಧಾರಣೆಗಳನ್ನು ಜನತೆಯ ಮುಂದಿಟ್ಟರು. ಇದರ ಪರಿಣಾಮವಾಗಿ ೧೯೯೨ರ ಚುನಾವಣೆಯಲ್ಲಿ ಗೆದ್ದು ಪಾರ್ಲಿಮೆಂಟಿಗೆ ಆಯ್ಕೆಯಾದರು. ಇವರ ಜನಪ್ರಿಯತೆಗೆ ಇದೇ ಸಾಕ್ಷಿ. ಇವರು ವಸ್ತುಸ್ಥಿತಿಯ ಅರಿವುಳ್ಳ ವ್ಯವಹಾರ ನಿಪುಣರು, ಪಾಶ್ಚಾತ್ಯರೊಡನೆ ಉತ್ತಮ ಸೌಹಾರ್ದಯುತ ಸಂಬಂಧವಿರಿಸಿಕೊಳ್ಳಬೇಕೆನ್ನುವವರು. ಇತ್ತೀಚೆಗೆ ಲೆಬನಾನಿನಲ್ಲಿ ಒತ್ತೆಯಾಳುಗಳಾಗಿ ಸಂಕಷ್ಟಕ್ಕೀಡಾಗಿದ್ದ ಅಮೇರಿಕ ಮತ್ತು ಜರ್ಮನ್ ನಾಗರಿಕರನ್ನು ಬಿಡುಗಡೆಗೊಳಿಸುವುದರಲ್ಲಿ ಮಹತ್ವದ ಪಾತ್ರವಹಿಸಿದ್ದವರು. ಅವರ ಮಾತೆಲ್ಲ ಬಂಡವಾಳ ಶಾಹಿಯ ಬೆಳವಣಿಗೆ ಮತ್ತು ಅಂತಾರಾಷ್ಟ್ರೀಯ ಉತ್ತರದಾಯಿತ್ವಗಳ ಬಗೆಗೆಯೇ. ಸಾರ್ವಜನಿಕ ಸಮಾರಂಭವೊಂದರ ಉದ್ಘಾಟನಾ ಭಾಷಣ ಮಾಡುತ್ತ ಘಂಟಾಘೋಷವಾಗಿ ಸಾರಿಯೇ ಬಿಟ್ಟರು- ''ಘೋಷಣೆಗಳಿಂದ ಅಣೆಕಟ್ಟುಗಳನ್ನು ನಿರ್ಮಿಸಲು ಸಾಧ್ಯವಿಲ್ಲ!''

ಹೀಗೆ, ರಫ್ಸಂಜಾನಿಯವರ ನೇತೃತ್ವದಲ್ಲಿ

ದೇಶೀಯರು ವಿದೇಶೀಯರ ಜತೆ ಕೈಜೋಡಿಸಿ ಕೈಗಾರಿಕೋದ್ಯಮ, ವ್ಯಾಪಾರ ವ್ಯವಹಾರಗಳನ್ನು ನಡೆಸುವುದರ ಮೇಲೆ ಹೇರಲಾಗಿದ್ದ ನಿಷೇಧಾಜ್ಞೆಯನ್ನು ರದ್ದುಗೊಳಿಸಲು ಸಾಧ್ಯವಾಯಿತು. ಸರ್ಕಾರಿ ಸ್ವಾಮ್ಯದ ನೂರು ಕೈಗಾರಿಕಾ ಘಟಕಗಳನ್ನು ಸ್ವಾಯತ್ತ ಉದ್ದಿಮೆಗಳಾಗಿ ಪರಿವರ್ತಿಸಿದ್ದಲ್ಲದೆ, ಮಿಕ್ಕ ನಾನ್ನೂರಕ್ಕೂ ಹೆಚ್ಚು ಉದ್ಯಮ ಸ್ಥಾವರಗಳನ್ನು ಮುಂದಿನ ಕೆಲವೇ ವರ್ಷಗಳಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ವರ್ಗಾಯಿಸುವ ನಿರ್ಣಯ ಕೈಗೊಳ್ಳುವಂತಾಯಿತು.

ರಫ್ಸಂಜಾನಿಯವರು ನಿಶ್ಚೇಷ್ಟಿತವಾಗಿದ್ದ ಇರಾನಿನ ಅರ್ಥ ವ್ಯವಸ್ಥೆಗೆ ಚಾಲನೆ ಕೊಟ್ಟು ಅದಕ್ಕೆ ಜೀವ ತುಂಬಿ ಉಸಿರಾಡುವಂತೆ ಮಾಡಿದ್ದರಲ್ಲಿ ಅತಿ ಪ್ರಮುಖವಾದ್ದೆಂದರೆ, 'ಟೆಹರಾನ್ ಶೇರು ಬಂಡವಾಳ ವ್ಯಾಪಾರ ವಿನಿಮಯ ಕೇಂದ್ರ'ವು ಪುನರುತ್ಸಾಹದಿಂದ ಕಾರ್ಯನಿರತವಾದುದು. ೧೯೯೧ ಮಾರ್ಚ್ ತಿಂಗಳಿಂದ ಪ್ರಾರಂಭಗೊಂಡು ಸೆಪ್ಟೆಂಬರ್ ತಿಂಗಳೊಳಗೆ ಇರಾನಿಕರೆನ್ಸಿ-೧೫೦ ಬಿಲಿಯ 'ರಿಯಲ್'ಗಳ ಬೆಲೆಯ ಶೇರುಗಳ ಮಾರಾಟ ನಡೆಯಿತು (ಎಂದರೆ ಎರಡು ಬಿಲಿಯ ಡಾಲರು ಬೆಲೆಯ ಶೇರುಗಳು ಕಛೇರಿ ವಲಯದಲ್ಲಿ ವಿಕ್ರಯಗೊಂಡದ್ದಲ್ಲದೆ ನೂರು ಮಿಲಿಯ ಡಾಲರ್ ಬೆಲೆಯ ಶೇರುಗಳು ಕಾಳಸಂತೆಯಲ್ಲಿ ಮಾರಾಟವಾಗಿ ಹೋದುವು.) ಈ ಮೊತ್ತವು ಹಿಂದಿನ ವರ್ಷ ಇಷ್ಟೇ ಕಾಲಾವಧಿಯಲ್ಲಿ ಮಾರಾಟವಾದ ಶೇರು ಬಂಡವಾಳದ ಎರಡು ಪಟ್ಟು ಹೆಚ್ಚಿದಂತಾಯಿತು ಮತ್ತು ೧೯೮೫ರ ಕ್ರಯ ವಿಕ್ರಯವನ್ನು ಗಮನಿಸಿದರೆ ಇದು ೧೫ ಪಟ್ಟು ಹೆಚ್ಚಾಗಿರುವುದೆಂದು ಸ್ಪಷ್ಟವಾಗುತ್ತದೆ. ವ್ಯಾಪಾರ ವೇದಿಕೆಯ ಇಂಥ ಬೆಳವಣಿಗೆಯನ್ನು ಪ್ರತ್ಯಕ್ಷ ಕಂಡ ಮೇಲೆ ಅತ್ಯಂತ 'ಕಟ್ಟರವಾದಿ' ಮುಲ್ಲಾಗಳು ಕೂಡ ಸ್ವತಂತ್ರಗೊಂಡ ಬಂಡವಾಳಶಾಹಿ ಭೂತವನ್ನು ಮತ್ತೊಮ್ಮೆ ಗಾಜಿನ ಭರಣಿಯೊಳಗೆ ತುಂಬಿ ಮುಚ್ಚಿಡುವ ಪ್ರಯತ್ನ ನಡೆಸುವ ಸಂಭವವುಂಟೇ? ಒಮ್ಮೆ ಅದರ ಸಾಮರ್ಥ್ಯವನ್ನರಿತ ಮೇಲೆ, ಯಾರೂ ಅಂಥ ಮೂರ್ಖತೆಯನ್ನು ಮಾಡಲಾರರು. ಇದು ಖಂಡಿತ.

ಇಷ್ಟೆಲ್ಲ ಸಕಾರಾತ್ಮಕ ಬೆಳವಣಿಗೆಗಳಿದ್ದಾಗ್ಗೆಯೂ, ಇರಾನಿನ ನಾಯಕತ್ವದ ಬಗ್ಗೆ, ಧೋರಣೆಗಳ ಬಗ್ಗೆ ಸಾವಧಾನರಾಗಿರಬೇಕಾದ ಅಗತ್ಯವಿದೆ. ಮತ್ತದಕ್ಕೆ ವಿಪುಲ ಕಾರಣಗಳೂ ಇವೆ. ಅವೆಂದರೆ ದೇಶವು ಇಂದಿಗೂ ಮತೀಯ ಸರ್ವಾಧಿಕಾರದ ಬಿಗಿ ಮುಷ್ಟಿಯೊಳಗೇ ಇದೆ, ಮತ್ತು ಮತೀಯ ಮೂಲಭೂತ ವಿತಂಡವಾದವನ್ನು ವಿದೇಶಗಳಿಗೆ, ಅಕ್ಕಪಕ್ಕದ ರಾಷ್ಟ್ರಗಳಿಗೆ ರಫ್ತುಮಾಡುತ್ತಲೇ ಇದೆ. ಮುಸ್ಲಿಮ್ ಪರಿವರ್ತನವಾದಿ ಇರಾನಿ ರಕ್ಷಕ ಪಡೆಗಳು ಭಯೋತ್ಪಾದಕರನ್ನು ಸೃಷ್ಟಿಸುವ ತಮ್ಮ ಕಾರ್ಯವನ್ನು ವಿಸ್ತರಿಸುತ್ತಲೇ ಇದ್ದಾರೆ. ಲೆಬನಾನಿನಲ್ಲಿದ್ದ ತಮ್ಮ ಕಾರ್ಯಕ್ಷೇತ್ರವನ್ನು ಸುಡಾನಿಗೆ ಸ್ಥಳಾಂತರಿಸಿ ಅಲ್ಲಿ ಉತ್ತರ ಆಫ್ರಿಕಾ, ಈಜಿಪ್ಟ್ ಮುಂತಾದ ಕಡೆಗಳಲ್ಲಿ ಮತ್ತಿನ್ನೆಲ್ಲೆಲ್ಲಿಯೋ ಉಗ್ರಗಾಮಿಗಳನ್ನು ತರಬೇತಿಗೊಳಿಸುವ ಕಸುಬನ್ನು ಮುಂದುವರಿಸಿದ್ದಾರೆ. ಇವರ ಕೈವಾಡದಿಂದ ಹಲವಾರು ಹತ್ಯಾಕಾಂಡಗಳು ನಡೆದಿವೆ. ಕಳೆದ ವರ್ಷವಷ್ಟೆ, ಎಂದರೆ ೧೯೯೧ರಲ್ಲಿ ಪ್ಯಾರಿಸ್ಸಿನಲ್ಲಿರುವ ಇರಾನ್ ರಾಯಭಾರ ಕಛೇರಿಗೆ ಸಂಬಂಧಿಸಿದ ವಿರೋಧಪಕ್ಷದ ಪದಚ್ಯುತ ನಾಯಕ ಶಹಾಪುರ್ ಬಖ್ತಿಯಾರ್ ಎಂಬಾತನ ಕೊಲೆ ಹಾಗೂ ಇದರಂತೆ ಹಲವಾರು ವಿಧ್ವಂಸಕ ಕೃತ್ಯಗಳನ್ನು ಮಾಡಿಸುವುದರಲ್ಲಿ ನಿರತರಾಗಿದ್ದಾರೆ. ಅವರ ದುಷ್ಕೃತ್ಯಗಳ ದೊಡ್ಡ ಪಟ್ಟಿಯೇ ಇದೆ.

ಇವೆಲ್ಲದಕ್ಕೂ ಹೆಚ್ಚು ಆತಂಕಕಾರಿಯಾ

ದ್ದೆಂದರೆ, ಇರಾನಿನ ಶಸ್ತ್ರಾಸ್ತ್ರ ಯೋಜನೆ ಮತ್ತು ಸಂಗ್ರಹಣೆ. ಮಿಲಿಟರಿ ಟ್ಯಾಂಕ್‌ಗಳು, ಜಲಾಂತರ್ಗಾಮಿಗಳು ಮತ್ತು ಮಿಸಾಯಿಲ್‌ಗಳೂ ಸೇರಿದಂತೆ ಪ್ರತಿವರ್ಷ ಇರಾನ್ ಸರಕಾರ ಖರೀದಿಸುವ ಯುದ್ಧ ಸಾಮಗ್ರಿಗಳ ಬೆಲೆ ಎರಡು ಬಿಲಿಯ ಡಾಲರಿಗೂ ಏರಿದೆ. ಇವಲ್ಲದೆ ಇಸ್ಲಾಮ್ ಗಣತಂತ್ರವು ಪರಮಾಣು ಅಸ್ತ್ರಗಳನ್ನು ಸ್ವಂತವಾಗಿ ತಯಾರಿಸುವ ಪ್ರಯತ್ನ ಮುಂದುವರಿಸುತ್ತಾ ಇದೆ. ಇರಾಸಿನ 'ರಿಯಾಕ್ಟರ್ ಪ್ರಯೋಗಶಾಲೆ'ಯ ನಿರ್ಮಾಣಕ್ಕೆ ಚೀನ ಸಹಾಯ ಒದಗಿಸಿದೆ ಯಷ್ಟೇ ಅಲ್ಲ, ಇರಾನೀ ಪರಮಾಣು ತಂತ್ರಜ್ಞರಿಗೆ ಅಗತ್ಯವಿರುವ ತರಬೇತಿಯನ್ನು ನೀಡುತ್ತಿದೆ. ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಉಪಯೋಗವಾಗುವ ಸುಮಾರು ೬೦ ಮಿಲಿಯ ಡಾಲರ್ ಬೆಲೆ ಬಾಳುವ ಕಂಪ್ಯೂಟರ್ ಮತ್ತು ಆಧುನಿಕ ಉನ್ನತ ತಂತ್ರದಿಂದ ತಯಾರಾದ ವೈಜ್ಞಾನಿಕ ಸಲಕರಣೆಗಳಿಗೆ ಪರವಾನಗಿ ನೀಡುವುದರ ಮೂಲಕ ಅಮೇರಿಕವೇ ಇರಾನಿನ ದುರ್ವ್ಯವಹಾರಗಳಿಗೆ ಪ್ರೋತ್ಸಾಹ ನೀಡುತ್ತಲೂ ಇರಬಹುದು!

ಟೆಹರಾನಿನಲ್ಲಿರುವ ರಾಜನೀತಿ ಕುಶಲ ಹೇಳಿದ್ದು ಹೀಗೆ-''ಇರಾನಿನಲ್ಲಿ ಒಂದು ಪರಮಾಣು ಯೋಜನೆ ಇದೆ'' ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇರಾಕಿಗಳಂತೆ ಇರಾನಿಗಳೂ ಕೂಡ ಚೂರುಪಾರು ಸಾಮಗ್ರಿ ಸೇರಿಸಿ ಒಂದು ಬಾಂಬು ತಯಾರಿಸಬಲ್ಲರೆಂಬುದೇ ಈಗ ತಲೆ ಎತ್ತಿರುವ ಗಂಭೀರವಾದ ಮತ್ತು ಕಳವಳಕಾರಿ ಸಂಗತಿ. ಶಸ್ತ್ರಾಸ್ತ್ರಗಳ ಮುನ್ನಡೆಯಲ್ಲಿ ಇರಾನಿನ ಅತ್ಯಾಸಕ್ತಿಯ ಹಿಂದಿರುವ ಒಳಗುಟ್ಟೇನೆಂದರೆ-ಬಹಳ ಹಿಂದಿನಿಂದಲೂ ಬಂದ ಅಧಿಕಾರ ದಾಹ, ಸುತ್ತುಮುತ್ತಲ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಾಮ್ರಾಜ್ಯ ದಾಹ. ಈ ಸತ್ಯವೀಗ ಸ್ಪಷ್ಟವಾಗಿ ರೂಪುತಳೆಯ ತೊಡಗಿದೆ. ''ಉಗ್ರವಾದಿಗಳಲ್ಲದ, ಮಧ್ಯಮಾರ್ಗಿ ಜನಸಾಮಾನ್ಯರು ಕೂಡ ಇರಾನು ಆದಿಕಾಲದಿಂದಲೂ ಸ್ವಾಭಾವಿಕವಾಗಿಯೇ ಈ ಭೂಭಾಗಕ್ಕೆಲ್ಲ ಅಧಿಪತಿಯಾಗುವ ಹಕ್ಕುಳ್ಳ ಬೃಹತ್ ಶಕ್ತಿ ಎಂದು ನಂಬುತ್ತಾರೆ. ಇರಾನಿನ ಪ್ರತಿಯೊಬ್ಬನೂ 'ಪರ್ಶಿಯನ್ ಗಲ್ಫ್' ತಮ್ಮ ಆಧಿಪತ್ಯದೊಳಕ್ಕೆ ಸೇರುವ ದಿನಕ್ಕಾಗಿ ಕಾತರದಿಂದ ಕಾಯುತ್ತಿದ್ದಾನೆ''-ಇದು ಮಧ್ಯಪೂರ್ವ ದೇಶಗಳ ರಾಜತಾಂತ್ರಿಕ ವಿಮರ್ಶಕ ಪ್ಯಾಟ್ರಿಕ್ ಕ್ಲಾಸಮ್‌ರವರ ಅಭಿಪ್ರಾಯ.

ಸದ್ಯೋಭವಿಷ್ಯದಲ್ಲಿ ''ಇರಾನಿನ ತೀರ ಸಾಮಾನ್ಯ ಸೌಮ್ಯವಾದಿಗಳನ್ನು ಕೂಡ ಪಾಶ್ಚಾತ್ಯರ ಸ್ನೇಹಿತರೆಂದು ತಿಳಿಯುವ ಆವಶ್ಯಕತೆ ಇಲ್ಲ'' ಎಂಬ ತಥ್ಯದೊಂದಿಗೆಯೇ ನಾವೆಲ್ಲ ಬದುಕುತ್ತಿರಬೇಕೆಂಬುದು ಯಥಾರ್ಥ ಸಂಗತಿ. ಮೂಲ ಇಸ್ಲಾಮ್ ತತ್ವಗಳನ್ನೇ ಅನುಸರಿಸುತ್ತಿರಬೇಕೆನ್ನುವ ವಿಪ್ಲವಕಾರಿಗಳು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ಇಸ್ಲಾಮನ್ನು ನಾಶಗೊಳಿಸುವ ಕುತಂತ್ರವಾಗಿದೆಯೆಂದು ರಫ್ಸಂಜಾನಿಯವರ ರಾಜತಾಂತ್ರಿಕ ಸಂಬಂಧಗಳನ್ನು ಸುಧಾರಿಸುವ ಪ್ರಯತ್ನಕ್ಕೆ ತಡೆಯೊಡ್ಡುತ್ತಾ ಅವರ ಮೇಲೆ ಒತ್ತಡ ತರುತ್ತಾ ಇದ್ದಾರೆ. ಆದರೆ ಟೆಹರಾನಿನ ಪ್ರಭುತ್ವವು ತೀವ್ರಗಾಮಿಗಳ ಕೈಯಲ್ಲಿರಲಿ ಅಥವಾ ಮಧ್ಯಮಪರರ ಕೈಯಲ್ಲೇ ಇರಲಿ ಪಾಶ್ಚಾತ್ಯರು ಜಾಗರೂಕರಾಗಿ ಇರಲೇಬೇಕು.

ಹಾಗಿದ್ದರೂ ಕೂಡ, ಎಷ್ಟುಕಾಲ ಮುಲ್ಲಾಗಳು ದೇಶದ ಚುಕ್ಕಾಣಿ ಹಿಡಿದಿರುವರೆಂಬುದು ಪಾಶ್ಚಾತ್ಯರ ಹಾಗೂ ಪೌರಸ್ತ್ಯರೆಲ್ಲರ ಮುಂದೆ ತೆರದಿಟ್ಟ ಪ್ರಶ್ನೆ. ಆದರೆ ಈ ದೇಶದ ಭವಿಷ್ಯದ ಸ್ಥಿತಿಗತಿಗಳನ್ನು ಒಂದು ಶುಕ್ರವಾರ ನಾನು ಪ್ರತ್ಯಕ್ಷ ಕಂಡೆ. ಆ ದಿನ ಮುಸ್ಲಿಮ್ ಸಬ್ಬತ್ ಆಯತುಲ್ಲಾ ಖೊಮೇನಿಯ ಪಾರ್ಥಿವ

ಪರೀಪಸ್ಥಿರಿಸಲಾಗಿದ್ದ ಹೊಸಗೋರಿಯ ಬಳಿಗೆ ಹೊರಟೆ.

ಕಾರನ್ನು ಬಾಡಿಗೆಗೆ ಹಿಡಿದು ಅಸ್ತವ್ಯಸ್ತವಾಗಿ ಮಲಗಿದ್ದಂತೆ ಕಾಣುವ ಹಳದಿ ಇಟ್ಟಿಗೆಗಳ ಕಚ್ಚಾಗೋಡೆಯ ಗುಡಿಸಲುಗಳಿರುವ ಕೊಳೆಗೇರಿಯನ್ನು ಹಾದು ನನ್ನ ಕಾರು ಸಾಗಬೇಕಾಗಿತ್ತು. ಅಲ್ಲಿಯ ಬಡಸ್ತ್ರೀಯರು ವಾಹನಗಳಲ್ಲಿ ಕ್ರಮಿಸುತ್ತಿದ್ದವರ ಮುಂದೆ ತಮ್ಮ ಹರಿದ ಬುರಖಾದೊಳಗಿಂದ ಕಾಸಿಗಾಗಿ ಕೈ ಚಾಚುತ್ತಿರುವುದನ್ನು ಕಂಡೆ. ವಾಹನದಲ್ಲಿ ಮುಂದುವರಿಯುತ್ತಾ ಶ್ಮಶಾನದ ಬಳಿಗೆ ಬಂದೆ. ಇರಾಕಿಗಳೊಡನೆ ಯುದ್ಧಮಾಡುತ್ತಾ ಮಡಿದ ಸೈನಿಕರ ಸ್ಮರಣಾರ್ಥ ಕಟ್ಟಲಾದ ರಾಶಿ ರಾಶಿ ಗೋರಿಗಳ ಬಹುದೊಡ್ಡ ಸ್ಮಶಾನ -ಬೆಹೆಶ್ತ್-ಎ-ಜಾಹ್ರಾ ಉದ್ದಕ್ಕೂ ಅಗಲಕ್ಕೂ ಅತಿವಿಸ್ತಾರವಾಗಿತ್ತು. ಅದರೊಳಗೆ ನಡೆದು ಹೋದಾಗ ಬಹುದೊಡ್ಡ 'ರೋಜಾ' ಕಂದು ಬಣ್ಣದ ವಿಶಾಲ ಸಮತಲ ಮರುಸ್ಥಳದ ನಡುವೆ ರಝಗರಝಗಿಸುವ ಎತ್ತರವಾದ ಬೃಹದಾಕಾರದ ಚಿನ್ನದ ಮಿನಾರತ್. ಕಟ್ಟಡದ ಗಾತ್ರವನ್ನು ಗಮನಿಸಿದರೆ ಅದನ್ನೊಂದು ಗೋರಿ ಎನ್ನುವುದಕ್ಕೆ ಬದಲಾಗಿ ಅಟೋಟ ಸ್ಪರ್ಧೆಗೆ ರಚಿಸಿದ ರಂಗಮಂದಿರವೆನ್ನುವುದು ಸಮಂಜಸವಾದೀತು. ಉಗ್ರ ಸಂಯಮವನ್ನು ಬೋಧಿಸಿದ ನಿಷ್ಠುರ ವ್ಯಕ್ತಿಯ ಸ್ಮಾರಕವು ಹೀಗಿರುವುದು ಎಷ್ಟು ಯುಕ್ತ?

ಕಟ್ಟಡದ ದ್ವಾರದ ಬಳಿ ನನ್ನ ಪಾದರಕ್ಷೆಗಳನ್ನು ಕಳಚಿಟ್ಟು ಒಳಗಿನ ವಿಶಾಲ ಪ್ರಾಂಗಣಕ್ಕೆ ಕಾಲಿಟ್ಟೆ. ನೀಲಿ, ಕೆನ್ನೇರಳೆ, ಕೆಂಗುಲಾಬಿ ಬಣ್ಣಗಳ ಪುಷ್ಪ ಚಿತ್ರಿತ ರತ್ನಗಂಬಳಿಗಳನ್ನು ಸಂಪೂರ್ಣ ಪ್ರಾಂಗಣವನ್ನು ಮುಚ್ಚುವಂತೆ ಹಾಸಲಾಗಿತ್ತು. ಎಲ್ಲೋ ದೂರದಿಂದ ಸಾರ್ವಜನಿಕ ವೇದಿಕೆಯಲ್ಲಿ ಕುರಾನಿನ ವಾಕ್ಯಗಳು ರಾಗವಾಗಿ ಹರಿದು ಬರುತ್ತಾ ಇದ್ದವು. ಉತ್ತರದ ಈ ಕಟ್ಟಡದ ಮಧ್ಯಭಾಗದಲ್ಲಿ ಅಲ್ಯುಮಿನಿಯಂ ಲೋಹದ ಪಂಜರದೊಳಗೆ ಆಯತುಲ್ಲಾ ಖೊಮೇನಿಯ ಸಮಾಧಿ ಇದೆ. ಅದರ ಪವಿತ್ರತೆ ಮತ್ತು ಪ್ರತಿಷ್ಠೆಗಳನ್ನು ಕಾಪಾಡಲು ಸಮಾಧಿಗೂ ಆರಾಧಕರಿಗೂ ನಡುವೆ ಸಾಕಷ್ಟು ಅಂತರ ವಿರಿಸಲು ಈ ತೆರನಾದ ವ್ಯವಸ್ಥೆ ಮಾಡಿದ್ದಾಗಿದೆ.

ಅಲ್ಲಿ ,ಬಾವುಕ ,ಬಕ್ತರ ದೊಡ್ಡ ಜಂಗುಳಿಯೇ ನೆರೆದಿರುತ್ತದೆಂದು ಭಾವಿಸಿದ್ದೆ. ಆದರೆ ಅಲ್ಲಿದ್ದುದು ಖಾಲಿ ಹಜಾರ. ಬೆರಳೆಣಿಕೆಯಷ್ಟು ಜನ ಪ್ರಾರ್ಥನೆಯಲ್ಲಿ ತೊಡಗಿದ್ದರು. ಮತ್ತೆ ಒಂದೆರಡು ಡಜನ್ ಮಂದಿ ಸಂತೆ ಮಾರು ಕಟ್ಟೆಯ ದೃಶ್ಯಾವಳಿಯನ್ನು ಸೃಷ್ಟಿಸಿದ್ದರು. ಮಕ್ಕಳು ಕುಸ್ತಿ ಪಂದ್ಯಕ್ಕಿಳಿದವರಂತೆ ರತ್ನಕಂಬಳಿಯ ಮೇಲೆ ಓಡುತ್ತಾ ಪರಸ್ಪರ ಗುದ್ದಾಡುತ್ತಾ ಹೊರಳಾಡುತ್ತಾ ಬೊಬ್ಬಿಡುತ್ತಿದ್ದರು. ಅವುಗಳ ತಾಯಿತಂದೆಯರು ತಮ್ಮೊಡನಿದ್ದ ಪ್ಲಾಸ್ಟಿಕ್ ಚೀಲದೊಳಗಿಂದ ಬಿಸ್ಕಟ್ ತೆಗೆದು ಗುಳುಂಕರಿಸುತ್ತಲೋ ಫ್ಲಾಸ್ಕಿನಿಂದ ಬಿಸಿ ಬಿಸಿ ಚಹಾ ಕುಡಿಯುತ್ತಲೋ, ಸ್ನೇಹಿತರೊಡನೆ ಹರಟೆ ಹೊಡೆಯುತ್ತಲೇಇದ್ದರು. 'ಮಹಾಸ್ಮಾರಕ'ವೆಂದು ಕಟ್ಟಸಲಾದ ಕಟ್ಟಡ ಪ್ರವಾಸಿಗರ ಆಕರ್ಷಣ ಕೇಂದ್ರ ಮಾತ್ರವಾಗಿ ಪರಿಣಮಿಸಿದಂತೆ ಕಂಡಿತು. ಅಷ್ಟೇಅಲ್ಲ, ಅದು ಜನಪ್ರಿಯ ತಾಣವಾಗಿಲ್ಲವೆಂದೂ ಅರ್ಥವಾಯಿತು.

ಈ ಸ್ಥಾನವು ಮುಸ್ಲಿಮ್ ಕ್ರಾಂತಿಯ ಹೃದಯಭಾಗವೆಂದು ಭಾವಿಸಿಕೊಂಡಿದ್ದೆ. ಆದರೀಗ ಆ ಹೃದಯ ಪೂರ್ತಿ ಟೊಳ್ಳಾಗಿ ಹೋಗಿರುವುದು ಸ್ಪಷ್ಟವಾಯಿತು. ಫಾತಿಮಾಳ ಜತೆ ನಡೆಸಿದ್ದ ಸಂಭಾಷಣೆಯಲ್ಲಿ ಅವಳು ಹೇಳಿದ ಮಾತುಗಳು ನೆನಪಾದುವು. ಹತ್ತು ವರ್ಷಗಳ ದೀರ್ಘಕಾಲದ ಬಳಿಕ ಕ್ರಾಂತಿ ಉಳಿದಿಲ್ಲ. ಅದು ಸತ್ತಿದೆ. ಕ್ರಾಂತಿಯ ಸಮರ್ಥಕರಾಗಿದ್ದವರು, ಯಾವಕ್ರಮದಲ್ಲಿ ಅದನ್ನು ಹೂಳುವುದೆಂದು ಯೋಚಿಸುತ್ತಿದ್ದಾರೆ ಅಷ್ಟೆ!

ಮನೆಗೆಲಸದವಳ ಬಗ್ಗೆ ಎಚ್ಚರವಿರಲಿ

ಡಾ|| ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ. ಸಂಘ
ಬಾಗಲಕೋಟೆ-೫೮೭೧೦೧

ಇತ್ತೀಚಿಗೆ ಜರುಗಿ ಹೋದ ಎರಡು ಘಟನೆಗಳು ನನ್ನ ಮನಸ್ಸನ್ನು ಬಹುವಾಗಿ ಕಲಕಿವೆ. ಅವುಗಳ ನೆನಪಾದರೆ ದೇಹದ ಶಕ್ತಿ ಇಂಗಿ ಹೋಗುತ್ತದೆ. ಘಟನೆಗಳ ನೈಜ ಚಿತ್ರಣ ಇಲ್ಲಿದೆ.

೧. ಕೂಸಿನಿಂದ ಕಾಸು ಸಂಪಾದನೆ

ದೆಹಲಿಯಲ್ಲಿ ನನಗೆ ಓರ್ವ ವೈದ್ಯ ಸ್ನೇಹಿತರು ಇರುವರು. ಅವರ ಹೆಸರು ಡೋಗ್ರಾ. ಅವರು ಮಕ್ಕಳ ತಜ್ಞರು. ಇವರ ಹೆಂಡತಿ ಶ್ರೀಮತಿ ಕುಂಕುಂ. ಇವಳೂ ಮಕ್ಕಳ ತಜ್ಞೆ. ಕೇವಲ ಒಂದು ವರ್ಷದ ಹಿಂದೆ ಇವರ ಮದುವೆ ಜರುಗಿತ್ತು. ಇಬ್ಬರಿಗೂ ಒಂದೇ ಆಸ್ಪತ್ರೆಯಲ್ಲಿ ನೌಕರಿ. ಹೀಗೆ ಈ ದಂಪತಿಗಳ ಜೀವನ ಸುಂದರವಾಗಿ ನಡೆದಿತ್ತು.

ಕುಂಕುಂ ಬಸಿರಾದಳು. ಒಂದು ಹೆಣ್ಣು ಮಗುವಿಗೆ ಜನ್ಮವಿತ್ತರು. ಮಗುವು ಗುಲಾಬಿ ಹೂವಿನಂತೆ ಇತ್ತು. ಪ್ರಸವಾನಂತರ ಕುಂಕುಂ ಒಂದು ತಿಂಗಳು ರಜೆಯಲ್ಲಿದ್ದರು. ಅನಂತರ ಮತ್ತೆ ತನ್ನ ವೈದ್ಯಕೀಯ ಸೇವೆ ಪ್ರಾರಂಭಿಸಲು ಯೋಚಿಸಿದರು. ಗಂಡನೂ ಒಪ್ಪಿದನು. ಆದರೆ ಮಗುವನ್ನು ನೋಡುವವರಾರು? ಊರಿನಿಂದ ಯಾರನ್ನಾದರೂ ಕರೆಸಿದರೆ ಅವರಿಗೂ ತೊಂದರೆ. ಇವರಿಗೂ ಸ್ವಲ್ಪ ಅನನುಕೂಲ. ಅವರಿವರಿಗೆ ಹೇಳಿದರು. ಒಂದು ಮನೆಯಾಳು ಸಿಕ್ಕರೆ ಒಳ್ಳೆಯದೆನಿಸಿತು. ಅಷ್ಟರಲ್ಲಿ ಓರ್ವ ಸ್ತ್ರೀ ಕೆಲಸ ಹುಡುಕುತ್ತ ಇವರ ಮನೆಗೆ ಬಂದಳು. ದೇವರೇ ಕಳುಹಿಸಿದ ಎಂಬಷ್ಟು ಸಂತೋಷ. ಆ ಸ್ತ್ರೀಯನ್ನು ಮನೆಯಲ್ಲಿಟ್ಟುಕೊಂಡರು. ಈಕೆಗೆ ಕುಂಕುಂ ಮನೆಯ ಕೆಲಸಗಳನ್ನೆಲ್ಲ ಕಲಿಸಿದರು. ಕೂಸಿನ ಆರೈಕೆಯನ್ನು ತೋರಿಸಿ ಮಾಡಿಸಿದರು. ಒಂದು ತಿಂಗಳಾಗುವಷ್ಟರಲ್ಲಿ ಆಳು ಯಮುನಾ ಬಾಯಿ ನುರಿತಳು. ಮನೆಯ ಎಲ್ಲ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡತೊಡಗಿದಳು.

ಈಗ ಕುಂಕುಂ ತನ್ನ ವೈದ್ಯಕೀಯ ಸೇವೆ ಮತ್ತೆ ಪ್ರಾರಂಭಿಸಿದರು. ಗಂಡ ಹೆಂಡತಿ ಮುಂಜಾನೆ ೭.೩೦ಕ್ಕೆ ಹೋಗುತ್ತಿದ್ದರು. ಸಂಜೆ ೭ಗಂಟೆಗೆ ಮರುಳುತ್ತಿದ್ದರು. ಮಧ್ಯಾಹ್ನದ ಊಟ ಅಲ್ಲಿಯೇ ಮಾಡುತ್ತಿದ್ದರು. ಗಳಿಕೆ ಹೆಚ್ಚಿತು. ದುಡಿತವೂ ಹೆಚ್ಚಿತು. ಮನೆಯ ನಿರ್ವಹಣೆಯನ್ನು ಯಮುನಾಬಾಯಿಯೇ ನಿರ್ವಹಿಸಬೇಕಾಯಿತು. ಮಗುವಿನ ಪೋಷಣೆ ಅವಳ ಮೇಲೆ ಬಿತ್ತು. ಕುಂಕುಂ ಹಾಗೂ ಡೋಗ್ರಾ ಅವರು ಮನೆಯನ್ನು ಮರೆತು ದುಡಿಯ ಹತ್ತಿದರು. ಹಲವಾರು ತಿಂಗಳುಗಳು ಕಳೆದವು. ಸಂಸಾರ ಸುಖದಲ್ಲಿ ತೇಲುತ್ತಿತ್ತು.

ಒಂದು ದಿನ ಮಗುವಿಗೆ ನೆಗಡಿಕೆಮ್ಮು ಕಾಣಿಸಿದುವು. ಮಕ್ಕಳ ತಜ್ಞರಿಗೆ ಇದೇನೂ ಹೊಸದಲ್ಲ. ಮದ್ದು ಕೊಟ್ಟರು. ಮಗು ಚೇತರಿಸಿತು. ಡೋಗ್ರಾ ಹಾಗೂ ಕುಂಕುಂ ತಮ್ಮ ದುಡಿಮೆಯಲ್ಲಿ ಮಗ್ನರಾದರು. ಮಗುವಿನ ಕೆಮ್ಮು ಇನ್ನೂ ಕಡಿಮೆ ಆಗಲಿಲ್ಲ. ಡೋಗ್ರಾ

ಅವರಿಗೆ ಅರ್ಜೆಂಟಾಗಿ ಊರಿಗೆ ಹೋಗ ಬೇಕಾಯಿತು. ಎಲ್ಲ ಭಾರವನ್ನು ಕುಂಕುಂಗೆ. ಆಸ್ಪತ್ರೆಯ ಕಾರ್ಯಭಾರ ಹೆಚ್ಚಾಯಿತು. ಮನೆಯ ಕಡೆಗೆ ಲಕ್ಷ್ಯವಹಿಸುವುದು ಸಾಧ್ಯವಾಗ ಲಿಲ್ಲ. ಮಗುವಿನ ಕೆಮ್ಮು ಹೆಚ್ಚಾಯಿತು. ಯಾವ ಮದ್ದೂ ಪರಿಣಾಮ ಬೀರಲಿಲ್ಲ. ಕುಂಕುಂಗೆ ಇದು ಗಾಬರಿ ಹೆಚ್ಚಿತು. ಅಷ್ಟರಲ್ಲಿ ಡೋಗ್ರಾ ಬಂದರು. ಅವರೂ ಗಲಿಬಿಲಿಗೊಂಡರು. ಹೊಸದಾಗಿ ಪೇಟೆಗೆ ಬಂದ ಮದ್ದನ್ನು ಪ್ರಾರಂಭಿಸಿದರು. ಮುಂಜಾನೆ ಎದ್ದಾಗ ಮಗು ಚೇತರಿಸಿಕೊಂಡಿತ್ತು. ಗಂಡಹೆಂಡಂದಿರಿಬ್ಬ ರಿಗೂ ದೊಡ್ಡ ಭಾರ ಇಳಿದಂತಾಯಿತು. ಕುಂಕುಂ ಅಂದು ರಜೆ ಹಾಕಿ ಮನೆಯಲ್ಲಿ ಇರಲು ಯೋಚಿಸಿದರು. ಡೋಗ್ರಾ ಒಪ್ಪಿದರು. ತಾವೊಬ್ಬರೆ ಆಸ್ಪತ್ರೆಗೆ ಓಡಿದರು. ಮಗು ಸುಮ್ಮನೆ ಮಲಗಿತ್ತು. ಒಂದೆರಡು ತಾಸುಗಳಾದ ಮೇಲೆ ಡೋಗ್ರಾ ಅವರ ಫೋನ್ ಬಂದಿತು. ''ಮಗು ಹೇಗಿದೆ?'' ಎಂದರು. ''ಚೆನ್ನಾಗಿ ಮಲಗಿದೆ ''ಎಂದು ಕುಂಕುಂ ಹೇಳಿದರು. ''ಹಾಗಾದರೆ ಬಂದುಬಿಡು'' ಎಂದು ಡೋಗ್ರಾ ಹೇಳಿದರು. ಕುಂಕುಂಗೂ ಅದೇ ಬೇಕಾಗಿತ್ತು. ತತ್‌ಕ್ಷಣ ತಯಾರಾದಳು. ಮನೆಯ ಆಳು ಯಮುನಾಬಾಯಿ ಮದ್ದು ಹಾಕುವುದನ್ನು ತಿಳಿದುಕೊಂಡಳು. ಕುಂಕುಂ ಯಾವ ಯೋಚನೆಯೂ ಇಲ್ಲದೆ ಆಸ್ಪತ್ರೆಗೆ ಹೋದಳು.

ಸಂಜೆ ಮನೆಗೆ ಬರುವುದು ತಡವಾಯಿತು. ಬಂದವರೇ ಮಗುವಿನ ಬಳಿ ಓಡಿದರು. ಕುಂಕುಂ ಮಗು ಮಲಗಿದಂತಿತ್ತು. ಜ್ವರ ವಿಪರೀತ. ಎಬ್ಬಿಸಲು ಪ್ರಯತ್ನಪಟ್ಟಳು. ಏಳಲಿಲ್ಲ. ಗಂಡನನ್ನು ಕೂಗಿದರು. ಅವರೂ ಓಡಿ ಬಂದರು. ಮಗುವನ್ನು ಪರೀಕ್ಷಿಸಿದರು. ''ಅಯ್ಯೋ ಮಗು ಪ್ರಜ್ಞೆ ಕಳೆದು ಕೊಂಡಿದೆ'' ಎಂದರು. ಮತ್ತೆ ಪರೀಕ್ಷಿಸಿದರು. ಇದು ಮಿದುಳು-ಪೊರೆಯುರಿತ ಎಂಬ ಸಂಶಯ ಬಂದಿತು. ಗಂಡಹೆಂಡಂದಿರ ಕೈಕಾಲೇ ಹೋದುವು. ತತ್‌ಕ್ಷಣ ಮಗುವನ್ನು ಹೊತ್ತು ಕೊಂಡು ಆಸ್ಪತ್ರೆಗೆ ಓಡಿದರು. ಎಲ್ಲ ತರದ ಉಪಚಾರ ಮಾಡತೊಡಗಿದರು. ಅವರು ಯೋಚಿಸಿದ್ದು ನಿಜವಾಯಿತು. ರೋಗ ಮಿದುಳು ಹಿಡಿದಿತ್ತು. ಮಿದುಳಿನ ತುಂಬ ಕೀವು ತುಂಬಿತ್ತು. ಹತಾಶರಾದರು. ಕುಂಕುಂ ಅಳ ಹತ್ತಿದರು. ಮುಂದೆ ಅರ್ಧ ತಾಸಿನಲ್ಲಿ ಕೊನೆಯುಸಿರು ಎಳೆಯಿತು. ಇಡೀ ಆಸ್ಪತ್ರೆ ರೋಧಿಸಿತು. ವೈದ್ಯರು ಚಿಕ್ಕ ಮಕ್ಕಳ ತಜ್ಞರು. ಇಬ್ಬರೂ ಬಹಳ ಜಾಣರು. ನೂರಾರು ಮಕ್ಕಳನ್ನು ಬದುಕಿಸಿದ್ದಾರೆ ಎಂಬ ಹೆಸರು ಬೇರೆ. ಆದರೆ ಈಗ ಎಲ್ಲವೂ ಬುಡಮೇಲು. ತಮ್ಮ ಮಗುವನ್ನೇ ತಾವು ಉಳಿಸಲಾಗಲಿಲ್ಲ ಎಂಬ ಮಾತು ಪ್ರಾರಂಭವಾದರು ಮಗುವಿನ ಹೆಣವನ್ನು ಹೊತ್ತು ಮನೆಗೆ ತಲುಪಿದರು. ಅಂತ್ಯ ಕ್ರಿಯೆಯ ವಿಧಿವಿಧಾನ ಮುಗಿದುವು. ಮರಣದ ದಿನಾಚರಣೆ ಇಟ್ಟರು. ಹಲವಾರು ಸ್ನೇಹಿತರು ಬಂದು ಹೋಗಹತ್ತಿದರು. ಡೋಗ್ರಾ ಹಾಗೂ ಕುಂಕುಂ ಕುಸಿದು ಬಿದ್ದಿದ್ದರು. ಬಂದವರೆಲ್ಲ ಸಾಂತ್ವನ ಹೇಳಿ ಹೋಗುತ್ತಿದ್ದರು. ಮಗುವಿನ ಫೋಟೋ ಒಂದು ಟೇಬಲ್ ಮೇಲೆ ಇಟ್ಟು ಮಾಲೆ ಹಾಕಿದ್ದರು. ಎಲ್ಲರೂ ಹೂವು ಏರಿಸಿ ಬಂದು ಕೂಡುತ್ತಿದ್ದರು.

ಅಷ್ಟರಲ್ಲಿ ಡೋಗ್ರಾ ಅವರ ಸ್ನೇಹಿತ ಹಾಗೂ ಮಕ್ಕಳ ತಜ್ಞರಾದ ಡಾ||ಪಾಂಡೆ ಮನೆಗೆ ಬಂದರು. ಅವರನ್ನು ಕಂಡ ತತ್‌ಕ್ಷಣ ಡೋಗ್ರಾ ಮುರಿದು ಬಿದ್ದರು. ಅಳ ಹತ್ತಿದರು. ಸಮಾಧಾನ ಹೇಳಿ ಪಾಂಡೆ ಅವರು ಫೋಟೋವಿನ ಕಡೆಗೆ

ಹೋಗಿ ಹೂವು ಏರಿಸಿದರು. ಅವರಿಗೆ ಅಲ್ಲಿ ಆಶ್ಚರ್ಯ ಕಾದಿತ್ತು. ಫೋಟೋ ನೋಡುತ್ತ ನಿಂತರು. ಅವರ ಮುಖ ಕಪ್ಪಿಟ್ಟಿತು. ಮನದಲ್ಲಿ ಗೊಂದಲವೋ ಗೊಂದಲ. ಈ ಮಗುವನ್ನು ಕೇವಲ ಕೆಲವೇ ದಿನಗಳ ಹಿಂದೆ ನೋಡಿರುವೆನಲ್ಲ ಎನಿಸಿತು. ಆದರೆ ಸರಿಯಾಗಿ ತಿಳಿಯಲೊಲ್ಲದು. ದಂಗು ಬಡಿದಂತಾಗಿ ಡೋಗ್ರಾರ ಮಗ್ಗುಲಿಗೆ ಕುಳಿತರು. ಬಾಯಿ ಒಣಗಿದಂತಾಯಿತು. ಡೋಗ್ರಾ ಅವರಿಗೆ ಗೊತ್ತಾಗಿ ಯಮುನಾಬಾಯಿಯನ್ನು ಕರೆದು ಕುಡಿಯಲು ನೀರನ್ನು ತರಲು ಹೇಳಿದರು. ತತ್‌ಕ್ಷಣ ಯಮುನಾಬಾಯಿ ನೀರನ್ನು ತಂದಳು. ಡಾ॥ ಪಾಂಡೆ ಗ್ಲಾಸನ್ನು ಎತ್ತಿದರು. ಮುಂದೆ ನಿಂತ ಯಮುನಾಬಾಯಿಯನ್ನು ಕಂಡೊಡನೆ ಕೈಯಲ್ಲಿದ್ದ ಗ್ಲಾಸನ್ನು ಚೆಲ್ಲಿ ಬಿಟ್ಟರು. ಗ್ಲಾಸ್ ಒಡೆಯಿತು. ನೀರು ಚೆಲ್ಲಾಪಲ್ಲಿ ಆಯಿತು. ಯಮುನಾಬಾಯಿ ಒಳಗೆ ಹೋಗಿ ಅರಿವೆ ತಂದು ನೀರು ಒರೆಸಹತ್ತಿದಳು. ಪುಡಿಯಾದ ಗಾಜಿನ ಚೂರುಗಳನ್ನು ಆರಿಸ ಹತ್ತಿದಳು. ಡಾ॥ ಪಾಂಡೆ ಶೂನ್ಯದೃಷ್ಟಿಯಿಂದ ಅವಳನ್ನೇ ನೋಡುತ್ತಿದ್ದರು. ಡೋಗ್ರಾ ಹೇಳಿದರು. ''ಮಿತ್ರ ಡಾ॥ಪಾಂಡೆ, ಆಕೆ ನಮ್ಮ ಮನೆಯ ಆಳು, ಅವಳೂ ದುಃಖದ ಮಡುವಿನಲ್ಲಿದ್ದಾಳೆ. ಅವಳಿಗೂ ಮಗುವಿಗೂ ಬಹಳೇ ಆತ್ಮೀಯತೆ ಇತ್ತು. ನಮ್ಮ ದುರ್ದೈವ ''ಎಂದರು. ''ಈಕೆ ನಿಮ್ಮ ಮನೆಯ ಕೆಲಸದವಳೋ '' ಎಂದರು ಪಾಂಡೆ. ''ಹೌದು ಕಳೆದ ಒಂದು ವರ್ಷದಿಂದಲೂ ಈಕೆ ನಮ್ಮ ಮನೆಯಲ್ಲಿಯೇ ಇದ್ದಾಳೆ.''. ಪಾಂಡೆ ಇನ್ನೂ ಗಹನ ಮೌನದಲ್ಲಿ ಮುಳುಗಿದರು. ಮತ್ತೆ ಮಗುವಿನ ಫೋಟೋ ನೋಡಿದರು. ಡಾ॥ ಡೋಗ್ರಾ, ನನಗೆ ಒಂದು ತುರ್ತು ಕೆಲಸವಿದೆ. ಅರ್ಧ ಗಂಟೆಯಲ್ಲಿ ಮರಳುವನೆಂದವರೇ ಹೊರ ಹೋದರು. ಮತ್ತೆ ಜನ ಬರುವುದು ಹೋಗುವುದು ನಡೆದಿತ್ತು.

ಅರ್ಧ ತಾಸು ಮುಗಿಯುವಷ್ಟರಲ್ಲಿ ಡಾ॥ ಪಾಂಡೆ ಬಂದರು. ಅವರೊಡನೆ ಅವರ ಸ್ನೇಹಿತ ಇದ್ದರು. ಪಾಂಡೆ ಅಡುಗೆ ಮನೆಗೆ ಹೋಗಿ ಯಮುನಾಬಾಯಿಯನ್ನು ಕರೆದು ಹೇಳಿದರು. ''ಯಮುನಾ, ಇವರು ನನ್ನ ಸ್ನೇಹಿತರು. ಅವರ ಸಂಗಡ ಹೋಗಿ ಒಂದು ಪಾರ್ಸಲ್ ಇದೆ ಅದನ್ನು ತೆಗೆದುಕೊಂಡು ಬಾ''. ಯಮುನಾಬಾಯಿಯನ್ನು ಕಳಿಸಬೇಕೆಂದು ಡೋಗ್ರಾ ಅವರಿಗೂ ವಿನಂತಿಸಿದರು. ಯಮುನಾಬಾಯಿ ಹೊರ ಹೋದಳು. ಪಾಂಡೆ ಸುಮ್ಮನೆ ಕುಳಿತರು. ಒಂದು ತಾಸಾಯಿತು; ಎರಡು ತಾಸಾಯಿತು, ಯಮುನಾಬಾಯಿ ಮರಳಲಿಲ್ಲ. ಗಲಿಬಿಲಿ ಪ್ರಾರಂಭವಾಯಿತು. ಪಾಂಡೆ ಫೋನ್ ಮಾಡಿದರು. ಎಲ್ಲಿಗೆ ಅನ್ನುವದು ಯಾರಿಗೂ ಗೊತ್ತಾಗಲಿಲ್ಲ. ಇನ್ನೂ ಒಂದು ತಾಸು ಬೇಕು ಎಂಬ ವಿಚಾರ ತಿಳಿಯಿತು. ಮತ್ತೆ ಎಲ್ಲರೂ ಸುಮ್ಮನೆ ಕುಳಿತರು.

ಮತ್ತೆರಡು ತಾಸು ಕಳೆದ ಮೇಲೆ, ಮನೆಯ ಮುಂದೆ ಪೋಲೀಸ್ ಜೀಪು ನಿಂತಿತು. ಎಲ್ಲರಿಗೂ ಗಾಬರಿ. ಯಾರೋ ಅತ್ತು ಬಿಕ್ಕುವ ಶಬ್ದ ಕೇಳಿದ ಮೇಲೆ ಗಾಬರಿ ಹೆಚ್ಚಿತು. ಜೀಪಿನೊಳಗಿಂದ ಯಮುನಾಬಾಯಿ ಹೊರ ಬಂದಳು. ಅವಳಿಗೆ ಬೇಡಿ ಹಾಕಿದ್ದಾರೆ. ಹಗ್ಗ ಕಟ್ಟಿದ್ದಾರೆ. ಡಾ॥ಕುಂಕುಂ ಹಾಗೂ ಡಾ॥ ಡೋಗ್ರಾ ಅವರ ಮಾತೇ ಬಂದಾದುವು. ಸಿಟ್ಟಿಗೆದ್ದರು. ಸ್ನೇಹಿತ ಪಾಂಡೆಯ ಮೇಲೆ ಕಿಡಿಕಾರಿದರು. ''ಏನು ಪಾಂಡೆ? ಇದೆಲ್ಲ ಏನು ಹುಚ್ಚಾಟ? ನಾವು ದುಃಖದಲ್ಲಿರುವಾಗ ನೀವು ಇಂಥ ಕೆಲಸ ಮಾಡುವದೇ?'' ಡಾ॥ ಪಾಂಡೆ ಮಾತಾಡಲಿಲ್ಲ. ಡೋಗ್ರಾ ದಂಪತಿಗಳಿಗೂ ಕೈ ಸನ್ನೆ ಮಾಡಿ ಮಾತಾಡಬೇಡವೆಂದರು. ಯಮುನಾಬಾಯಿಯ ಹಿಂದೆ ಒಬ್ಬ ಪೊಲೀಸ್ ಬೆತ್ತ ಹಿಡಿದುಕೊಂಡೇ ಬಂದಿದ್ದ. ಆಕೆ ಅಳುತ್ತ

ಳುತ್ತ ತನ್ನ ರೂಮಿಗೆ ಹೋದಳು. ಪೊಲೀಸ್ ವಳ ಜೊತೆಯೇ ಇದ್ದರು. ರೂಮಿನೊಳಗಿಂದ ಂದು ಬಟ್ಟೆಯ ಗಂಟು ತಂದರು. ಅದನ್ನು ರ್ವ ಪೊಲೀಸ್ ಪೇದೆ ಬಿಚ್ಚಿದ. ಕೊಳಕು ರಿವೆಗಳು, ಹರಕು ಅರಿವೆಗಳು. ಒಂದೆರಡು ಕೊತೆ ಬಟ್ಟೆ ಚಿಕ್ಕ ಮಗುವಿನವು. ಒಂದೆರಡು ಕೊಳಕು ಸೀರೆ. ಅವುಗಳಲ್ಲಿ ಇನ್ನೊಂದು ಗಂಟು ಕ್ಕಿತು. ಅದನ್ನು ಬಿಚ್ಚಿದರೆ ಚಿಲ್ಲರೆ ಹಣ ಹಾಗೂ ಟೋಟುಗಳು.

ಡೋಗ್ರಾ ದಂಪತಿಗಳಿಗೆ ಇವೆಲ್ಲ ನೆಂಬುದೇ ತಿಳಿಯಲೊಲ್ಲದು. ಪೊಲೀಸರು ಲ್ಲವನ್ನೂ ಪಂಚನಾಮೆ ಮಾಡಿ ಯಮುನಾ ಾಯಿಯ ಸಂಗಡ ಅವೆಲ್ಲವನ್ನೂ ಪೊಲೀಸ್ ಾಣೆಗೆ ಒಯ್ದರು. ಪಾಂಡೆ ಎಲ್ಲವನ್ನೂ ೋಡುತ್ತಲಿದ್ದರು. ಕೊನೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಅವರು ಪಾಂಡೆಯವರಿಗೆ ಥ್ಯಾಂಕ್ಸ್ ಹೇಳಿ ಹೋದರು.

ಡಾ॥ ಡೋಗ್ರಾ ಕೇಳಿದರು. ''ಇದೆಲ್ಲ ನು? ಒಂದೂ ರ್ಥವಾಗುತ್ತಿಲ್ಲ.'' ಡಾ॥ ಕುಂಕುಂ ಅಳುತ್ತ ಗಾಬರಿಯಾಗಿ ಕೇಳಿದಳು. 'ಸಹೋದರ ಪಾಂಡೆಯವರೇ ನನಗೆ ಭಯವಾಗುತ್ತಿದೆ''. ಪೊಲೀಸರು, ಹಣದ ಗಂಟು, ಯಮುನಾಬಾಯಿ ಏನಿದು ? ಪಾಂಡೆ ದೀರ್ಘ ಶ್ವಾಸ ತೆಗೆದುಕೊಂಡು ಬಿಟ್ಟರು. ಇಬ್ಬರನ್ನೂ ನೋಡುತ್ತ ಹೇಳಿದರು.

''ನೋಡಿರಿ, ನೀವಿಬ್ಬರೂ ಮುಗ್ಧರು. ಹಳೇ ಮುಗ್ಧರು. ಇಡೀ ಮನೆಯನ್ನೂ ಕಸುಳೆಯನ್ನೂ ಆ ಯಮುನಾಬಾಯಿಯ ಕೈಯಲ್ಲಿಟ್ಟು ಹೋಗುತ್ತಿದ್ದೀರಿ. ನೀವು ಮರಳಿ ಬರುವವರೆಗೆ ಇಲ್ಲಿ ಏನು ನಡೆಯುತ್ತದೆ, ಮಗುವು ಹೇಗಿರುತ್ತದೆ ಎಂಬುದೇ ನಿಮಗೆ ಗೊತ್ತಿಲ್ಲ. ಅದರ ಅರಿವೂ ಇಲ್ಲ. ನಾವು ಇಷ್ಟು ಸ್ನೇಹಿತರಾಗಿದ್ದರೂ ಕೆಲಸದ ಗಡಿಬಿಡಿಯಲ್ಲಿ

ನಾನು ನಿಮ್ಮ ಮಗುವನ್ನು ನೋಡಿರಲೇ ಇಲ್ಲ. ಮಗುವಿನ ಮರಣದ ಸುದ್ದಿ ಕೇಳಿ ಧಾವಿಸಿ ಬಂದೆ. ಮಗುವಿನ ಫೋಟೋ ಕಂಡ ತತ್‌ಕ್ಷಣ ನನಗೆ ಗೊಂದಲವಾಯಿತು. ಈ ಮಗುವನ್ನು ನಾನು ಅನೇಕ ಸಲ ನೋಡಿದಂತೆ ಇದೆ ಅಲ್ಲ ಎನಿಸಿತು. ಆದರೆ ಎಲ್ಲಿ ನೋಡಿರುವೆ ಎಂಬುದು ಹೊಳೆಯಲೇ ಇಲ್ಲ. ನೆನಪಿಸಿ ಕೊಳ್ಳುತ್ತ ಕುಳಿತಾಗ ಗಾಬರಿಯಾಯಿತು. ನಾನು ನೋಡಿದ ಮಗುವು ನಿಮ್ಮ ಮಗುವೇ? ಎಂದು ಅನಿಸಿ ಗಂಟಲು ಒಣಗಿತು. ನೀವು ನೀರು ತರಲು ಯಮುನಾಬಾಯಿಗೆ ಹೇಳಿದಿರು. ಅವಳು ನೀರು ತಂದಳು. ಆಕೆಯ ಮುಖ ನೋಡಿದಾಕ್ಷಣ ನನಗೆ ನಡುಗು ಬಂದಿತು. ಕೈಯಲ್ಲಿದ್ದ ಗಾಜಿನ ಗ್ಲಾಸು ಕೆಳಗೆ ಬಿದ್ದು ಚೂರಾಯಿತು. ಯಾಕೆಂದರೆ ಯಮುನಾಬಾಯಿ ಈ ಮಗುವು ಜೋಡಿಯಾಗಿ ಬರುವ ಚಿತ್ರ ಕಣ್ಣೆದುರು ಬಂದಿತು.''

''ಏನು ಡಾ॥ ಪಾಂಡೆ, ನೀನು ಕನಸಿನಲ್ಲಿ ಇಲ್ಲ ತಾನೆ ?'' ಎಂದರು ಡಾ॥ ಡೋಗ್ರಾ.

''ನಾನಲ್ಲ , ನೀವು ಕನಸಿನಲ್ಲಿರುವಿರಿ ಎಂದರು ಪಾಂಡೆ''. ''ಕೇಳಿರಿ, ನಿಮ್ಮ ಆಳು ಮಗುವನ್ನು ಹೊತ್ತುಕೊಂಡು ನಿತ್ಯ ಸಫದರ ಜಂಗ್ ಟ್ರಾಫಿಕ್ ದೀಪಗಳ ಹತ್ತಿರ ಭಿಕ್ಷೆಗೆ ನಿಲ್ಲುತ್ತಿದ್ದಳು. ನಾನು ನನ್ನ ಕಾರಿನಲ್ಲಿ ಅಲ್ಲಿಗೆ ಬರುವಷ್ಟರಲ್ಲಿ ಕೆಂಪು ಲೈಟು ಹತ್ತುತ್ತಿತ್ತು. ಗಾಡಿ ನಿಲ್ಲಿಸುತ್ತಿದ್ದೆ. ಈಕೆ ನೇರವಾಗಿ ನನ್ನ ಹತ್ತಿರ ಬಂದು ಮಗುವಿನ ಕೈ ಮುಂದೆ ಮಾಡಿಸಿ ಭಿಕ್ಷೆ ಕೇಳುತ್ತಿದ್ದಳು. ಯಾಕೋ ಏನೋ ಈ ಮಗುವನ್ನು ಕಂಡಾಕ್ಷಣ ನನಗೆ ಮಮತೆ ಹುಟ್ಟಿ ಮಗುವಿನ ಗಲ್ಲ ನೇವರಿಸಿ ಮಗುವಿನ ಕೈಯಲ್ಲಿ ಭಿಕ್ಷೆ ಇಡುತ್ತಿದ್ದೆ. ಮಗುವು ನಗುತ್ತ ಟಾಟಾ ಹೇಳುತ್ತಿತ್ತು. ಅದರ ನಗುವಿಗೆ ನಾನು ಮಾರು ಹೋಗಿದ್ದೆ. ಅನೇಕ ಸಲ ನಾನೇ ಮಗುವಿಗಾಗಿ ಹುಡುಕಾಡುತ್ತಿದ್ದೆ. ಯಮುನಾಬಾಯಿ ದೂರ

ದಲ್ಲಿದ್ದರೆ ಕರೆಯುತ್ತಿದ್ದೆ. ಮಗುವಿಗೆ ಕೈಕುಲಕಿಸಿ ಹಣ ಕೊಟ್ಟು ಹೋಗುತ್ತಿದ್ದೆ. ಆ ಮಗು ನಿಮ್ಮದು ಎಂಬುದು ನನಗೆ ಗೊತ್ತಿರಲಿಲ್ಲ. ಮಗುವಿಗೆ ಕೇವಲ ಐದು ದಿನಗಳ ಹಿಂದೆ ಐದು ರೂಪಾಯಿ ಕೊಟ್ಟು ನಿಮ್ಮ ಆಳಿಗೆ ಬೈದು ಹೋಗಿರುವೆ. ಅಂದು ಮಗುವು ಜ್ವರದಿಂದ ಬಳಲುತ್ತಿತ್ತು. ಸಂದಾಗಿತ್ತು ಎಚ್ಚರವಿರಲಿಲ್ಲ. ಮಗುವನ್ನು ನನ್ನ ಆಸ್ಪತ್ರೆಗೆ ಕರೆದುಕೊಂಡು ಬಾ ಔಷಧ ಕೊಡುವೆನೆಂದು ಹೇಳಿದ್ದೆ. ಮರುದಿನ ಮಗುವು ಟ್ರಾಫಿಕ್ ಕಂಬದ ಹತ್ತಿರ ಬರಲಿಲ್ಲ. ಮರುದಿನವೂ ಬರಲಿಲ್ಲ. ಅಂದಿನಿಂದ ನಾನು ಮಗುವನ್ನು ನೆನಪಿಸುತ್ತಲೇ ಇದ್ದೆ. ಅದರ ನಗುವಿಗಾಗಿ ನೀರಡಿಸಿದ್ದೆ. ನಿಮ್ಮ ಮನೆಗೆ ಬಂದು ಮಗುವಿನ ಫೋಟೋ ಕಂಡು ಕುಸಿದುಹೋದೆ. ನೋಡಲು ಮಗು ಹಾಗೆಯೇ ಇದೆ. ಅದರೆ ಅದು ಭಿಕ್ಷುಕಿಯ ಮಗು. ಕೊಳಕು-ಚಿಂದಿ ಬಟ್ಟೆಗಳಲ್ಲಿ. ಇದು ನಿಮ್ಮ ಮಗು. ಒಂದಕ್ಕೊಂದು ತಾಳೆಯಾಗಲಿಲ್ಲ. ನೀವು ನೀರು ತರುವಂತೆ ಹೇಳಿದಿರಿ. ಯಮುನಾ ಬಾಯಿ ತಂದಳು. ನಾನು ಆಕೆಯನ್ನು ಗುರುತಿಸಿದೆ. ಹೌದು ಅದೇ ಮಗು ಅದೇ ಮಗು ಎನಿಸಿತು. ಖಾತ್ರಿ ಆಯಿತು. ನೀವು ಕೆಲಸಕ್ಕೆ ಹೋದಾಗ ಇವಳು ಮಗುವನ್ನು ಭಿಕ್ಷೆಗಾಗಿ ಒಯ್ಯುತ್ತಿರಬಹುದೆಂದು ಸಂಶಯ ಗಟ್ಟಿಯಾಯಿತು. ಯಾರಿಗೂ ಹೇಳದೆ ನನ್ನ ಸ್ನೇಹಿತ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ನನ್ನ ದುಗುಡ ತೋಡಿಕೊಂಡೆ. ಅವರು ನನ್ನೊಡನೆ ಬಂದು ಈಕೆಯನ್ನು ಕರೆದುಕೊಂಡು ಹೋಗಿ ನಾಲ್ಕಾರು ಒದ್ದಾಗ ಅವಳು ಒಪ್ಪಿ ಎಲ್ಲವನ್ನೂ ಹೇಳಿದಳಂತೆ. ಕಾರಣ ಮನೆಗೆ ಬಂದಾಗ ತನ್ನ ಕೊಳಕು ಅರಿವೆ-ಮಗುವಿನ ಅರಿವೆಗಳನ್ನು ತೋರಿಸಿದಳು. ಮುಂದಿನ ವಿವರ ಅವರನ್ನು ಕೇಳೋಣ. ಗಂಡಹೆಂಡದಿರಿಬ್ಬರಿಗೂ ನಂಬಲು ಆಗಲೇ ಇಲ್ಲ. ತಮ್ಮ ಮಗು ನಿತ್ಯ ಭಿಕ್ಷೆ ಬೇಡುವುದು. ಕೊಳಕು ಬಟ್ಟೆಗಳಲ್ಲಿರುವುದು. ದೆಹಲಿಯ ಥಂಡಿಯಲ್ಲಿ ಬರಿ ಮೈಯಿಂದ ರಸ್ತೆಯಲ್ಲಿ ನಿಲ್ಲುವುದು. ಅವರ ಹೃದಯ ಕಂಪಿಸ ತೊಡಗಿದುವು.

ಉಳಿದ ಸಂಗತಿಗಳನ್ನು ತಿಳಿಯಲು ಅವರು ಆತುರರಾದರು. ಮೂವರೂ ಕೂಡಿ ಪೊಲೀಸ್ ಠಾಣೆಗೆ ಹೋದರು. ಅಲ್ಲಿ ಅವರಿಗೆ ಯಮುನಾಬಾಯಿ ಹೇಳಿದ ವಿವರಗಳು ದೊರೆತವು.

ಯಮುನಾಬಾಯಿ ಎಂಬುದು ಹೆಸರಲ್ಲವಂತೆ. ಅವಳ ನಿಜವಾದ ಹೆಸರು ಫಾತಿಮಾ ಎಂದು. ಅವಳು ಕೆಲಸ ಕೇಳುತ್ತ ಡಾ|| ಡೋಗ್ರಾ ಅವರ ಮನೆಗೆ ಬಂದಾಗ ತನ್ನ ಹೆಸರನ್ನು ಸುಳ್ಳು ಹೇಳಿದಳು. ಮೊದಲ ತಿಂಗಳು ಚೆನ್ನಾಗಿ ಕೆಲಸ ಮಾಡಿ ನಂಬಿಕೆ ಗಳಿಸಿದಳು. ಮಗುವನ್ನು ಚೆನ್ನಾಗಿ ಆರೈಕೆ ಮಾಡಿದಳು.

ಮನೆಯಲ್ಲಿಯ ಕೆಲಸ, ಮಗುವಿನ ಆರೈಕೆಗಳು ಆಕೆಯನ್ನು ಬೇಸರಗೊಳಿಸಿದುವು. ಒಂದು ದಿನ ಆಕೆ ಮಗುವನ್ನು ಎತ್ತಿಕೊಂಡು ಸಮೀಪದ ಹೂದೋಟಕ್ಕೆ ವಾಯು ವಿಹಾರಕ್ಕೆಂದು ಹೋದಳು. ಮಗುವಿಗೆ ಇದು ಖುಷಿ ಕೊಡುತ್ತಿತ್ತು. ಆಕೆಗೂ ಅದು ಸಮಾಧಾನ. ಇದು ನಿತ್ಯ ಪರಿಪಾಠವೆನಿಸಿತು. ತೋಟಕ್ಕೆ ಹೋಗುವಾಗ ಒಂದು ರಸ್ತೆಯನ್ನು ದಾಟಬೇಕಾಗುತ್ತಿತ್ತು. ಅಲ್ಲಿ ಟ್ರಾಫಿಕ್ ಲೈಟ್ ಇತ್ತು. ಕೆಂಪು ದೀಪ ಹತ್ತಿದಾಗ ನೂರಾರು ಕಾರು ಹಾಗೂ ಉಳಿದ ವಾಹನಗಳು ನಿಲ್ಲಬೇಕಾಗುತ್ತಿತ್ತು. ಆ ವಾಹನಗಳ ನಡುವೆ ಹಾಯ್ದು ಆಕೆ ನಡೆಯುತ್ತಿದ್ದಳು. ಒಮ್ಮೆ ಆಕೆ ರಸ್ತೆಯನ್ನು ದಾಟುವಾಗ ಒಬ್ಬ ಮಹಿಳೆ ಮಗುವನ್ನು ಮಾತಾಡಿಸಿ ಅದರ ಕೈಗೆ ಐದುರೂಪಾಯಿ ಇತ್ತಳು. ಯಮುನಾಬಾಯಿಗೆ ಇದು ಲಾಭವೆನಿಸಿತು. ಕಾರಣ ಆಕೆ

ನಿತ್ಯವೂ ಅಲ್ಲಿ ಮಗುವನ್ನು ಕರೆದುಕೊಂಡು ಬರಹತ್ತಿದಳು. ಅವಳಂತೆ ಇನ್ನೂ ಕೆಲ ಹೆಂಗಸರು ಮಕ್ಕಳನ್ನು ಹೊತ್ತು ಕೊಂಡು ಬರುತ್ತಿದ್ದರು. ಅವರ ಬಟ್ಟೆಗಳು ಹರಕು, ಕೊಳಕು, ಮಕ್ಕಳು ಅರೆ ಬೆತ್ತಲೆ ಅವು ಕಿರಿಕಿರಿ ಮಾಡುತ್ತಿದ್ದವು ಅಳುತ್ತಿದ್ದವು. ಆ ಮಕ್ಕಳಿಗೆ ಭಿಕ್ಷೆ ಜಾಸ್ತಿ ಸಿಗುತ್ತಿತ್ತು. ಈಕೆಯ ಮಗು ನಿರ್ಮಲ, ಬಟ್ಟೆಗಳು ಸೊಗಸಾದವು. ಕಾರಣ ಹಣ ದೊರೆಯುತ್ತಿರಲಿಲ್ಲ. ಆಕೆಯೂ ಹರಕು ಬಟ್ಟೆ ಉಟ್ಟಳು. ಕೂಸಿಗೆ ಕೊಳಕು ಬಟ್ಟೆ ತೊಡಸಿದಳು. ಅಂದು ಆಕೆಗೂ ೨೦ ರೂಪಾಯಿ ದೊರೆಯಿತು. ತನ್ನ ಬುದ್ಧಿ ಓಡಿಸಿ ಮಗುವಿಗೆ ಹರಕು ಬಟ್ಟೆಗಳನ್ನು ತೊಡಿಸ ಹತ್ತಿದಳು. ಮಗುವು ಅಳ ಹತ್ತಿದರೆ ಜಾಸ್ತಿ ದುಡಿಮೆ ಎಂಬುದು ತಿಳಿಯಿತು. ಆಗ ಆಕೆ ಮಗುವನ್ನು ಚಿವುಟ ಅಳಿಸಹತ್ತಿದಳು. ಮಗುವಿಗೆ ಹಾಲು ಕುಡಿಸದೆ, ಉಣಿಸದೇ ಇದ್ದರೆ ಅದು ನೋಡಲು ಸುಸ್ತಾಗುವುದು , ಅಳುವುದು ಗೊತ್ತಾಯಿತು. ಆಗ ದುಡಿಮೆ ಜಾಸ್ತಿ. ಆಕೆಗೆ ಯಾರ ಭಯವೂ ಇಲ್ಲ. ಯಾಕೆಂದರೆ ಮಗುವಿನ ತಂದೆ-ತಾಯಂದಿರು ಸಂಜೆಗೆ ಬರುವದು. ಹೀಗೆ ಮಗುವನ್ನು ಸತಾಯಿಸಿ, ಹಸಿದು ಕಂಗಾಲಾಗುವಂತೆ ಮಾಡಿ, ನಾಲ್ಕಾರು ಬಾರಿ ಕೆನ್ನೆಗೆ ಬಾರಿಸಿ ಹರಕು ಕೊಳಕು ಬಟ್ಟೆ ತೊಡಿಸಿ ಹೊರತರುತ್ತಿದ್ದಳು. ತಾನೂ ಸಹ ಹರಕು ಬಟ್ಟೆ ಧರಿಸುತ್ತಿದ್ದಳು. ನಿತ್ಯ ಮಗುವು ಭಿಕ್ಷೆ ಬೇಡುವಂತೆ ಮಾಡಿ ೫೦-೬೦ ರೂ ಗಳಿಸಹತ್ತಿದಳು. ಸಂಜೆಗೆ ೪ ಗಂಟೆಗೆ ಮನೆಗೆ ಮರಳಿ, ಮಗುವಿಗೆ ಸ್ನಾನ ಮಾಡಿಸಿ ಚೆನ್ನಾಗಿ ಪೌಡರ್ ಬಳಿದು, ಒಳ್ಳೆಯ ಬಟ್ಟೆ ಹಾಕಿ ಹೊಟ್ಟೆ ತುಂಬಾ ಹಾಲು ಕುಡಿಸಿ , ಉಣ್ಣಿಸಿ ಬಿಡುತ್ತಿದ್ದಳು. ಸುಸ್ತಾದ ಮಗು ನಿದ್ದೆ ಹೋಗುತ್ತಿತ್ತು. ಡಾ॥ ಡೋಗ್ರಾ ದಂಪತಿಗಳು ಬರುವಷ್ಟರಲ್ಲಿ ಜೋರಿನಿಂದ ನಿದ್ದೆ ಹೊಡೆಯುತ್ತಿರುತ್ತಿತ್ತು. ಮಗು ಸುಖ ನಿದ್ದೆಯಲ್ಲಿ ಇರುವುದನ್ನು ಕಂಡು ತೃಪ್ತರಾಗುತ್ತಿದ್ದರು. ಯಮುನಾಬಾಯಿಗೆ ಅವರು ಶಭಾಶ್ ಕೊಡುತ್ತಿದ್ದರು.

ಚಳಿಗಾಲ ಬಂದಿತು. ದೆಹಲಿಯಲ್ಲಿ ವಿಪರೀತ ಚಳಿ. ಆ ಚಳಿಗೆ ಗಿಡಮರಗಳೂ ನಡುಗುವುವು. ಎಲ್ಲ ಜನರೂ ಚಳಿಗಾಲದಲ್ಲಿ ಉಣ್ಣೆಯ ಬಟ್ಟೆ ಧರಿಸುವದು ಕಡ್ಡಾಯ. ಅಂಥ ಚಳಿಯಲ್ಲಿ ಯಮುನಾಬಾಯಿ ಮಗುವನ್ನು ಅರೆಬೆತ್ತಲೆ ಮಾಡಿ ಓಡಾಡುತ್ತಿದ್ದಳು. ಮಗು ಚಳಿಗೆ ಒದ್ದಾಡುತ್ತಿತ್ತು. ಆದರೆ ಆಕೆಗೆ ಹಣದ ಕಡೆಗೆ ಲಕ್ಷ್ಯ.

ಮಗುವು ಕೆಮ್ಮ ತೊಡಗಿತು. ಜ್ವರ ಬಂದಿತು. ಸಂಜೆ ಡಾ॥ ಡೋಗ್ರಾ, ಅವರಿಗೆ ಮಗುವಿಗೆ ಹುಷಾರ ಇಲ್ಲವೆಂದು ತಿಳಿಸಿದಳು. ಮಗುವನ್ನು ಪರೀಕ್ಷಿಸಿ ಮದ್ದು ಪ್ರಾರಂಭಿಸಿದರು. ಮರುದಿನ ಯಾವ ಮದ್ದು ಎಷ್ಟು ಕೊಡಬೇಕು ಎಂಬುದನ್ನು ಯಮುನಾಬಾಯಿಗೆ ತಿಳಿಸಿ ಹೋದರು. ಒಂದೆರಡು ದಿನ ಯಮುನಾಬಾಯಿ ಔಷಧ ಕೊಡಲೇ ಇಲ್ಲ. ಮಗುವು ಸುಸ್ತಾಗಿದ್ದರೆ ಗಳಿಕೆ ಉತ್ತಮ ಎನ್ನುವದು ಅವಳ ಲೆಕ್ಕ. ಕೊಡಬೇಕಾದ ಮದ್ದನ್ನು ಬಚ್ಚಲಿಗೆ ಚೆಲ್ಲುತ್ತಿದ್ದಳು. ಹೀಗಾಗಿ ಮಗುವಿನ ರೋಗ ಉಲ್ಬಣಗೊಳ್ಳಹತ್ತಿತು.

ಡಾ॥ ಕುಂಕುಂ ಆಸ್ಪತ್ರೆ ಬಿಟ್ಟು ಮನೆಯಲ್ಲಿ ಕುಳಿತಾಗ ಯಮುನಾಬಾಯಿಗೆ ಕಸಿವಿಸಿ. ಕೊನೆಗೆ ಡಾ॥ ಕುಂಕುಂ ಹೊರಟು ಹೋದರು. ತಕ್ಷಣ ಈಕೆ ಮಗುವನ್ನು ಅರೆಬೆತ್ತಲೆ ಮಾಡಿ ತನ್ನ ನಿತ್ಯ ಕಾಯಕಕ್ಕೆ ಓಡಿದಳು.

ಅಂದು ಡಾ॥ ಪಾಂಡೆ ಮಗುವನ್ನು ನೋಡಿ ಗಾಬರಿ ಆಗಿ ಮದ್ದು ತೆಗೆದುಕೊಳ್ಳಲು ತಮ್ಮ ಆಸ್ಪತ್ರೆಗೆ ಬರಲು ತಿಳಿಸಿದ್ದರು. ಯಮುನಾಬಾಯಿಗೆ ಕಿವಿಗೆ ಅದು ಬೀಳಲಿಲ್ಲ. ಅವಳು ತನ್ನ ದುಡಿಮೆ ಮಾಡುವದರಲ್ಲಿ ನಿರತಳಾ

ಗಿದ್ದಳು. ಚಿಕಗೆ ಮಗುವಿನ ರೋಗ ಉಲ್ಬಣಿಸಿತು. ಮುಂದೆ ನಡೆದ ಸಂಗತಿಗಳು ಈಗಾಗಲೇ ಬಂದಿವೆ.

ಡೋಗ್ರಾ ದಂಪತಿಗಳು ಮೂಕರಾದರು. ತಮ್ಮ ದುಡಿಮೆಯ ಹುಚ್ಚು ತಮ್ಮ ಮಗುವಿನ ಜೀವಕ್ಕೆ ಎರವಾಯಿತು ಎಂಬುದು ತಿಳಿದಾಕ್ಷಣ ಅವರ ದುಃಖ ಕೋಡಿ ಹರಿಯಿತು. ಮುಖ ಕಿಳಗಾಯಿತು. ತಮ್ಮ ಹಸುಳೆ ತಮಗೆ ಎಷ್ಟು ಶಾಪ ಹಾಕಿದೆಯೋ ಎಂದು ನಡುಗಿದರು.

೨. ಹೌದಿನಲ್ಲಿ ಕೂಸಿನ ಶವ

ಬೆಳಗಾವಿ ಸಮೀಪದ ಒಂದು ಊರು. ಅಲ್ಲಿ ಮಧ್ಯಮ ವರ್ಗದ ಕುಟುಂಬ. ಮನೆಯಲ್ಲಿ ತಂದೆ,ತಾಯಿ ಹಾಗೂ ಮಗಳು ಇದ್ದರು. ಮಗಳು ಬುದ್ಧಿವಂತೆ. ತನ್ನ ಪರೀಕ್ಷೆಗಳನ್ನು ಉತ್ತಮ ಶ್ರೇಣಿಯಲ್ಲಿ ಪಾಸಾದಳು. ಎಲ್.ಎಲ್.ಬಿ.ಪಾಸಾಗಿ ವಕೀಲಳಾದಳು. ಕೋರ್ಟಿನಲ್ಲಿ ಕೇಸು ನಡೆಸುತ್ತಾ ಪ್ರಸಿದ್ಧಿಗೆ ಬಂದಳು. ತನ್ನ ವಾದ ಮಂಡಿಸುವುದರಲ್ಲಿ, ಎದುರು ವಕೀಲರ ವಾದಗಳನ್ನು ಮುರಿಯುವಲ್ಲಿ ಪ್ರವೀಣೆ. ಎಲ್ಲರೂ ಆಕೆಯನ್ನೇ ಮುತ್ತುತ್ತಿದ್ದರು.

ಒಂದು ಕೇಸು, ಅದರಲ್ಲಿ ಒಬ್ಬ ತರುಣಿ ಅಪರಾಧಿ. ಆಕೆಯನ್ನು ಜೇಲಿಗೆ ಹಾಕಿದ್ದರು. ಆ ಕೇಸಿನಲ್ಲಿ ತರುಣಿಗೆ ಜೀವಾವಧಿ ಶಿಕ್ಷೆ ಆಗುವದೆಂದು ಎಲ್ಲರ ಎಣಿಕೆ ಆಗಿತ್ತು. ಆದರೆ ನಮ್ಮ ವಕೀಲಗಿತ್ತಿ ತನ್ನ ಜಾಣ್ಮೆಯಿಂದ ಕೇಸು ಗೆದ್ದಳು. ಅಪರಾಧಿಯನ್ನು ಬಿಡುಗಡೆ ಮಾಡಿದರು. ಇದರಿಂದ ವಕೀಲರ ಪ್ರಸಿದ್ಧಿ ಬಹಳ ಹೆಚ್ಚಾಯಿತು.

ಅಪರಾಧಿ ಜೇಲಿನಿಂದ ಹೊರಬಂದಳು. ಊರಿಗೆ ಹೋದಳು. ಅಲ್ಲಿ ಆಕೆಗೆ ಇರಲು ಸಾಧ್ಯವಾಗಲಿಲ್ಲ. ಬೇರೆ ಊರಿಗೆ ಹೋದಳು ಅಲ್ಲಿಯೂ ಅದೇ ಹಾಡು. ಬೇಸತ್ತು ಆಕೆ ತನ್ನನ್ನು ಮುಕ್ತ ಮಾಡಿಸಿದ ವಕೀಲಳ ಮನೆಗೇ ಬಂದು ತನ್ನ ಸ್ಥಿತಿಯನ್ನು ವಿವರಿಸಿದಳು. ತಾನು ಕೊನೆಯವರೆಗೂ ಅವರ ಮನೆಯಲ್ಲಿ ದುಡಿದು ಬದುಕುವೆ ಎಂದು ಅತ್ತಳು. ವಕೀಲಳಿಗೂ ಮನೆಯಲ್ಲಿ ಕೆಲಸಕ್ಕೆ ಒಂದು ಆಳು ಬೇಕಾಗಿತ್ತು. ಇರಲಿ ಎಂದಳು. ವಕೀಲಳ ತಂದೆ-ತಾಯಿ ಆಕೆ ಅಪರಾಧಿ ಬೇಡ ಎಂದರು. ಆದರೂ ವಕೀಲಳು ಆಕೆಯನ್ನು ಮನೆಯಲ್ಲಿ ಇಟ್ಟುಕೊಂಡಳು. ಆಕೆಯೂ ದುಡಿಯತೊಡಗಿದಳು.

ವಕೀಲಳ ಗಳಿಕೆ ಚೆನ್ನಾಗಿತ್ತು. ಅವಳ ವಿವಾಹ ಓರ್ವ ಇಂಜನೀಯರ್ ಜೊತೆ ಜರುಗಿತು. ವಕೀಲಳ ಆಸ್ತಿ ಇತ್ತು. ಕಾರಣ ಇಂಜನೀಯರ್ ಹೆಂಡತಿಯ ಮನೆಗೆ ಬಂದು ವಾಸಿಸತೊಡಗಿದ. ಎಲ್ಲವೂ ಸಾಂಗವಾಗಿ ನಡೆಯಿತು. ವಕೀಲಳು ಗರ್ಭವತಿ ಆದಳು. ದಿನ ತುಂಬಿ ಗಂಡು ಮಗುವಿಗೆ ಜನ್ಮ ಇತ್ತಳು. ಮಗು ಚೆನ್ನಾಗಿ ಬೆಳೆಯತೊಡಗಿತು.

ಮತ್ತೆ ವಕೀಲಳು ಕೋರ್ಟಿಗೆ ಹೋಗತೊಡಗಿದಳು. ಆಕೆಯು ತನ್ನ ಕಾರ್ಯದಲ್ಲಿ ಮುಳುಗಿದಳು. ಆಕೆಯ ಪತಿಯೂ ತನ್ನ ಕಾರ್ಯಕ್ಕೆಂದು ಬೇರೆ ಬೇರೆ ಊರುಗಳಿಗೆ ಹೋಗಬೇಕಾಗುತ್ತಿತ್ತು. ಮನೆಯಲ್ಲಿ ಮುದಿ ತಂದೆ, ತಾಯಂದಿರು, ಆಳು ಹಾಗೂ ಚಿಕ್ಕ ಮಗು ಮಾತ್ರ. ಮಗು ಜಾಸ್ತಿ ಹೊತ್ತು ಆಳಿನ ಸಂಗಡವೇ ಕಾಲ ಕಳೆಯುತ್ತಿತ್ತು.

ಒಂದು ದಿನ ಆಳು ಮಾಡಬಾರದ ತಪ್ಪು ಮಾಡಿದಳು. ಎಲ್ಲರೂ ಆಕೆಯನ್ನು ಬೈದರು. ಆಕೆಗೆ ರೋಷ ಹೋಗಿತ್ತು. ವಕೀಲರು ಕೋರ್ಟಿಗೆ ಹೋದರು. ಇಂಜನೀಯರು ಬೇರೆ ಊರಿಗೆ ನಡೆದರು. ಮುದುಕರು ವಿಶ್ರಾಂತಿಗೆಂದು ಮಲಗಿದರು. ಸಂಜೆಯಾಯಿತು, ಮುದುಕರು ಎದ್ದರು. ಕೋರ್ಟಿನಿಂದ ವಕೀಲರು ಬಂದರು. ಮಗುವನ್ನು ಕರೆದರು. ಮನೆಯಲ್ಲಿ ಮಗು ಇಲ್ಲ. ಎಲ್ಲಿಯಾದರೂ ಮಲಗಿರ

ಹುದೆಂದು ಹುಡುಕಾಡಿದರು. ಸಿಗಲಿಲ್ಲ. ಾಬರಿ ಆದರು. ಆಳು ಎಲ್ಲಿಯಾದರೂ ಡ್ನಾಡಲು ಕರೆದುಕೊಂಡು ಹೋಗಿರಬಹು ದೆಂದು ಊರೆಲ್ಲ ಹುಡುಕಿದರು. ಎಲ್ಲಿಯೂ ಳಿಪಿಲ್ಲ. ಮನೆಯಲ್ಲಿ ದುಃಖ ತುಂಬಿತು.

ವಕೀಲರು ತತ್‌ಕ್ಷಣ ಪೊಲೀಸರಿಗೆ ಫೋನ್ ಮಾಡಿ ಸಂಗತಿಯನ್ನು ಅರುಹಿದರು.. ಊರಲ್ಲಿ ಪ್ರಸಿದ್ಧ ವಕೀಲರು. ಪೊಲೀಸರಿಗೂ ಗಾಬರಿ ಬೇಗನೆ ಬಂದರು. ಕಂಪ್ಲೇಂಟ್ ಬರೆದು ಕೊಂಡರು. ಕೂಸಿನ ಮೈಮೇಲೆ ಒಡವೆ ಎಷ್ಟಿತ್ತೆಂಬುದನ್ನು ಕೇಳಿದರು ನಿಜ ಬಂಗಾರ ಉಂಗುರ, ಚೇನು ಉಡದಾರಗಳಿದ್ದವು ಎಂದು ತಿಳಿಯಿತು.

ಒಂದು ದಿನವಾಯಿತು. ಎರಡು ದಿನಗಳಾದವು. ಒಂದು ವಾರವೇ ಹೋಯಿತು. ಎಲ್ಲಿವೂ ಶಬ್ದ ಯಾವ ಕಡೆಯಿಂದಲೂ ಸುದ್ದಿ ಇಲ್ಲ. ೂನೆಗೆ ಒಂದು ದಿನ ಆಳಿನ ಪತ್ತೆ ಆಯಿತು. ಪೊಲೀಸರು ಅವಳನ್ನು ಹಿಡಿದರು. ಸುದ್ದಿ ಹರಡಿತು. ಆದರೆ ಆಕೆಯ ಹತ್ತಿರ ಮಗು ಇಲ್ಲ. ಅವಳು ಅದನ್ನು ಮಾರಿರಬಹುದೆಂದರು. ಬಂಗಾರ ತೆಗೆದುಕೊಂಡು ಕೊಂದು ಒಗೆದಿರಬಹುದು ಎಂದು ಇನ್ನು ಕೆಲವರೆಂದರು. ಪರೀಕ್ಷಿಸಿದರೆ ಆಳಿನ ಹತ್ತಿರ ಪುಡಿಕಾಸು ಬಿಟ್ಟರೆ ನೂ ಇಲ್ಲ.

ತಾನು ಮನೆಯನ್ನು ಬಿಟ್ಟು ಹೋದದ್ದು ನಿಜ. ಲ್ಲರೂ ನನ್ನನ್ನು ಬೈದಾಗ ನನಗೆ ಕೆಡುಕೆನಿಸಿ ಬೇರೆ ಕಡೆ ದುಡಿದು ಬದುಕಬೇಕೆಂದು ುಧ್ಯಾಹ್ನವೇ ನಾನು ಹೊರಟು ಹೋದೆ ಂದಳು. ಆಗ ಮಗುವು ಮನೆಯಲ್ಲಿ ಮಲಗಿತ್ತು ಎಂದು ಹೇಳಿದಳು.

ಆಕೆ ಈ ಮೊದಲೇ ಜೇಲು ಕಂಡವಳು. ಅಪರಾಧಿಯೂ ನಿಜ. ಈ ವಕೀಲರ ಜಾಣತನದಿಂದಲೇ ಬಿಡುಗಡೆ ಆದವಳು. ಪೊಲೀಸರು ಆಕೆಯನ್ನು ತಮ್ಮ ಲಾಕ್‌ಅಪ್‌ನಲ್ಲಿ ಇಟ್ಟರು. ವಿಚಾರಣೆ ಮುಂದುವರೆಯಿತು. ವಕೀಲಳಂತೂ ಹಾಸಿಗೆ ಹಿಡಿದಳು. ಇಂಜನೀಯರ್ ಹುಚ್ಚನಂತಾಗಿದ್ದ.

ಮನೆಯಲ್ಲಿ ಯಾರೂ ಅನ್ನ ಮುಟ್ಟುತ್ತಿಲ್ಲ. ನೀರು ಕುಡಿಯುತ್ತಿಲ್ಲ. ಇಡೀ ಊರಿನ ನಾಗರಿಕರು ದುಃಖಿಸುತ್ತಿದ್ದರು.

ಹತ್ತನೆಯ ದಿನ ಮುಂಜಾನೆ ಪೊಲೀಸರ ಜೀಪು ವಕೀಲರ ಮನೆ ಮುಂದೆ ನಿಂತಿತು. ಆಳಿಗೆ ಬೇಡಿ ಹಾಕಿದ್ದರು. ಆಕೆಯನ್ನು ಇಳಿಸಿದರು. ಮನೆಯವರೆಲ್ಲ ಹೊರಗೆ ಬಂದು ನಿಂತರು. ಆಳು ನೇರವಾಗಿ ಹಿತ್ತಲಿಗೆ ಹೋದಳು. ಅಲ್ಲಿದ್ದ ನೀರಿನ ಹೌದಿನ ಕಡೆಗೆ ತೋರಿಸಿದಳು. ಹೌದು ಮುಚ್ಚಲು ಭಾರವಾದ ಕಬ್ಬಿಣದ ಮುಚ್ಚಳಿಕೆ ಇತ್ತು. ಒಬ್ಬ ಪೊಲೀಸ್ ಅದನ್ನು ಮೇಲೆ ಎತ್ತಿದ. ಮುಚ್ಚಳವನ್ನು ತೆಗೆಯುತ್ತಲೆ ಒಳಗಿನಿಂದ ದುರ್ಗಂಧ ಹೊರಗೆ ಪುಟಯಿತು. ಎಲ್ಲರೂ ಮೂಗು ಮುಚ್ಚಿಕೊಂಡರು. ಬಗ್ಗಿ ನೋಡಿದರು. ಎದೆ ಒಡೆದು ಹೋಗುವ ದೃಶ್ಯ. ಮನೆಯ ಮಗುವಿನ ಹೆಣ ತೇಲುತ್ತಲಿದೆ. ಅದು ಕೊಳತು ಬಾತಿದೆ. ಬಾತು ಒಡೆದಿದೆ. ಹೆಣವನ್ನು ಹೊರಗೆ ತೆಗೆದರು. ತಾಯಿಯ ಅಳು ಮುಗಿಲ ಸೀಳಿತು. ಇಡೀ ಊರಿಗೆ ಊರೇ ಕೂಡಿತು.

ಮನೆ ಬಿಟ್ಟು ಹೋಗುವಾಗ ಆಳು ಮಗುವನ್ನು ಎತ್ತಿ ಹೌದಿನಲ್ಲಿ ಚೆಲ್ಲಿ ಹೋಗಿದ್ದಳು. ಹೌದಿನ ಮುಚ್ಚಳವನ್ನು ಭದ್ರವಾಗಿ ಮುಚ್ಚಿದ್ದಳು.

ಪೊಲೀಸರ ಒತ್ತಡ ಹೆಚ್ಚಾದಾಗ ತಾನು ಮಾಡಿದ ಕಾರ್ಯದ ವಿವರವನ್ನು ತಿಳಿಸಿದ್ದಳು. ಪೊಲೀಸರು ಅಪರಾಧ ಕಂಡುಹಿಡಿಯುವಲ್ಲಿ ಯಶ ಪಡೆದರು.

ವಕೀಲಳ ಮಾತೆ ನಿಂತಿದ್ದವು. ಈ ಹೆಂಗಸನ್ನು ಜೇಲಿನಿಂದ ಬಿಡಿಸಲು ತಾನು ಮಾಡಿದ ಸಾಹಸಗಳು ಕಣ್ಣೆದುರಿಗೆ ಬರಹತ್ತಿದವು. ಅಯ್ಯೋ! ಈಕೆಯನ್ನು ಬಿಡಿಸಿದ್ದೆ ನನ್ನ ಮಗುವನ್ನು ಕೊಲ್ಲಲೆಂದೇ? ಎಂದು ಕುಸಿದು ಬಿದ್ದಳು.

ಕಾಸು ಸಂಪಾದಿಸಲು ಒಳದಾರಿ ಹಿಡಿದವರು
ಮೋಸ ಹೋಗುತ ಜಾರುವರು ಆಳಕಂದಕಕೆ
ನಿಸ್ವಾರ್ಥದಿಂದುಡಿವ ಹೃದಯಗಳೆಸುವುದು
ತೀವ್ರ ವಿಶ್ವಾಸಜೀವನಾಧಾರವನು ಅತ್ರಿಸೂನು.

ಸ್ಥಾನಬೆಲೆ

ಎಂ.ಪಿ. ಚಕ್ರಪಾಣಿ
ನಂ.೧/೧೬೦ ವೆಂಕಟೇಶ್ವರ ಗುಡಿಯ ಸಮೀಪ,
ಹೌಸಿಂಗ್ ಬೋರ್ಡ್ ಕಾಲೋನಿ
ಹಗರಿಬೊಮ್ಮನಹಳ್ಳಿ-೫೮೩೨೧೨

ನಮ್ಮ ಮನೆಯ ಪಕ್ಕದಲ್ಲಿ ಒಬ್ಬ ರೈತನಿದ್ದ. ನನ್ನನ್ನು ಕಂಡಾಗಲೆಲ್ಲ 'ಸಾ' 'ಸಾ' ಎಂದು ಗೌರವದಿಂದ ಮಾತನಾಡಿಸುತ್ತಿದ್ದ. ಗ್ರಾಮ ಪಂಚಾಯ್ತಿಯ ಚುನಾವಣೆಗಳು ಹತ್ತಿರ ಬರುತ್ತಿದ್ದ ಹಾಗೆ ಅನೇಕ ದೊಡ್ಡ ಮನುಷ್ಯರ ಕಣ್ಣು ಆತನ ಮೇಲೆ ಬಿದ್ದುವು. ಚುನಾವಣೆಯ ಟಿಕೇಟು ಸಿಕ್ಕಿತು ಆತನಿಗೆ. ಮತ ಯಾಚನೆಗೆ ಎಲ್ಲರ ಹಾಗೆ ಆತನೂ ನನ್ನ ಮನೆಗೆ ಬಂದ. 'ಮೇಸ್ಟ್ರೇ', 'ಮೇಸ್ಟ್ರೆ' ಅಂದ.

ಚುನಾವಣೆಯಲ್ಲಿ ಗೆದ್ದು ಪಂಚಾಯ್ತಿ ಮೆಂಬರೂ ಆದ. ಆ ಮೇಲೆ ಕಂಡಾಗ 'ನಮಸ್ಕಾರ ಚಕ್ರಪಾಣಿಯವರಿಗೆ' ಅನ್ನತೊಡಗಿದ. ಮುಂದೊಂದು ದಿನ ಪಂಚಾಯಿತಿಯ ಅಧ್ಯಕ್ಷನೂ ಆದ. ಬಳಿಕ ನಾನು ಆತನಿಗೆ 'ಯಾಕಪ್ಪ, ಮಾಸ್ತರ'ನಾದೆ. ಆತನ ಸ್ಥಾನ ಒಂದೊಂದೆ ಹಂತ ಮೇಲಕ್ಕೆ ಏರುತ್ತ ಹೋದ ಹಾಗೆ ಆತನ ಕಣ್ಣಿನಲ್ಲಿ ನನ್ನ ಸ್ಥಾನ ಒಂದೊಂದೇ ಹಂತ ಕೆಳಗಿಳಿಯುತ್ತ ಹೋಯಿತು.

ಆತನೂ ನಾನೂ ಒಂದೇ ಹಂತದಲ್ಲಿದ್ದಾಗ ನಾನು 'ಸಾ' ಆಗಿದ್ದೆ. ಸ್ಥಾನಕ್ಕೆ ಆತ ಗುರಿಯಿಟ್ಟಾಗ 'ಮೇಸ್ಟ್ರೆ' ಆದೆ. ಅಧಿಕಾರ ಸ್ಥಾನ ಪ್ರಾಪ್ತವಾದಾಗ 'ಸಾ' ಹೋಯ್ತು, 'ಮೇಸ್ಟ್ರೆ' ಕೂಡ ಹೋಯ್ತು. ನಾನು 'ಚಕ್ರಪಾಣಿ' ಯಾಗಿ ಉಳಿದೆ. ಅಧಿಕಾರ ಸ್ಥಾನದಲ್ಲಿ ಇನ್ನಷ್ಟು ಮೇಲಕ್ಕೆ ಏರಿದಾಗ ನಾನು ಏಕವಚನ ಸ್ಥಾನಕ್ಕೆ ಇಳಿದೆ. ಇನ್ನೂ ಮೇಲಕ್ಕೆ ಏರುತ್ತಿದ್ದರೆ ನಾನು ಒಂದು ಚಿಲ್ಲರೆ ಜೀವಿಯಾಗಿ ಉಳಿಯುತ್ತಿದ್ದೆ ನೇನೊ. ಆ ಪುಣ್ಯ ನನಗಿರಲಿಲ್ಲವೆಂದೂ ಏನೊ ಆತ ಮತ್ತೆ ಮೇಲಕ್ಕೆ ಏರಲಿಲ್ಲ.

ಇದಕ್ಕೆಲ್ಲ ಆತನ ಕಾರಣವೆಂದು ನಾನು ಸರ್ವಥಾ ತಿಳಿದುಕೊಂಡಿಲ್ಲ. ಆತನಿಗೆ ಸ್ಥಾನ ದಿಂದ ಪ್ರಾಪ್ತವಾದ ಬೆಲೆ ಅವನನ್ನು ಹಾಗೆ ಆಡಿಸಿತ್ತೆಂದು ನಾನು ಖಚಿತವಾಗಿ ಬಲ್ಲೆ. ಅದನ್ನು ಸ್ಥಾನದ ಬೆಲೆ ಅನ್ನಬೇಕೊ ಬಲ ಅನ್ನಬೇಕೊ ಎಂಬ ಗೊಂದಲ ಬಹುದಿನಗಳ ವರೆಗೂ ನನ್ನಲ್ಲಿತ್ತು.

ಸ್ಥಾನಬೆಲೆ : ಅದು ಸ್ಥಾನಬೆಲೆಯೇ ಸರಿ ಎಂದು ನನಗೆ ಕೆಲಸಮಯದ ಬಳಿಕ ಗೊತ್ತಾಯಿತು. ನನಗೆ ಅದನ್ನು ತಿಳಿಸಿದವರು ನನ್ನ ಸ್ನೇಹಿತರಾದ ಗಣಿತಜ್ಞರು. ಆ ಗಣಿತಜ್ಞರನ್ನು ನನ್ನ ಗೊಂದಲದ ಬಗ್ಗೆ ಕೇಳಿದೆ. ಅವರು ಮೊದಲಿಗೆ ನನ್ನನ್ನು ಯಃಕಶ್ಚಿತ್ ಜೀವಿಯಂತೆ ಕಂಡು, ಒಂದು ವಿಕಟ ನಗೆ ನಕ್ಕರು. ಬಳಿಕ ತಮ್ಮ ಗಣಿತಜ್ಞನೆಂಬ ಸ್ಥಾನದ ಬಲದಿಂದ-ಅಲ್ಲಲ್ಲ, ಸ್ಥಾನದ ಬೆಲೆಯಿಂದ- ಅನುಗ್ರಹಿಸುವ ಧಾಟಿಯಲ್ಲಿ ಪರಿಹಾರ ವನ್ನು ಅಪ್ಪಣೆ ಕೊಡಿಸಿದರು.

ಗಣಿತದಲ್ಲಿ ಸ್ಥಾನಬೆಲೆಯನ್ನು ಸಂಶೋಧಿ ಸಿದ್ದೇ ಭಾರತೀಯರಂತೆ. ಎರಡು ಅಂಕಿಗಳನ್ನು ಸ್ವತಂತ್ರವಾಗಿ ಬರೆದಾಗ ಅವುಗಳ ಸ್ಥಾನಬೆಲೆಯ ಬೇರಂತೆ; ಒಂದರ ಪಕ್ಕದಲ್ಲಿ ಒಂದನ್ನು ಬರೆದಾಗ ಅವುಗಳ ಸ್ಥಾನಬೆಲೆಯೆ ಬೇರಂತೆ. ಎಡಕ್ಕಿರುವ

ಂಕಿಯು ತನ್ನ ಸ್ಥಾನದ ಬಲದಿಂದ ಹತ್ತುಪಟ್ಟು ೊಡ್ಡದಾಗುತ್ತದಂತೆ. ಬಲಕ್ಕಿರುವ ಅಂಕಿಯು ತ್ತು ಪಟ್ಟು ಚಿಕ್ಕದಾಗುತ್ತದಂತೆ. ಒಂದೇ ಂಕಿಯೂ ಎಡಕ್ಕೆ ಸರಿಯುತ್ತ ಹೋದಂತೆ ದರ ಸ್ಥಾನಬೆಲೆಯು ಹತ್ತರಷ್ಟು ಹೆಚ್ಚುತ್ತ ಂತೆ. ಸ್ಥಾನಬೆಲೆಯ ಸಹಾಯದಿಂದ ಯಾವ ೊಡ್ಡ ಸಂಖ್ಯೆಯನ್ನಾದರೂ ಸುಲಭವಾಗಿ ರೆಯಬಹುದಂತೆ. ಪ್ರಾಚೀನ ಗ್ರೀಕರಿಗೆ ್ಥಾನಬೆಲೆಯ ಅರಿವು ಇಲ್ಲದೆ ಹೋದದ್ದರಿಂದ ವರ ಪ್ರಗತಿ ಕುಂಠಿತವಾಯಿತಂತೆ.

ಗಣಿತಜ್ಞರ ಮಾತನ್ನು ಕೇಳಕೇಳುತ್ತ ನನ್ನ ಹುದಿನಗಳ ಪ್ರಶ್ನೆಗೆ ಉತ್ತರ ಸಿಕ್ಕಿತು. ನನ್ನ ನಸ್ಸನ್ನು ಆವರಿಸಿದ್ದ ಮಬ್ಬು ಹರಿಯಿತು. ತ್ತಲೆಯಾಗಿದ್ದ ಕಡೆ ಬೆಳಕು ಬಿತ್ತು. ಗೌತಮನಿಗೆ ೋಧಿವೃಕ್ಷದ ಕೆಳಗೆ ಜ್ಞಾನೋದಯವಾದ ಾಗೆ, ನನಗೆ ಗಣಿತಜ್ಞರ ಪಾದ ಮೂಲದಲ್ಲಿ ್ಞಾನೋದಯವಾಯ್ತು. 'ಯುರೇಕಾ' ಎಂದು ೂಗಿದೆನೆಂದು ನೆನಪು.

ಯುರೇಕಾ! ಯುರೇಕಾ! ನನ್ನ ಗೊಂದಲವನ್ನು ಳಿದ ಹಂತದಿಂದ ಮುಂದೆ ಗಣಿತಜ್ಞರು ಏನು ೇಳಿದರೂ ನನಗೆ ಗಮನವಿರಲಿಲ್ಲ. ನಿಸರ್ಗದ ಹಸ್ಯವೊಂದನ್ನು ಒಡೆದ ವಿಜ್ಞಾನಿಯು ಅದನ್ನು ೇರೆ ಬೇರೆ ಸನ್ನಿವೇಶಗಳಿಗೆ ಹೊಂದಿಸಿ ೋಡುವಂತೆ ನಾನು ಆ ಗಣಿತಜ್ಞರ ಾತುಗಳನ್ನು ಬೇರೆ ಬೇರೆ ಸನ್ನಿವೇಶಗಳಿಗೆ ೊಂದಿಸಿ ನೋಡುವುದರಲ್ಲಿ ತಲ್ಲೀನನಾಗಿದ್ದೆ.

ನಮ್ಮ ದೇಶದ ಗಣಿತಜ್ಞರು ಸಮಾಜದಿಂದ ್ರಭಾವಿತರಾದರೊ, ಸಾಮಾಜಿಕರು ಗಣಿತ ಂದ ಪ್ರಭಾವಿತರಾದರೊ, ಸ್ಥಾನಬೆಲೆಯು ಾರತದ ಸಾಮಾಜಿಕ ಜೀವನದ 'ಕೋಡ್' ಗಿರುವುದಂತೂ ನಿಜ. ತಮ್ಮ ಸ್ಥಾನದ ಲೆಯಿಂದಲೇ ಕೋಟಿಗಟ್ಟಲೆ ಸಂಪಾದಿಸು ವವರಿಲ್ಲವೇ? ತಮ್ಮ ಸ್ಥಾನಬೆಲೆಯಿಂದ ಹತ್ತಾರು ಕೊಲೆಗಳನ್ನು ಮಾಡಿಸುವವರಿಲ್ಲವೆ? ತಮ್ಮ ಸ್ಥಾನಬೆಲೆಯಿಂದಲೇ ಹತ್ತಾರು ಹೆಂಗಸರನ್ನು ನಾಶಮಾಡುವವರಿಲ್ಲವೇ? ತೆರಿಗೆ ಅಧಿಕಾರಿಗಳೊ ಪೊಲೀಸರೊ ಬಂದಾಗ ತಮ್ಮ ಸ್ಥಾನದ ಬೆಲೆ ಯಿಂದಲೇ ಅವರನ್ನು ನಿಷ್ಕ್ರಿಯ ಗೊಳಿಸುವವ ರಿಲ್ಲವೆ? ಕಾನೂನು ದಾರಿ ತಪ್ಪಿಸುವವರಿಲ್ಲವೆ ? ಸ್ಥಾನದ ಬೆಲೆಯಿಂದ ಯಥಾರ್ಹನಾದವನು ಯೋಗ್ಯಾರ್ಹನಾಗುತ್ತಾನೆ.

ಗ್ರೀಸ್ ದೇಶದಲ್ಲಿ ಸಾಕ್ರಟೀಸ್ ಎಂಬ ಮಹಾ ಮೇಧಾವಿ ಇದ್ದನಂತೆ. ಪ್ರಭುತ್ವವು ಅವನಿಗೆ ಮರಣದಂಡನೆಯನ್ನು ವಿಧಿಸಿತು. ಬಡಪಾಯಿ ಸಾಕ್ರಟೀಸ್ ಶಿಕ್ಷೆಗೆ ಒಳಗಾಗಿ ಸಾವನ್ನಪ್ಪಿದ. ಸ್ಥಾನ ಬೆಲೆಯೇನಾದರೂ ಆತನಿಗೆ ಗೊತ್ತಿದ್ದಿದ್ದರೆ, ಆತ ತನ್ನ ಸ್ಥಾನಬೆಲೆಯಿಂದಲೇ ಮರಣದಂಡನೆ ತಪ್ಪಿಸಿಕೊಳ್ಳುತ್ತಿದ್ದ. ಅದು ಗೊತ್ತಿದಲ್ಲದ ತಪ್ಪಿಗೆ ಆತ ತನ್ನ ಪ್ರಾಣವನ್ನೇ ತೆರಬೇಕಾಯಿತು.

ಅದೇ ಕಾಲದಲ್ಲಿ ನಮ್ಮಲ್ಲಿ ಸ್ಥಾನಬೆಲೆಯು ತನ್ನ ವಿರಾಡ್ರೂಪದಲ್ಲಿ ವಿರಾಜಮಾನವಾಗಿತ್ತು. ಸ್ಥಾನವನ್ನು ಪಡೆದುಕೊಳ್ಳಲು ಅಸಮರ್ಥ ನಾದವನು ಮೇಧಾವಿಯೆ ಅಲ್ಲ ಎಂಬ ನಂಬಿಕೆ ವ್ಯಾಪಕವಾಗಿತ್ತು. ಮೇಧಾವಿಯಾದವನು ಸ್ಥಾನವನ್ನು ಪಡೆಯುವುದಕ್ಕೋಸ್ಕರ ತನ್ನ ಮೇಧಾಶಕ್ತಿಯನ್ನು ಉಪಯೋಗಿಸಿಕೊಳ್ಳ ಬೇಕಿತ್ತು. ಒಮ್ಮೆ ಪಡೆದ ಬಳಿಕ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಮೇಧಾಶಕ್ತಿಯ ತಂತ್ರಗಳನ್ನು ಕೈಗೊಳ್ಳಬೇಕಾಗುತ್ತಿತ್ತು.

ಅನಂತರದ ಸಾವಿರಾರು ವರ್ಷಗಳಲ್ಲಿ ಪ್ರಪಂಚದಲ್ಲಿ ಏನೆಲ್ಲ ಬದಲಾವಣೆಗಳಾದುವು. ಸಾಕ್ರಟೀಸನ ಗ್ರೀಸ್ ಹೇಳಹೆಸರಿಲ್ಲದಂತಾಯಿತು, ಮಹಾನ್ ರೋಮನ್ ಸಾಮ್ರಾಜ್ಯ ಎದ್ದಿತು : ಬಿದ್ದಿತು. ಏಸುಕ್ರಿಸ್ತನ ಜನ್ಮವಾಯಿತು, ಕ್ರಿಶ್ಚಿಯನ್

ಮತ ಹುಟ್ಟಿಕೊಂಡಿತು. ಪೈಗಂಬರರ ಜನನವಾಯಿತು; ಇಸ್ಲಾಂ ಹುಟ್ಟಿಕೊಂಡಿತು. ಕ್ರಿಶ್ಚಿಯನ್ನರ ಕ್ರುಸೇಡುಗಳೂ ಮಹಮದೀಯರ ಜಿಹಾದ್‌ಗಳು ಪ್ರಪಂಚವನ್ನೆ ಅಲ್ಲಾಡಿಸಿಬಿಟ್ಟವು. ಹೊಸ ಭೂಭಾಗಗಳ ಶೋಧವಾಯಿತು. ಕೈಗಾರಿಕಾ ಕ್ರಾಂತಿಯಾಯಿತು... ಇನ್ನೂ ಏನೇನೊ ಆಯಿತು. ಪ್ರಪಂಚದ ಯಾವೊಂದು ಆಂದೋಳನವೂ ಯಾವೊಂದು ಚಳುವಳಿಯೂ ಭಾರತದ ಸ್ಥಾನಬೆಲೆಯ ಪರಂಪರೆಯನ್ನು ಮಾತ್ರ ಅಲ್ಲಾಡಿಸಲು ಸಾಧ್ಯವಾಗಲಿಲ್ಲವೆಂಬುದು ಎಂತಹ ಹೆಮ್ಮೆಯ, (ಎಮ್ಮೆಯ ಕೂಡ!) ಅಭಿಮಾನದ ಸಂಗತಿ!

ಗತಿಶೀಲ ಪರಂಪರೆ : ಪ್ರಪಂಚವನ್ನೇ ಗತಿಶೀಲವೆನ್ನುತ್ತಾರೆ. ಗತಿಶೀಲವಾಗದ್ದು ಕಾಲದ ಗತಿಯೊಂದಿಗೆ ಸ್ಪರ್ಧಿಸಲಾರದೆ ದುರ್ಗತಿಯನ್ನು ಹೊಂದಿ ಅಸ್ತಂಗತವಾಗಿ ಬಿಡುತ್ತದಂತೆ. ಸನಾತನಕ್ಕೆ ಸನಾತನವೂ ವಿನೂತನಕ್ಕೆ ವಿನೂತನವೂ ಆದ ಸ್ಥಾನಬೆಲೆ ಸಾವಿರಾರು ವರ್ಷಗಳಲ್ಲಿಯೂ ಸ್ಥಾವರವಾಗಿದೆ ಎಂಬುದೇ ಅದರ ಗತಿಶೀಲತೆಗೆ ಸಾಕ್ಷಿ

ದೇವತೆಗಳು ಹೋದರು, ರಾಜರು ಬಂದರು. ರಾಜರು ಹೋದರು, ಜನಪ್ರತಿನಿಧಿಗಳು ಬಂದರು. ಯಾರೇ ಹೋದರೂ ಯಾರೇ ಬಂದರೂ ಸ್ಥಾನಬೆಲೆ ಸ್ಥಾಣುವಾಗಿಯೇ ಉಳಿದುಕೊಂಡು ಬಂದಿದೆ. ಹಿಂದೆ ದೇವತೆಗಳ ಸ್ಥಾನಕ್ಕೆ ಇದ್ದ ಬೆಲೆಯೇ ರಾಜರ ಸ್ಥಾನಕ್ಕೂ ಇತ್ತು. ರಾಜರಿಗಿದ್ದ ಸ್ಥಾನಬೆಲೆಯೇ ಈಗಿನ ಜನಪ್ರತಿನಿಧಿಗಳಿಗೂ ಇದೆ! ಇಟ್ಟರೆ ವರ, ಕೊಟ್ಟರೆ ಶಾಪ! ಅವರನುಡಿಯೆ ಶಾಸನ, ಅವರ ನಡೆಯೆ ದಾರಿ, ಅವರು ಹೇಳಿದ್ದೇ ಸಿದ್ಧಾಂತ! ಇಂದಿಗೂ ತಮ್ಮ ಮೇಧಾಶಕ್ತಿಯ ಬಲದಿಂದಲೇ ಸ್ಥಾನ ಗಿಟ್ಟಿಸುವವರ ಸಂಖ್ಯೆಗೇನೂ ಕಡಿಮೆಯಿಲ್ಲ. ಹವಾನಿಯಂತ್ರಿತ ಚೇಂಬರು, ಕಾಂಟೆಸ್ಸಾ ಕಾರು, ಮೊಬೈಲ್ ಫೋನು, ಕರೆಗಂಟೆ, ಒಬ್ಬಿಬ್ಬರು ಗುಮಾಸ್ತರು, ವಾಸಕ್ಕೊಂದು ಬಂಗಲೆ- ಇವಿಷ್ಟು ಸಿಕ್ಕುವುದೇ ತಡ, ಉದ್ವೇಗ ಭಾವೋದ್ರೇಕಗಳನ್ನೆಲ್ಲ ತಣ್ಣಗಾಗಿಸಿ ಕುಂಯಿಗುಟ್ಟುವವರಿಲ್ಲವೆ? ಮುಂದಿನ ಹಂತದಲ್ಲಿ, ಸಿಕ್ಕ ಸ್ಥಾನವು ಆಚಂದ್ರಾರ್ಕವಾಗಿರಲೆಂಬ ಸದುದ್ದೇಶದಿಂದ ಬಗೆಬಗೆಯ ತಂತ್ರಗಳನ್ನು ಹೆಣೆಯಲು ತಮ್ಮ ಮೇಧಾಶಕ್ತಿಯನ್ನು ಬಳಸುವವರಿಲ್ಲವೆ?

ಅಧಿಕಾರವನ್ನು ಚಲಾಯಿಸಬಲ್ಲ ಸ್ಥಾನದಲ್ಲಿ ಇರುವವರಿಗಷ್ಟೇ ಅಲ್ಲ, ಅವರ ಹೆಂಡತಿಗೆ, ಮಕ್ಕಳಿಗೆ ಪರಿವಾರದವರಿಗೆ, ಅವರ ಮನೆಯ ನಾಯಿಬೆಕ್ಕುಗಳಿಗೂ ಅಸಾಮಾನ್ಯವಾದೊಂದು ಬೆಲೆಯ ಪ್ರಭಾವಳಿ ಪ್ರಾಪ್ತವಾಗುತ್ತದೆ. ಉಳಿದವರ ಹೆಂಡಂದಿರಿಗೆ ಇರದ ಒಂದು ವಿಶೇಷ ಬೆಲೆ ಸ್ಥಾನಗಳಲ್ಲಿ ಇರುವವರ 'ಮನೆಯವರಿಗೆ' ಸಿಗತೊಡಗುತ್ತದೆ. ಉಳಿದವರ ಮಕ್ಕಳಿಗೆ ಇರದೊಂದು ವಿಶೇಷವಾದ ಸ್ಥಾನ ಅವರ ಮಕ್ಕಳಿಗೆ ಸಿಗತೊಡಗುತ್ತದೆ. ಸ್ಥಾನದಲ್ಲಿ ಇರುವವರ ಪರಿವಾರದವರೆಲ್ಲ 'ಕೃಪೆ ತೋರುವ' ಹಂತಕ್ಕೆ ಏರಿಬಿಡುತ್ತಾರೆ. ರಾಜಾಧಿರಾಜರ ಕಾಲದಿಂದಲೂ ಈ ಸಂಪ್ರದಾಯ ಹೀಗೆಯೆ ಬೆಳೆದು ಬಂದಿದೆ. ಇಂದಿಗೂ ಹಾಗೆಯೆ ಉಳಿದಿದೆ. ಅಂಕಿಯ ಪಕ್ಕದಲ್ಲಿ ಬಂದು ಸೇರುವ ಸೊನ್ನೆಗಳಿಗೂ ಬೆಲೆ ಏರುವುದಿಲ್ಲವೆ ? ಇದೀಗ ಸ್ಥಾನಬೆಲೆಯ ಮಹತ್ವ!

ನನ್ನ ಸ್ನೇಹಿತರಾದ ಆ ಗಣಿತಜ್ಞರ ಪಾದಮೂಲದಲ್ಲಿ ಕುಳಿತು ಇಷ್ಟೆಲ್ಲ ಸಂಗತಿಗಳನ್ನು ಧ್ಯಾನಿಸಿದ ಬಳಿಕ ನನ್ನ ಪಕ್ಕದ ಮನೆಯ ರೈತನ ವ್ಯವಹಾರದಲ್ಲಿ ನನಗೆ ತಪ್ಪೇನೂ ಕಾಣಿಸಲಿಲ್ಲ.

ಅದು ಸ್ಥಾನದ ಬಲದಿಂದ ಅನೈಚ್ಛಿಕವಾಗಿ ನಡೆದುಹೋದ ವ್ಯವಹಾರವಾಗಿತ್ತೆಂದು ಮೊದಲಿಗೇ ಹೇಳಿದ್ದೇನೆ.

ಅಮಲು : ಸ್ಥಾನದ ಅಮಲು ಮಾದಕ ದ್ರವ್ಯಗಳ ಅಮಲಿಗಿಂತ ಕಡಿಮೆಯಾದದ್ದಲ್ಲ ವೆಂದು ನನಗೆ ಬಹಳ ಸಲ ಅನಿಸಿದೆ. ಸ್ಥಾನ ಸಿಕ್ಕ ಒಡನೆ ಮೊದಲು ತಲೆ ಆಕಾಶಕ್ಕೆ ಏರುತ್ತದೆ; ತಾನು ಈ ನೆಲದಲ್ಲಿ ಇಲ್ಲ. ಈ ನೆಲದ ಮತಧರ್ಮ-ಕಾನೂನುಗಳಿಗೆ ತಾನು ಅತೀತ ನೆಂಬಂತೆ ಅನಿಸುತ್ತದೆ. ಈ ನೆಲದ ಮೇಲೆ ಇರುವ ನರಮನುಷ್ಯರೆಲ್ಲ ಹುಳುಗಳಂತೆ ಕಾಣಿಸತೊಡಗು ತ್ತಾರೆ. ಈ ನರಹುಳುಗಳನ್ನು ಉದ್ಧರಿಸುವುದ ಕ್ಕೋಸ್ಕರ ತನಗೆ ಈ ಸ್ಥಾನ ಪ್ರಾಪ್ತವಾಗಿದೆ ಎಂಬ ಅರಿವು ಮೂಡತೊಡಗುತ್ತದೆ. ತಲೆಯ ಪಕ್ಕದಲ್ಲಿ ಎರಡು ಕೋಡು ಮೂಡತೊಡಗಿದಂತೆ ಭಾಸ ವಾಗುತ್ತದೆ. ಅದುವರೆಗೂ ಕೈಗಳಾಗಿದ್ದ ಅವರ ಕೈಗಳು ಸ್ಥಾನ ಪಡೆದ ಕೂಡಲೇ 'ವರದಹಸ್ತ' ಗಳಾಗುತ್ತವೆ.

ಆದರೆ ಮಾದಕ ಪದಾರ್ಥಗಳಿಗಿಲ್ಲದ ಒಂದು ಗುಣವಿಶೇಷ ಸ್ಥಾನದ ಅಮಲಿಗೆ ಇದೆ. ಮಾದಕ ಪದಾರ್ಥದ ಅಮಲು ಅದರ ಅವಧಿಯ ಬಳಿಕ ಇಳಿಯುತ್ತದೆ. ಮುಂದೆ ಸೇವಿಸುವವರೆಗೆ ಆ ಮನುಷ್ಯ ನಿಚ್ಚಳವಾಗಿರುತ್ತಾನೆ. ಆದರೆ ಸ್ಥಾನದ ಅಮಲು ಹಾಗಲ್ಲ. ಸ್ಥಾನವು ಚ್ಯುತ ವಾದರೂ ತಲೆಗೇರಿದ ಅಮಲು ಅಚ್ಯುತವಾಗಿ ರುತ್ತದೆ. ತಿವಿದು ರೂಢಿಯಾಗಿದ್ದ ಕೋಡುಗಳ ತಿಂಡಿ (ತುರಿಕೆ) ಇಳಿಯುವುದಿಲ್ಲ. ಕೊನೆಗೆ ಹಳೆಯ ಗೋಡೆ ಕಂಡರೂ ತಿವಿಯುವಂತಾ ಗುತ್ತದೆ. ಎತ್ತಿ ಎತ್ತಿ ರೂಢಿಯಾಗಿದ್ದ ವರದ ಹಸ್ತದ ತಿಂಡಿ (ತುರಿಕೆ) ಇಳಿದಿರುವುದಿಲ್ಲ. ಕೊನೆಗೆ ಮೈಯನ್ನು ಪರಚಿಕೊಳ್ಳುವಂತಾಗುತ್ತದೆ.

ಇಷ್ಟೆಲ್ಲ ಹೇಳಿದ ಬಳಿಕ ಕಡೆಯಲ್ಲಿ ನನ್ನ ಒಂದು ಮನವಿಯನ್ನು ನೀವು ತೆಗೆದು ಹಾಕಲಿಕ್ಕಿ ಲ್ಲವೆಂದು ಭಾವಿಸಿದ್ದೇನೆ. ನನ್ನ ಮನವಿಯಿಷ್ಟೆ : ಯಾವತ್ತಾದರೂ ನಿಮಗಿಂತ ವಯಸ್ಸಿನಲ್ಲಿ-ಯೋಗ್ಯತೆಯಲ್ಲಿ ಕಿರಿಯರು ನಿಮ್ಮನ್ನು ದಬಾಯಿಸ ಬಂದರೆ ನೀವು ತಾಳ್ಮೆ ಕಳೆದು ಕೊಳ್ಳದೆ, ಆತ ನಮ್ಮ ಪರಂಪರೆಯ ನಿಜವಾದ ಉತ್ತರಾಧಿಕಾರಿಯೆಂದು ಅರ್ಥ ಮಾಡಿಕೊಳ್ಳಿ, ಆ ವ್ಯಕ್ತಿ ಯಾರೆಂದು ನೋಡದೆ ಆತನ ಸ್ಥಾನ ಯಾವುದೆಂದು ನೋಡಿ ಸಮಾಧಾನ ತಂದುಕೊಳ್ಳಿ!

> ಸ್ಥಾನಬಲಕುಂಟು ಕೊನೆ, ಬಿದ್ದಾಗ ನೆಲವೆ ಗತಿ
> ಜ್ಞಾನಬಲಕ್ಕಿಲ್ಲ ಮಿತಿ, ಏರುತಿರೆ ಬಾನೆ ಗಡಿ
> ಮಾನಬಲ ಜ್ಞಾನದಿಂದೊದಗುವುದು,
> ಗಳಿಸಲಿದ ಧ್ಯಾನಬಲವೇ ಶರಣು ಕಿಲಮನುಜ
> ಅತ್ರಿಸೂನು.

ಅಜ್ಞಾನ, ಆಶಿಸ್ತು, ಮನುಷ್ಯನ ತೊಂದರೆಗಳಿಗೆ ಮುಖ್ಯ ಕಾರಣ.

-ಕೌಟಿಲ್ಯ

ಪುಸ್ತಕ ಪರಿಚಯ

ಜೋಗವಾ : ಸಾಮಾಜಿಕ ಕಾದಂಬರಿ. ಮೂಲ ಮರಾಠಿ ಶ್ರೀವಿಜಯಕುಮಾರ್ ದಳವಿ. ಕನ್ನಡ ಅನುವಾದ ಶ್ರೀ ಶಾ.ಮಂ. ಕೃಷ್ಣರಾಯ. ಪ್ರಕಾಶಕರು-ವಿಶ್ವಭಾರತಿ ಪ್ರಕಾಶನ; ಮಡಗಾಂವ, ಗೋವಾ. ಪುಟಗಳು ೧೯೨, ಬೆಲೆ ರೂ.೬೦-೦೦.

ನಮ್ಮ ಜನರಲ್ಲಿ ನಾನು ಕಂಡದ್ದು ದೇವರು ಮತ್ತು ದೆವ್ವದ ಬಗ್ಗೆ ಇರುವ ನಂಬಿಕೆ ಮತ್ತು ಭಯ. ಸಣ್ಣ ಮಕ್ಕಳಲ್ಲಿಯೇ ಈ ಬಗೆಯ ಭಯ ಹಾಗೂ ನಂಬಿಕೆಯನ್ನು ನಾವು ಕಾಣ ಬಯಸುತ್ತೇವೆ. ಹಾಗೂ ನಮ್ಮ ಹಿರಿಯರು ಮಕ್ಕಳಿಗೆ ಬೋಧಿಸುವ ಮೊದಲ ಪಾಠವೂ ಇದೇ ಆಗಿದೆ. ಈ ಹಿರಿಯರೂ ಸಹ ತಮ್ಮ ಹಿರಿಯ ರಿಂದ ಕಲಿತದ್ದು ಭಯ ಹಾಗೂ ನಂಬಿಕೆ. ಇಲ್ಲಿ ವಿಚಾರಕ್ಕೆ ಜಾಗವಿಲ್ಲ. ವಿವಾದಕ್ಕೆ, ತರ್ಕಕ್ಕೆ ನೂರಾರು ಮಾರ್ಗಗಳಿದ್ದರೂ ಅವುಗಳಿಗೆ ಆಸ್ಪದವಿಲ್ಲ. ಪ್ರಶ್ನಾತೀತವೆನ್ನುವಂತೆ ಕಣ್ಣು ಮುಚ್ಚಿ ಕೆಲವು ಹಳೆಯ ಆಚಾರಗಳನ್ನು ಹಾಗೂ ಹಿರಿಯರು ಹೇಳಿದುದನ್ನೂ ಪಾಲಿಸಬೇಕಾಗು ತ್ತದೆ , ಹಾಗೇ ಪಾಲಿಸಿಕೊಂಡು ಬರಲಾಗಿದೆ. ನಾವು ಯಾರೂ ದೇವರನ್ನಾಗಲಿ, ದೆವ್ವವನ್ನಾಗಲಿ ಕಣ್ಣಾರೆ ನೋಡಿಲ್ಲ , ಕೈಯಾರೆ ಹಿಡಿದಿಲ್ಲ ಮುಟ್ಟಿಲ್ಲ. ಆದರೂ ಧೈರ್ಯವಾಗಿ ದೇವರು, ದೆವ್ವ ಇವು ಇಲ್ಲ ಎಂದು ಹೇಳುವ ಎದೆಗಾರಿಕೆ ನಮಗಿಲ್ಲ. ಇವುಗಳ ಭಯದಿಂದಲೇ (ಪ್ರೀತಿ ಯಿಂದಾಗಲಿ, ಭಕ್ತಿಯಿಂದಾಗಲಿ ಅಲ್ಲ) ನಾವು ಎಲ್ಲಾ ಕರ್ಮಗಳನ್ನು ಆಚರಿಸುತ್ತೇವೆ. ಇಲ್ಲಿ ಸ್ವಾರ್ಥ, ಸ್ವರಕ್ಷಣೆ, ಸುಖಾಪೇಕ್ಷೆ ಮಾತ್ರವಿದ್ದು ನಿಜವಾದ ವಿಚಾರ, ಜ್ಞಾನ , ತಿಳುವಳಿಕೆ ಗೌಣವಾಗಿರುತ್ತದೆ. ಬುದ್ಧಿಪೂರ್ವಕವಾಗಿಯೇ ಸ್ವಾರ್ಥಸಾಧನೆಗಾಗಿ ಕೆಲವೊಂದು ದುಷ್ಟ ಆಚರಣೆಗಳನ್ನು ನಾವು ಆಚರಿಸಿಕೊಂಡು ಬರುತ್ತಿದ್ದೇವೆ. ಈಗಲೂ ಕೆಲವು ಕೆಟ್ಟ ಆಚಾರಗಳನ್ನು ನಾವು ಬಿಟ್ಟಿಲ್ಲ. ಅದರಲ್ಲಿ ಜೋಗತಿಯಾಗುವುದೂ ಒಂದು.

ಕರ್ನಾಟಕದ ಬೆಳಗಾಂವಿ ಜಿಲ್ಲೆಗೆ ಸೇರಿದ ಸವದತ್ತಿ ಒಂದು ತಾಲ್ಲೂಕು. ಸುಮಾರು ೧೦ ರಿಂದ ೧೩ರ ಶತಮಾನದವರೆಗೆ ಇದು ರಟ್ಟರ ಮೊದಲ ರಾಜಧಾನಿಯೂ ಆಗಿತ್ತೆನ್ನುವರು. ಸವದತ್ತಿಯ ಗುಡ್ಡದ ಮೇಲೆ ಈಗಲೂ ರಟ್ಟರ ಕಾಲದ ಕೋಟೆಯ ಅವಶೇಷವಿದೆ. ೧೯೬೧ -೬೨ರಲ್ಲಿ ನಾನು ಉದ್ಯೋಗ ನಿಮಿತ್ತ ಬೆಳಗಾಂವಿಯಲ್ಲಿದ್ದು ಸವದತ್ತಿಗೆ ಅನೇಕ ಸಾರಿ ಭೇಟಿ ನೀಡಿದ್ದೆ. ಕುತೂಹಲಕ್ಕಾಗಿ ಈ ಜೋಗತಿ ಪದ್ಧತಿ ಬಗ್ಗೆ ಅಲ್ಲಿಯವರಿಂದ ಒಂದಿಷ್ಟು ಕೇಳಿ ತಿಳಿದುಕೊಂಡಿದ್ದೆ. ಯಲ್ಲಮ್ಮನ ಗುಡ್ಡಕ್ಕೆ ಹೋಗಿ ಅಲ್ಲಿಯ ದೇವಿದರ್ಶನ ಸಹ ಮಾಡಿದ್ದೆ. ಪರಶುರಾಮನ ಕತೆಯನ್ನು ಈ ಯಲ್ಲಮ್ಮನ ಸಂಬಂಧದೊಡನೆ ಹೇಳಿ ಇದನ್ನು ಪರಶುಘಡ ಎಂದೂ ಕರೆಯುತ್ತಾರೆ. ಹಾಗೇ ಜಮದಗ್ನಿ ಋಷಿ ಹಾಗೂ ಅವನ ಪತ್ನಿ ರೇಣುಕ ಇವರ ಬಗ್ಗೆಯೂ ಸಂಬಂಧ ಕಲ್ಪಿಸಿ ಕಥೆ ಹೇಳುತ್ತಾರೆ. ಅಲ್ಲಿನ ಜೋಗತಿಯರನ್ನು ಅವರ ಕೂಡ ಇರುವ ಗಂಡಸು ಜೋಗತಿಗಳನ್ನೂ ನಾನು ಗಮನಿಸಿದ್ದೆ. ಗಂಡಸಾಗಿ ಹುಟ್ಟಿ ಹೆಣ್ಣಿನಂತೆ ಹಾವಭಾವ ತೋರುವ, ಸೀರೆ ಕುಪ್ಪಸ, ಬಳೆ ತೊಟ್ಟು ಹರಸಿನ ಕುಂಕುಮ ಹಚ್ಚಿಕೊಂಡು ತಲೆಗೆ ಹೂವು ಮುಡಿದು ನರ್ತಿಸುವ ಅವರು ಒಂದು ಬಗೆ ಯಲ್ಲಿ ನಮಗೆ ವಿಚಿತ್ರವೆನಿಸಿದರೂ ಅಲ್ಲಿಯ ಮಂದಿಗೆ ಅದು ಸಹಜ ಹಾಗೂ ದೇವರ ಹರಕೆಯಾಗಿದೆ. ಮೈಸೂರಿನ ಕಡೆ ಅಂತಹ ಮಂದಿ ವರ್ಷಕ್ಕೊಮ್ಮೆ ಬಾಬಯ್ಯನ ಹಬ್ಬ (ಮೊಹರಂ) ಹಾಗೂ ಹೋಳಿಹಬ್ಬದ ಕಾಲದಲ್ಲಿ ಕಾಸು ಕೇಳಲು ಬರುವ ನೆಪದಲ್ಲಿ ಕಂಡು ಬರುತ್ತಾರೆ.

ಈ ಬಗೆಯ ಗಟ್ಟಿ ಮುಟ್ಟಾದ ನಪುಂಸಕರನ್ನು ಹೊಗಳರು ಹಾಗೂ ಇತರೇ ರಾಜರು ತಮ್ಮ ರಾಣೀ ವಾಸದಲ್ಲಿ ಕಾವಲುಗಾರರನ್ನಾಗಿ ನೇಮಿಸಿಕೊಳ್ಳುತ್ತಿದ್ದದ್ದುಂಟು.

ಈ ಬಗೆಯ ಅನೇಕ ವಿಚಾರಗಳನ್ನು ಹಾಗೂ ಹಳೆಯ ನೆನಪುಗಳು ನನ್ನ ತಲೆಯಲ್ಲಿ ಹಾಯುವಂತೆ ಮಾಡಿದ ಕಾದಂಬರಿ ಜೋಗವಾ. ಜೋಗತಿಯರು ದೇವರ ಹೆಸರಿನಲ್ಲಿ ಸಾರ್ಥಕ ಬಾಳುವೆ ಮಾಡಬೇಕೆಂದು ಹಾಗೂ ಮೋಕ್ಷ ಸಾಧನೆಗೆ ಸಹಕಾರಿಯೆಂದೂ ಒಂದುಬಗೆಯ ಸನ್ಯಾಸಿ ಜೀವನವೆಂದವರೂ ಇದ್ದಾರೆ.. ಆದರೆ ನಿಜವಾಗಿ ನೋಡಿದರೆ ಅವರ ಬಾಳು ಸಾಮಾನ್ಯ ಸೂಳೆಯರಿಗಿಂತಲೂ ನರಕ ಸದೃಶವಾದದ್ದು. ಮೋಕ್ಷ, ಸ್ವರ್ಗ ಕಾಣಲು ಬಂದು ನಿಜಜೀವನದಲ್ಲಿ ಬದುಕಿನುದ್ದಕ್ಕೂ [illegible]ರವ ನರಕ ಅನುಭವಿಸಿ ಕೊನೆಯಲ್ಲಿ ಕೆಟ್ಟ ಸಾವನ್ನು ಕಾಣುವ ಈ ಜನರನ್ನು ಈಗಲೂ ನಾವು ಕಾಣಬಹುದು. ಇದೇ ಕಾದಂಬರಿಯಲ್ಲಿ ಬರುವ ಜೋಗತಿ ಗಂಗವ್ವನ ಹೆಣ ನಾರುತ್ತಾ ಬೀಳುವುದೇ ಒಂದು ಬಗೆಯಲ್ಲಿ ಇತರ ಜೋಗತಿಯವರ ಜೀವನ ಸಂಜೆಯ ಸತ್ಯ ಸಂಗತಿಯಾಗಿದೆ ಎನ್ನಬಹುದು. ಒಂದು ಸಾಮಾನ್ಯ ಘಟನೆ, ಜೀವನದ ಸಹಜ ಕೊರಕೆಯಂತೆ ಕಾಣುವ ಮಕ್ಕಳಿಲ್ಲದ ವಿಷಯ ಕಾದಂಬರಿಯ ಮೊದಲ ಚಿತ್ರ ನಮ್ಮ ಮುಂದೆ ಬರುತ್ತದೆಯಾದರೂ ಅದೇನೂ ಮಹತ್ವದ್ದು ಅನಿಸುವುದಿಲ್ಲ. ಮಕ್ಕಳಾಗದ ಭಯ, ತಾನೆಲ್ಲಿ ಬಂಜೆ ಎನಿಸಕೊಳ್ಳಬೇಕಾಗುತ್ತದೋ ಎನ್ನುವ ಹೆಣ್ಣಿನ ಕೊರಗು, ತಾಯ್ತನದ ತುಡಿತ ಇವೆಲ್ಲ ಸೇರಿ ಗಂಗವ್ವಳಂತಹ ಜೋಗತಿಯ ಮಾತಿಗೆ ಯಮುನಾ ಕಿವಿಕೊಟ್ಟು ಕೆಡುತ್ತಾಳೆ. ಮಕ್ಕಳಾಗಲು ದೇವಿ ಕೃಪೆ ಬೇಕು ಎಂಬ ನಂಬಿಕೆಯ ಬೀಜವನ್ನು ಗಂಗವ್ವ ಯಮುನೆಯ ಮನದಲ್ಲಿ ಆಳವಾಗಿ ಬಿತ್ತಿಬಿಡುತ್ತಾಳೆ. ಮುಂದೆ ಆ ಬೀಜ ವಿಷವೃಕ್ಷವಾಗಿ ಬೆಳೆದು ಮೂಢನಂಬಿಕೆಯ ಫಲ ಬಿಟ್ಟು ಸುತ್ತಲಿನವರ ಮೇಲೆ ತನ್ನ ಕರಿನೆರಳನ್ನು ಬೀರಿ ಬೆಳಕನ್ನು ಅಳಿಸಿ ಕತ್ತಲನ್ನು ತುಂಬಿ ಬಿಟ್ಟು ಅದರ ಆಶ್ರಯ ಕೋರಿ ಬಂದವರ ಬಾಳೆಲ್ಲ ಹಾಳಾಗಿ ಹೋಗುತ್ತದೆ.

ಮಕ್ಕಳಿಗಾಗಿ ಯಮುನಾ ಜೋಗತಿಯಾಗುತ್ತಾಳೆ, ಗಂಡ ಶಂಕರನಿಗೆ ಮನಸ್ಸಿಲ್ಲದಿದ್ದರೂ ಯಮುನೆಯಷ್ಟು ನಂಬದಿದ್ದರೂ ಜೋಗತಿಯಾಗಲು ಸಮ್ಮತಿಸಿದುದೇ ಒಂದು ಬಗೆಯ ಅಪರಾಧವೆನಿಸುತ್ತದೆ. ಗ್ರಾಮದ ಸರಪಂಚ ದೇಶಪಾಂಡೆ ಬಗ್ಗೆ ಜೋಗತಿ ಗಂಗವ್ವ ಶಾಪ ಹಾಕುತ್ತಾಳೆ, ಅವನನ್ನು ದ್ವೇಷಿಸುತ್ತಾಳೆ, ಅಪನ ಮಗ ಹಾವು ಕಡಿದು ಸತ್ತಾಗಲೂ ಸಹಾನುಭೂತಿ ತೋರದೆ ಅವನು ಜೋಗತಿಯರನ್ನು ಗೌರವಿಸದಿದ್ದಕ್ಕೆ ತಕ್ಕ ಶಿಕ್ಷೆ ಎಂದೇ ಭಾವಿಸುತ್ತಾಳೆ. ಗ್ರಾಮದ ಜನ ಸರಪಂಚನ ಮಾತಿಗೆ ಕಿವಿಗೊಡದೆ ಹೋದ ಕಾರಣವೆಂದರೆ ಗಂಗವ್ವ ಅವರಲ್ಲಿ ಬಿತ್ತಿದ್ದ ದೇವರ ಶಾಪದ ಭಯ, ಹಾಗೂ ಮೌಢ್ಯದ ಪರಮಾವಧಿಯಾಗಿ ಅವರು ದೇವಿಕೃಪೆಗಾಗಿ ಹರಕೆ ಹೊರುತ್ತಾರೆ. ಮುಗ್ಧ ಜನರನ್ನು ಹೇಗೆ ಕೆಲವು ಮಂದಿ ಹಾಳು ಮಾಡುತ್ತಾರೆ ಅದಕ್ಕಾಗಿ ಅವರು ಹೇಗೆ ದೇವರು, ಹರಕೆ ಇವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಾರೆ ಎಂಬುದನ್ನು ಈ ಕಾದಂಬರಿಯಲ್ಲಿ ನಾವು ಕಾಣಬಹುದು. ಹಾಗೆ 'ಆತುರ'ವೆಂಬುದು, ತಾಳ್ಮೆಗೆಡುವುದು ಎಷ್ಟು ಅನರ್ಥಕಾರಿ ಎಂಬುದನ್ನು ಕಾದಂಬರಿಯಲ್ಲಿ ಬರುವ ಯಮುನಾ, ಶಂಕರ, ಅವನ ತಾಯಿ ಮುಂತಾದವರ ಮೂಲಕ ಕಾಣಬಹುದು. ಮಕ್ಕಳಾಗಲಿಲ್ಲ ಎನ್ನುವ ಆತುರ. ಅನಂತರ ಹೆರಿಗೆ ಕಾಲದಲ್ಲಿ ಉಂಟಾದ ಹೆದರಿಕೆಯಿಂದಾಗಿ ಹಾಗೂ ತಾಳ್ಮೆಗೆಟ್ಟು ದೇವರಿಗೆ ಅವರು ಹೊರುವ ಹರಕೆ ಇವೇ ಎಲ್ಲಾ ದುರಂತಕ್ಕೆ ಮೂಲವಾಗುತ್ತವೆ. ಮಕ್ಕಳಾಗದ್ದಕ್ಕೆ ಯಮುನ ಜೋಗತಿಯಾದರೆ, ಹೆರಿಗೆ ಕಾಲದಲ್ಲಾದ ನೋವಿಗೆ ಹೆದರಿ ತಾಳ್ಮೆಗೆಟ್ಟು ಗಂಗವ್ವನ ಮಾತಿಗೆ ಮರುಳಾಗಿ ಹುಟ್ಟುವ ಮಕ್ಕಳನ್ನು ದೇವರಿಗೆ ಬಿಡಲು ಹರಕೆ ಹೊರುತ್ತಾರೆ. ಪಾಪ ಏನೂ ಅರಿಯದ

ಹಸುಗೂಸುಗಳು ದೇವರ ಸ್ವತ್ತಾಗುತ್ತವೆ. ಗಂಡು ಮಗು ಯಲ್ಲಪ್ಪನನ್ನು ಹರಕೆಯಂತೆ ಹಿಜಡಾ ಮಾಡಿಸುವ ಶಾಸ್ತ್ರವಂತೂ ಬಹು ಕ್ರೂರವಾದ ಅಮಾನವೀಯ ಘಟನೆ. ಇದನ್ನು ವಿರೋಧಿಸಿದವರಲ್ಲಿ ಯಮುನೆಯ ತಂದೆ ಹಾಗೂ ದೇಶಪಾಂಡೆ ಇಬ್ಬರೇ. ಆದರೆ ಅವರು ಬರುವಷ್ಟರಲ್ಲಿ ಶಾಸ್ತ್ರ ಮುಗಿಸಿ ಹಿಜಡಾಗಳು ಮನೆಯಿಂದ ಹೊರಗೆ ಬರುತ್ತಾರೆ, ಮಗು ಜೋರಾಗಿ ಅಳುತ್ತದೆ. ಎಂತಹ ಹೃದಯ ಹೀನ ಕೃತ್ಯ ದೇವರ ಹೆಸರಿನಲ್ಲಿ ನಡೆಯಿತು ಎಂದರೆ ಈಗಲಾದರೂ ಜನ ಅವನ್ನೆಲ್ಲಾ ಸಂಪೂರ್ಣ ಬಿಟ್ಟಿದ್ದಾರೆ ಎಂಬುದರಲ್ಲಿ ಅನುಮಾನವಿದೆ. ಹೆಣ್ಣುಮಗಳು ರೇಣುಕಾ ಹಿರಿಯರ ತಪ್ಪಿನಿಂದಾಗಿ ಅದರಲ್ಲೂ ಗಂಗವ್ವನಂತಹ ಮೂಢ ಹೆಂಗಸಿನಿಂದ ಪ್ರಭಾವಿತಳಾದ ಅವಳ ತಾಯಿ ಯಮುನ ಮುಗ್ಧ ಹೆಂಗಸು ಮಾಡುವ ಹರಕೆಯಿಂದ ಅವಳ ಮುಂದಿನ ಬದುಕು ದಾರುಣವಾಗಿ ದುರಂತ ಕಾಣುತ್ತದೆ. ತಮ್ಮ ತಪ್ಪನ್ನು ಅರಿಯದೆ ಹೋದದ್ದರಿಂದಾಗಿ ಯಾವುದು ಆಗಬಾರದೆಂದು ತಂದೆತಾಯಿ ಎಣಿಸಿದ್ದರೋ ಅದೇ ನಡೆದುಹೋಗುವುದು, ಹೆಣ್ಣು ಹೆತ್ತವರ ಕರುಳು ಚುರುಕ್ ಎನ್ನುವಂತೆ ರೇಣುಕಳನ್ನು ಕಾದಂಬರಿಯಲ್ಲಿ ಲೇಖಕರು ಚಿತ್ರಿಸಿದ್ದಾರೆ.

ಕಾದಂಬರಿ ಕೊನೆಯಲ್ಲಿ ಓದುತ್ತಾ ಹೋದಂತೆ ಯಲ್ಲಪ್ಪ, ರೇಣುಕ ಇವರ ಜೀವನ ನೆಮ್ಮದಿ ಕಾಣಬಹುದೇನೋ ಎನ್ನುವಷ್ಟರಲ್ಲಿ ತನ್ನ ತಂಗಿಯ ಮೇಲೆ ನಡೆವ ದೌರ್ಜನ್ಯ ತಡೆಯಲಾಗದೆ ಯಲ್ಲಪ್ಪ ಆತ್ಮಹತ್ಯೆ ಮಾಡಿ ಕೊಳ್ಳುವ ಹಾಗೂ ಗೋವಿಂದ ಸಾತಪುತೆ ಎಂಬ ಮೋಸಗಾರ ಯುವಕ ಬಂದು ಸರಪಂಚ ದೇಶಪಾಂಡೆಯವರನ್ನು ನಂಬಿಸಿ ರೇಣುಕೆಗೆ ಹೊಸಬಾಳು ಕೊಡುವ ನೆಪದಲ್ಲಿ ಮದುವೆಯಾಗಿ ಮುಂದೆ ಅವಳನ್ನು ವೇಶ್ಯಾವೃತ್ತಿಗೆ ಮಾರಿಬಿಡುವ ಘಟನೆಯಂತೂ ಬಹು ಘೋರದುರಂತ. ಸಹೃದಯರೆಲ್ಲ ಯಲ್ಲಪ್ಪ ಹಾಗೂ ರೇಣುಕಳ ಬಗ್ಗೆ '' ಅಯ್ಯೋ ಯಾರೊ ಮಾಡಿದ ಪಾಪಕ್ಕೆ, ಯಾರೋ ಮಾಡಿದ ಮೋಸಕ್ಕೆ, ಅನ್ಯಾಯವಾಗಿ ಯಾವ ಪಾಪವನ್ನೂ ಮಾಡದ ಈ ಮಕ್ಕಳು ಬಲಿಯಾದವಲ್ಲ'' ಎಂಬ ಮರುಕ ಹುಟ್ಟದೆ ಹೋಗುವುದಿಲ್ಲ. ಕಾದಂಬರಿಯಲ್ಲಿ ಕೆಲವೊಂದು ಪ್ರಶ್ನೆ ಮೂಡುವ ವಿಷಯಗಳೂ ಉಂಟು. ಯಾರೋ ಒಬ್ಬ ಆಗಂತುಕ ಹಳ್ಳಿಗೆ ಬಂದು ದೇಶಪಾಂಡೆಯನ್ನು ನಂಬಿಸಿ ರೇಣುಕಾಳನ್ನು ಮದುವೆಯಾಗುವ ವಿಷಯ ಹಾಗೂ ಅವನ ಬಗ್ಗೆ ಹೆಚ್ಚು ವಿಚಾರ ಮಾಡದೆ ಹೆಣ್ಣಿನ ಕಡೆಯವರು ಮದುವೆ ಮಾಡಿಕೊಟ್ಟಿದ್ದು ಸ್ವಲ್ಪ ಸರಿಯಲ್ಲವೆನಿಸುತ್ತದೆ.

ದೇವರ, ಧರ್ಮದ ಹೆಸರಿನಲ್ಲಿ ನಮ್ಮ ಸಮಾಜದಲ್ಲಿ ಇರುವ ಮೂಢ ನಂಬಿಕೆಗಳ ಬಗ್ಗೆ ಅದರಿಂದ ಆಗುವ ಮಾನವ ಹಿಂಸೆ, ಕ್ರೌರ್ಯ, ಅನ್ಯಾಯ ಇವುಗಳ ಬಗ್ಗೆ ಜೋಗವಾ ಕಾದಂಬರಿ ಬಹು ಸರಳವಾಗಿ ವಿವರಣೆ ನೀಡುವುದು. ಒಂದು ಒಳ್ಳೆಯ ಮರಾಠಿ ಕಾದಂಬರಿಯನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡಿಗರ ಕೈಗಿತ್ತ ಶಾ.ಮ.ಕೃಷ್ಣರಾಯರು ಒಳ್ಳೆ ಕೆಲಸ ಮಾಡಿದ್ದಾರೆ.

ಡಾ.ನರೇಂದ್ರ ದಾಭೋಳಕರ್ ಅವರು.ಈ ಪುಸ್ತಕಕ್ಕೆ ಬರೆದಿರುವ ಮುನ್ನುಡಿ ಸಹ ಮನನೀಯವಾದದ್ದಾಗಿದೆ.

ಬಿ.ಶಾಮಸುಂದರ, ನಂ.೮೩೩,ಲೋಕರಂಜನ

ಮಹಲ್ ರಸ್ತೆ ೩ನೆ ತಿರುವು,

ಇಟ್ಟಿಗೆ ಗೂಡು ಮೈಸೂರು -೫೭೦ ೦೧೦

ಪುಸ್ತಕ ವಿಮರ್ಶೆ

ನಿಮ್ಮ ಆಹಾರ ಮತ್ತು ನೀವು: ಕೆ.ಟಿ. ಅಚ್ಚಯ್ಯ ಅನುವಾದ ಡಾ. ಎನ್. ಮಧ್ಯಸ್ಥ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ: ಮೊದಲ ಮುದ್ರಣ ೧೯೯೫, ಬೆಲೆ: ರೂ ೩೦.೦೦

''ಆರೋಗ್ಯವೇ ಭಾಗ್ಯ'' ಎಂಬ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಸಾಮಾನ್ಯವಾಗಿ ಹಿಂದಿನ ಕಾಲದವರೆಲ್ಲರೂ ನೂರು ವರ್ಷ ಕಾಲ ಬದುಕುತ್ತಿದ್ದರು. ಅವರಿಗೆ ದೇಹದ ಅಂಗಾಂಗಗಳೆಲ್ಲವೂ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದವು. ಕಣ್ಣು ಕಾಣಸುತ್ತಿದ್ದವು. ಕಿವಿಗಳು ಕೇಳಿಸುತ್ತಿದ್ದವು. ಇದಕ್ಕೆಲ್ಲಾ ಕಾರಣವೆಂದರೆ ಅವರು ತಮ್ಮ ಶರೀವನ್ನು ಕಾಪಾಡಿಕೊಳ್ಳುತ್ತಿದ್ದ ರೀತಿ. ಅವರು ರೋಗಗಳು ಎಂದರೆ ಗೊತ್ತಿರಲಿಲ್ಲ. ದವಾಖಾನೆಗೂ ಹೋಗುತ್ತಿರಲಿಲ್ಲ. ಏನಾದರೂ ಜ್ವರ, ಕೆಮ್ಮು ಇತ್ಯಾದಿ ಬಂದಾಗ ತಾವೇ ಸ್ವತಃ ತಯಾರಿಸಿದ ಕಷಾಯವನ್ನು ಕುಡಿದು ರೋಗ ವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರು. ಯಾವುದೇ ಕೆಟ್ಟ ಅಭ್ಯಾಸಗಳು ಅವರಲ್ಲಿರಲಿಲ್ಲ. ಆದರೆ ಇಂದು ಹಾಗಿಲ್ಲ.

ಶರೀರ ನಮಗೊಂದು ದೇವರು ಕೊಟ್ಟ ವರ. ಅದು ರೋಗ ರಹಿತವಾಗಿದ್ದಾಗ ಮಾತ್ರ ಬದಕು ಸಂತೋಷದಾಯಕವಾಗುತ್ತದೆ. ಇಲ್ಲದಿದ್ದರೆ ಬದುಕು ವ್ಯರ್ಥವಾಗುತ್ತದೆ. ಆದ್ದರಿಂದ ನಾವು ನಮ್ಮ ಶರೀರದ ರಕ್ಷಣೆ ಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಮಾನವನ ಶರೀರ ಬೇರೆ ಯಂತ್ರಗಳ ರೀತಿಯಲ್ಲಿರದೆ ಅದೊಂದು ಅದ್ಭುತ ಯಂತ್ರವಾಗಿದೆ. ಅದರ ರಕ್ಷಣೆಯನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕಾದರೆ ನಾವು ಅನೇಕ ಸರಳ ಆರೋಗ್ಯ ಸೂತ್ರಗಳನ್ನು ಪಾಲಿಸಬೇಕಾಗುತ್ತದೆ.

'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಗಾದೆ ಮಾತೊಂದಿದೆ. ನಾವು ಮಾಡುವ ಊಟ ಹಿತಮಿತವಾಗಿರಬೇಕು. ನಾವು ಸೇವಿಸುವ ಆಹಾರ ಸ್ವಚ್ಛವಾಗಿಯೂ, ಪುಷ್ಟಿದಾಯಕವಾಗಿಯೂ ಇರಬೇಕು. ನಾವು ಸೇವಿಸುವ ಆಹಾರವನ್ನು ನಿಗದಿತ ಸಮಯಕ್ಕೆ ಅನುಗುಣವಾಗಿ ಸೇವಿಸಬೇಕು. ಆಹಾರವನ್ನು ಸೇವಿಸುವಾಗ ಅವಸರವಾಗಿ ಸೇವಿಸದೆ ಶಾಂತ ರೀತಿಯಲ್ಲಿ ಊಟ ಮಾಡುವುದು ಆರೋಗ್ಯಕ್ಕೆ ತುಂಬಾ ಒಳ್ಳೆಯದು.

ಶರೀರ ಎಲ್ಲಾ ಸಾಧನೆಗಳ' ಮಾಧ್ಯಮ. ''ಸ್ವಸ್ಥ ಶರೀರದಲ್ಲಿ, ಸ್ವಸ್ಥ ಮನಸ್ಸು ಎಂಬ ಮಾತು ಸತ್ಯ ವಾದದು. ಆದ್ದರಿಂದ ಶರೀರ ಸಂಪತ್ತನ್ನು ಕೆಡದಂತೆ, ವ್ಯಯವಾಗದಂತೆ ನಾವು ರಕ್ಷಿಸಿಕೊಳ್ಳ ಬೇಕು. ಏಕೆಂದರೆ ಇಂದಿನ ಆರೋಗ್ಯವಂತ ವ್ಯಕ್ತಿಗಳೇ ಮುಂದೆ ದೇಶದ ಆಸ್ತಿಯಾಗ ಬಹುದು. ಆರೋಗ್ಯವಂತ ವ್ಯಕ್ತಿಗಳು ಆಗ ಬೇಕಾದರೆ ನಾವು ಸೇವಿಸುವ ಆಹಾರ, ಸ್ವಚ್ಛವಾಗಿಯೂ ಪೌಷ್ಟಿಕಾಂಶಗಳಿಂದ ಕೂಡಿದುದೂ ಆಗಿರಬೇಕು. ನಾನು ಸೇವಿಸುವ ಆಹಾರದಿಂದ ಶಕ್ತಿ ಬರುತ್ತದೆ. ಬುದ್ಧಿ ಮನಸ್ಸು ಬೆಳೆಯಲು ಸಹಾಯವಾಗುತ್ತದೆ. ನಮ್ಮ ದೇಹದ ಯಾವುದೇ ಅಂಗಗಳು ಕೆಲಸ ನಿರ್ವಹಿಸಬೇಕಾದರೆ ಶಕ್ತಿ ಬೇಕು. ಈ ಶಕ್ತಿ ಹೇಗೆ ಬರುತ್ತದೆ. ನಮ್ಮ ದೇಹಕ್ಕೆ ಶಕ್ತಿಯನ್ನೊದಗಿಸುವುದು ಆಹಾರ.

ಶ್ರೀಯುತರಾದ ಕೆ.ಟಿ. ಅಚ್ಚಯ್ಯನವರು ತೈಲ ಮತ್ತು ಮೇದಸ್ಸು, ಡೈರಿ ಉತ್ಪನ್ನಗಳು, ಪ್ರೋಟೀನುಗಳು ಮುಂತಾದ ಅನೇಕ ಕ್ಷೇತ್ರದಲ್ಲಿ ಅನುಭವ ಪಡೆದಂತಹ ವ್ಯಕ್ತಿ. ಹೈದರಾಬಾದಿನಲ್ಲಿರುವ ರೀಜನಲ್ ರಿಸರ್ಚ್ ಲ್ಯಾಬೋರೇಟರಿಯಲ್ಲಿ ಒಂದು ಮುಖ್ಯವಾದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ ಕೆಲಸ ನಿರ್ವಹಿಸಿರು

ವಂತಹವರು. ಮುಂಬೈನ ಪ್ರೋಟೀನ್ ಫುಡ್ಸ್ ಎಂಡ್ ನ್ಯೂಟ್ರಿಷನ್ ಡೆವಲಪ್‌ಮೆಂಟ್ ಅಸೋಸಿಯೇಷನ್ನಿನ ಎಕ್ಸಿಕ್ಯೂಟೀವ್ ಡೈರೆಕ್ಟರ್ ಆಗಿ ಅನೇಕ ವರ್ಷ ಸೇವೆ ಸಲ್ಲಿಸಿರುವಂತಹವರು. ವಿಶ್ವಸಂಸ್ಥೆಯ ವಿಶ್ವವಿದ್ಯಾನಿಲಯ ಕಾರ್ಯಕ್ರಮದ ಕನ್ಸಲ್ಟೆಂಟ್ ಆಗಿ ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಕೆಲಸ ಮಾಡಿ ಈಗ ಅವರು ಎಮಿರೆಟಸ್ ಪ್ರೊಫೆಸರ್ ಆಗಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ.

ಭಾರತೀಯರು ಆರೋಗ್ಯದಿಂದ ಇರಬೇಕಾದರೆ ನಮ್ಮ ದೇಹಕ್ಕೆ ಏನೇನು ಆಹಾರಗಳು ಬೇಕು? ಅವುಗಳಲ್ಲಿ ಎಷ್ಟು ಪೋಷಕಾಂಶಗಳು ಇರಬೇಕು? ಇವುಗಳನ್ನು ಯಾವ ಮೂಲದಿಂದ ಎಷ್ಟರ ಪ್ರಮಾಣದಲ್ಲಿ ನಾವು ಪಡೆದುಕೊಳ್ಳಬೇಕು? ಹೀಗೆ ಸಣ್ಣ ಮಕ್ಕಳಿಂದ, ವಯಸ್ಕರವರೆಗೂ, ಎಂತಹ ಆಹಾರಗಳನ್ನು ಸೇವಿಸಬೇಕು ಇತ್ಯಾದಿ ಅನೇಕ ವಿಷಯಗಳ ಬಗ್ಗೆ, ಆಹಾರಕ್ಕೆ ಸಂಬಂಧಿಸಿದಂತೆ ಈ ಪುಸ್ತಕ ಜನಸಾಮಾನ್ಯರಿಗೆ ಉಪಯುಕ್ತವಾದುದು.

ಶ್ರೀಯುತರಾದ ಕೆ.ಟಿ.ಅಚ್ಚಯ್ಯನವರು ಮೂರು ಮುಖ್ಯವಾದ ಆಧಾರ ಗ್ರಂಥಗಳ ಸಹಾಯದಿಂದ ''ನಿಮ್ಮ ಆಹಾರ ಮತ್ತು ನೀವು'' ಎಂಬ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೧೨೦ ಪುಟಗಳಿವೆ. ಒಟ್ಟಾರೆ ೧೦ ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದಾರೆ. ಅವುಗಳೆಂದರೆ ಆಹಾರ ದಲ್ಲಿ ಅಡಕವಾಗಿರುವುದೇನು? ಸಮತೋಲನದ ಆಹಾರಗಳು. ಭಾರತದಲ್ಲಿ ಆಹಾರದ ಮಾದರಿಗಳು, ನಾವು ಸೇವಿಸಿದ ಆಹಾರ ಏನಾಗುವುದು? ಆಹಾರದ ಗೀಳುಗಳು ಮತ್ತು ನಿಷೇಧಗಳು, ಸಣ್ಣ ಮಕ್ಕಳು, ಗರ್ಭಿಣಿ, ಬಾಣಂತಿಯರ ಆಹಾರ, ನಾವು ಬಳಸುವ ಆಹಾರದಿಂಧ ಗರಿಷ್ಠ ಪ್ರಯೋಜನ ಪಡೆಯುವಿಕೆ, ಕ್ಯಾನ್ ಆಹಾರದಿಂದ ಉಂಟಾಗುವ ಅನಾರೋಗ್ಯ, ವಿಶೇಷ ಪಥ್ಯಾಹಾರಗಳ ಹಾಳಾಗುವಿಕೆ, ಶುಚಿತ್ವ ಮತ್ತು ಸೋಂಕು, ಇಷ್ಟು ಅಧ್ಯಾಯಗಳನ್ನಾಗಿ ಮಾಡಿಕೊಂಡು ಅವರಲ್ಲಿ ವಿಷಯಗಳನ್ನು ವಿಸ್ತಾರವಾಗಿ ತಿಳಿಸಿದ್ದಾರೆ. ಆ ಒಂದೊಂದು ಅಧ್ಯಾಯದಲ್ಲಿ ಯಾವ ಯಾವ ವಿಷಯಗಳಿದೆಯೆಂದು ಮುಂದೆ ತಿಳಿಸಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ನಾವು ಸೇವಿಸುವ ಆಹಾರದಲ್ಲಿರುವ ಪ್ರಮುಖವಾದ ಐದು ಪೋಷಕಾಂಶಗಳ ಬಗ್ಗೆ ತಿಳಿಸಿದ್ದಾರೆ. ಅವುಗಳೆಂದರೆ ಕಾರ್ಬೋಹೈಡ್ರೇಟು, ಪ್ರೋಟೀನು, ಮೇದಸ್ಸು, ವಿಟಮಿನ್‌ಗಳು ಮತ್ತು ಖನಿಜಗಳು, ಜೊತೆಗೆ ಈ ಪೋಷಕಾಂಶಗಳು ಯಾವ ಆಹಾರದಿಂದ ದೊರೆಯುತ್ತವೆ ಮತ್ತು ನಮ್ಮ ದೇಹಕ್ಕೆ ಎಷ್ಟರ ಮಟ್ಟಿಗೆ ಅವು ಅಗತ್ಯವಾಗಿವೆ, ಅವುಗಳ ಪ್ರಾಮುಖ್ಯತೆ ಏನು? ಎಂಬುದರ ಬಗ್ಗೆ ವಿವರಿಸಿದ್ದಾರೆ. ಅಲ್ಲದೆ ಒಟ್ಟಾರೆ ಆಹಾರ ವಸ್ತುಗಳಲ್ಲಿರುವ ಪೌಷ್ಟಿಕಾಂಶಗಳ ಬಗ್ಗೆ ಮಾಹಿತಿಗಳನ್ನು ಕೋಷ್ಟಕ ೧.೧ರಲ್ಲಿ ಸಂಗ್ರಹಿಸಿ ಕೊಟ್ಟಿರುವುದನ್ನು ಕಾಣಬಹುದು. ಜೊತೆಗೆ ನೀರಿನ ಅವಶ್ಯಕತೆಯನ್ನು ತಿಳಿದುಕೊಳ್ಳಬಹುದು.

ಎರಡನೇ ಅಧ್ಯಾಯದಲ್ಲಿ ಸಮತೋಲನ ಆಹಾರವೆಂದರೇನು? ಸಮತೋಲನ ಆಹಾರಗಳು ಯಾವುವು? ನಮ್ಮ ದೇಹಕ್ಕೆ ಬೇಕಾದ ಅಗತ್ಯ ಪ್ರಮಾಣದ ಪೋಷಕಾಂಶಗಳನ್ನು ಸೇವಿಸಬೇಕಾದ ಆಹಾರ ವಸ್ತುಗಳ ವೈವಿಧ್ಯ ಮತ್ತು ಪ್ರಮಾಣಗಳ ಬಗ್ಗೆ ತಿಳಿಯಬಹುದು. ಏಕೆಂದರೆ ನಾವು ಉಪಯೋಗಿಸುವ ಆಹಾರ ಹೆಚ್ಚಾದರೂ ತೊಂದರೆ, ಕಡಿಮೆಯಾದರೂ ತೊಂದರೆ ಇದರಿಂದ ನಾವು ಆರೋಗ್ಯವಾಗಿರಲು ಸಾಧ್ಯ ಇಲ್ಲ. ಗಂಡಸರು, ಹೆಂಗಸರು, ಪ್ರಾಯದ

ಮಕ್ಕಳು, ಸಣ್ಣ ಮಕ್ಕಳು, ಪುಟ್ಟ ಕಂದಮ್ಮಗಳು, ಎಲ್ಲರೂ ತಮ್ಮ ವಯೋಮಿತಿಗೆ ತಕ್ಕಂತೆ ವಿವಿಧ ಆಹಾರಗಳನ್ನು ಎಷ್ಟೆಷ್ಟು ಸೇವಿಸ ಬೇಕೆಂಬುದನ್ನು ಇಲ್ಲಿ ತಿಳಿಯಬಹುದು.

ಭಾರತದ ಕೆಲವು ಸಾಮಾನ್ಯ ಆಹಾರ ವಸ್ತುಗಳಲ್ಲಿರುವ ಇತರ ಮೌಲ್ಯಗಳ ಬಗ್ಗೆ ಹಾಗೂ ಹಸಿರು ಸೊಪ್ಪು ತರಕಾರಿಗಳಲ್ಲಿರುವ ವಿಟಮಿನ್ ಮತ್ತು ಖನಿಜಾಂಶಗಳ ಬಗ್ಗೆ ಕ್ರಮವಾಗಿ ಕೋಷ್ಟಕ ೨.೧, ೨.೨, ೨.೩, ೨.೪ರಲ್ಲಿ ಗಂಡಸು, ಹೆಂಗಸು ಮತ್ತು ಮಕ್ಕಳಿಗೆ ಅವರ ವಯೋಮಿತಿಗನುಗುಣವಾಗಿ ಉಪಯೋಗಿಸುವ ವಿಧಾನವನ್ನು ಅಲ್ಲಿ ಮನಗಾಣಬಹುದು. ನಂತರ ಮುಂದು ವರಿದು ದೇಶದ ವಿವಿಧ ಪ್ರಾಂತ್ಯಗಳಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿಗಳಿಗೆ ಒಂದು ದಿನದ ನಾಲ್ಕು ಹೊತ್ತಿನ ಊಟದ ಪಟ್ಟಿಯನ್ನು ಕೋಷ್ಟಕ ೨.೫, ೨.೬, ೨.೭, ೨.೮ರಲ್ಲಿ ತಿಳಿಸಿದ್ದಾರೆ.

ಮೂರನೇ ಅಧ್ಯಾಯದಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ನಾವು ವಸ್ತುತಃ ಏನನ್ನು ಸೇವಿಸುತ್ತೇವೆ ? ಮತ್ತು ಇವುಗಳು ನಿಜವಾಗಿ ನಮಗೆ ಬೇಕಾದ ಪ್ರಮಾಣಕ್ಕಿಂತ ಎಷ್ಟರ ಮಟ್ಟಿಗೆ ಕಡಿಮೆಯಾಗಿವೆ ಅಂಶವನ್ನು ಇಲ್ಲಿ ಕಾಣಬಹುದು. ಕೋಷ್ಟಕ ೩.೧ರಲ್ಲಿ ಒಬ್ಬ ವಯಸ್ಕನ ಭರತದ ವಿವಿಧ ಪ್ರದೇಶಗಳ ಗ್ರಾಮೀಣ ಜನತೆ ಸರಾಸರಿ ಸೇವಿಸುವ ಆಹಾರದ ಪ್ರಮಾಣವನ್ನು ಕಾಣಬಹುದು. ಈ ಕೋಷ್ಟಕದಿಂದ ಎಲ್ಲಾ ಪ್ರದೇಶಗಳಲ್ಲೂ ಏಕದಳ ಧಾನ್ಯವನ್ನು ಹೆಚ್ಚಾಗಿ ಬಳಸುತ್ತಾರೆ. ಜೊತೆಗೆ ಇವರು ಬಳಸುವ ತರಕಾರಿಗಳ ಸೇವನೆಯು ತೃಪ್ತಿಕರವಾದುದು ಎಂಬ ಅಂಶಗಳನ್ನು ಮನಗಾಣಬಹುದು.

ನಾಲ್ಕನೇ ಅಧ್ಯಾಯದಲ್ಲಿ ನಾವು ಸೇವಿಸಿ ದಂತಹ ಆಹಾರ ಏನಾಗುತ್ತದೆ ಎಂಬುದನ್ನು ಇಲ್ಲಿ ನೋಡಬಹುದು. ನಮ್ಮ ದೇಹದ ಲ್ಲಾಗುವ ಜೀರ್ಣಕ್ರಿಯೆಯ ಬಗ್ಗೆಯೂ ತಿಳಿಯಬಹುದು. ಬಾಯಿ, ಜಠರ, ಸಣ್ಣ ಕರುಳು, ದೊಡ್ಡಕರುಳು ನಾವು ಸೇವಿಸಿದ ಆಹಾರದ ಪಚನಕ್ರಿಯೆ ಇಲ್ಲಿ ನಡೆಯುತ್ತದೆ. ನಾವು ಸೇವಿಸಿದ ಆಹಾರ ಪಚನವಾದ ನಂತರ ನಮ್ಮ ದೇಹಕ್ಕೆ ಅನುಕೂಲವಾಗುವಂತೆ ಶಕ್ತಿಯನ್ನು ನೀಡಲು ಹೇಗೆ ಸಹಕಾರಿ ಯಾಗಿದೆ ಎಂಬುದನ್ನು ಇಲ್ಲಿ ಮನಗಾಣಬಹುದು.

ಐದನೇ ಅಧ್ಯಾಯದಲ್ಲಿ ಮೂಢನಂಬಿಕೆ ಗಳು ಮತ್ತು ಸಂಪ್ರದಾಯದ ಅಭ್ಯಾಸ ಗಳಿಂದಾಗಿ ಅನೇಕ ಆಹಾರಗಳನ್ನು ತಿನ್ನ ಬಹುದು ಅಥವಾ ತಿನ್ನದೇ ಇರಬಹುದು. ಇದು ನಮ್ಮ ಆಹಾರ ಪದ್ಧತಿಯು ಕೂಡ. ಇದನ್ನು ಎಲ್ಲಾ ಸಮಯದಲ್ಲೂ ಕೆಟ್ಟದ್ದು ಎನ್ನುವಂತಿಲ್ಲ. ಉದಾ:- ಭಾರತದಲ್ಲಿ ಇದು ಆಹಾರ ವಸ್ತು ಗಳನ್ನು ವಿಂಗಡಿಸುವ ಸಾಮಾನ್ಯ ಪದ್ಧತಿ ಯಾಗಿದೆ. ನಮ್ಮ ದೇಶದಲ್ಲಿ ಪ್ರಚಲಿತವಿರುವ ಆಯುರ್ವೇದ ಮತ್ತು ಯೂನಾನಿ ವೈದ್ಯಕೀಯ ಪದ್ಧತಿಗಳಲ್ಲಿ ಕೂಡ ಇದನ್ನು ಅಂಗೀಕರಿಸಿ ದ್ದಾರೆ. ಉದಾ:- ಉಷ್ಣ ಪದಾರ್ಥ ಎಂದು ಪರಿಗಣಿಸಿರುವ ಮಾವಿನ ಹಣ್ಣನ್ನು ಶೀತ ಪದಾರ್ಥವೆಂದು ಪರಿಗಣಿಸಿದ ಹಾಲಿನ ಜೊತೆಯೇ ತಿನ್ನಬೇಕೆಂದು ಹೇಳುತ್ತಾರೆ. ಇಲ್ಲದಿದ್ದರೆ ಹುಣ್ಣುಗಳು ಏಳುತ್ತವೆ ಎನ್ನುತ್ತಾರೆ. ದಕ್ಷಿಣ ಮತ್ತು ಮಧ್ಯ ಅಮೇರಿಕ, ಫಿಲಿಫೈನ್ಸ್, ಬರ್ಮಾ, ಥೈಲ್ಯಾಂಡ್, ವಿಯಟ್ನಾಂ ಮತ್ತು ಮಲೇಷಿಯಾಗಳಲ್ಲಿರುವ ಅನೇಕ ಸ್ಥಳೀಯ ರಲ್ಲಿ ಕೂಡ ಹೀಗೆಯೇ ಉಷ್ಣ ಮತ್ತು ಶೀತ ಆಹಾರಗಳೆಂಬ ಭೇದ ಭಾವಗಳಿವೆ ಎಂಬುದು ಕುತೂಹಲಕರವಾಗಿದೆ ಎಂದು ಸಂಪಾದಕರು ಹೇಳಿದ್ದಾರೆ. ಗರ್ಭಿಣಿಯರಿಗೆ ಅಲ್ಲದೆ ಕೆಲವು

ಕಾಯಿಲೆಗಳ ಚಿಕಿತ್ಸಾಕ್ರಮದಲ್ಲಿ ಕೂಡ ಇದೇ ತಪ್ಪು ಅನುಸರಿಸುವುದನ್ನು ಕಾಣಬಹುದು. ಆಹಾರ ಜೀರ್ಣತೆಯ ಬಗ್ಗೆಯೂ ಜನರು ನಂಬಿಕೆಗಳನ್ನು ಇರಿಸಿಕೊಂಡಿದ್ದಾರೆ.

ಪೋಷಣೆಯ ದೃಷ್ಟಿಯಿಂದ ಮುಖ್ಯವಾದ ಎರಡು ಸಮಯದಲ್ಲಿ ಜನರಲ್ಲಿ ಮೂಢ ನಂಬಿಕೆಗಳು ಮೂಡಿವೆ. ಅವುಗಳೆಂದರೆ ಗರ್ಭವತಿಯಾಗಿದ್ದಾಗ ಹಾಗೂ ಹೆರಿಗೆಯ ನಂತರ ಭಾರತದ ಹೆಚ್ಚಿನ ಭಾಗಗಳಲ್ಲಿ ಫರಂಗಿ ಹಣ್ಣನ್ನು ಸೇವಿಸಿದರೆ ಗರ್ಭಸ್ರಾವವಾಗ ಬಹುದೆಂಬ ಕಾರಣದಿಂದ ಅದನ್ನು ತ್ಯಜಿಸಿ ಅದರಿಂದ ದೊರಕುವ ವಿಟಮಿನ್ 'ಎ' ಅನ್ನು ಕಳೆದುಕೊಳ್ಳುತ್ತಾರೆ. ಇದೇ ರೀತಿ ದಕ್ಷಿಣ ಭಾರತದಲ್ಲಿ ಉಷ್ಣದ ಆಹಾರಗಳೆಂದು ಕುಂಬಳಕಾಯಿ ಮತ್ತು ಹಲಸಿನ ಹಣ್ಣುಗಳನ್ನು ತ್ಯಜಿಸಿ ವಿಟಮಿನ್ 'ಎ' ಅನ್ನು ಕಳೆದುಕೊಳ್ಳು ವುದನ್ನು ಕಾಣಬಹುದು. ಈ ಸಮಯದಲ್ಲಿ ಮೊಟ್ಟೆ, ಮಾಂಸಗಳನ್ನು ಬಹಿಷ್ಕರಿಸಿದ್ದಾರೆ. ಹೆಚ್ಚಾಗಿ ಇಲ್ಲಿ ಮೀನನ್ನು ವರ್ಜಿಸುತ್ತಾರೆ. ಆದರೆ ಕೇರಳದಲ್ಲಿ ಮೀನನ್ನೆ ಅಧಿಕವಾಗಿ ಈ ಸಮಯ ದಲ್ಲಿ ಉಪಯೋಗಿಸುತ್ತಾರೆ.

. ಹೀಗೆ ಕೆಲವೆಡೆಗಳಲ್ಲಿ ನಿಷೇಧಿಸಲ್ಪಟ್ಟ ಆಹಾರಗಳನ್ನು ಇತರೆಡೆಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಬಳಸುತ್ತಾರೆ. ಇದರಿಂದ ಆಹಾರ ವಸ್ತುಗಳ ಬಗ್ಗೆ ಜನರಿಗಿರುವ ಮೂಢನಂಬಿಕೆ ಗಳು ತಪ್ಪು ಎಂಬುದನ್ನು ಮನಗಾಣಬಹುದು. ಮಕ್ಕಳು ಎಮ್ಮೆ ಹಾಲು ಕುಡಿದರೆ ಮಂದ ಬುದ್ಧಿಯವರಾಗುತ್ತಾರೆಂಬುದು ದಕ್ಷಿಣ ಭಾರತದಲ್ಲಿನ ಜನರ ನಂಬಿಕೆ. ಇನ್ನೊಂದು ಎಂದರೆ ಮಗು ಹುಟ್ಟಿದ ಮೂರು-ನಾಲ್ಕು ದಿನಗಳವರೆಗೂ ತಾಯಿಯ ಹಾಲನ್ನು ಕುಡಿಸಬಾರದು ಎಂದು ಬಹಿಷ್ಕಾರವಿದೆ. ಇಂತಹ ಮೂಢನಂಬಿಕೆಗಳ ಬಗ್ಗೆ ಸಂಪಾದಕರು ಅವರು ಬಹಿಷ್ಕರಿಸಿದ ಪದಾರ್ಥಗಳಿಂದ ದೊರಕುವ ಪೋಷಕಾಂಶಗಳನ್ನು ಅದರ ಉಪಯೋಗವನ್ನು ಇಲ್ಲಿ ತಿಳಿಸಿರುವುದನ್ನು ಮನಗಾಣಬಹುದು.

ಅಧ್ಯಾಯ ಆರರಲ್ಲಿ ಸಣ್ಣ ಮಕ್ಕಳು, ಗರ್ಭಿಣಿ, ಬಾಣಂತಿಯರು ತೆಗೆದುಕೊಳ್ಳುವ ಆಹಾರದ ಬಗ್ಗೆ ತಿಳಿಸಿದ್ದಾರೆ. ಮಗುವಿನ ಜನನದಿಂದ ಒಂದು ವರ್ಷ ತುಂಬುವವರೆಗೂ ಎಂತಹ ಆಹಾರ ನೀಡಬೇಕು ಎಂಬ ಪೋಷಣಾ ತತ್ವಗಳನ್ನು ಹೇಳಿರುವುದನ್ನು ಕಾಣಬಹುದು. ಅಕಾಲಿಕ ಮತ್ತು ಅತಿ ಸಣ್ಣಗಾತ್ರದ ಕೂಸು ಗಳನ್ನು ಹೇಗೆ ಬೆಳೆಸಬೇಕು ಎಂಬುದರ ಬಗ್ಗೆಯೂ ತಿಳಿಸಿದ್ದಾರೆ. ಬೆಳೆದ ಮಕ್ಕಳಿಗೆ, ಗರ್ಭಿಣಿಯರಿಗೆ, ಎದೆ ಉಣಿಸುವ ತಾಯಿ ಯರಿಗೆ ಏನೇನು, ಎಷ್ಟೆಷ್ಟು, ಯಾವ ರೀತಿ ಆಹಾರಗಳನ್ನು ನೀಡಬೇಕು ಎಂಬುದನ್ನು ವಿವರಿಸಿದ್ದಾರೆ. ಇಲ್ಲಿ ಇದನ್ನು ಕೋಷ್ಟಕಗಳ ಸಹಾಯದಿಂದ ತಿಳಿದುಕೊಳ್ಳಬಹುದು.

ಏಳನೇ ಅಧ್ಯಾಯದಲ್ಲಿ ನಾವು ಬಳಸುವ ಆಹಾರದಿಂದ ಗರಿಷ್ಠ ಪ್ರಯೋಜನವನ್ನು ಹೇಗೆ ಪಡೆಯಬಹುದು ಎಂಬುದನ್ನು ಇಲ್ಲಿ ಕಾಣ ಬಹುದು. ಉತ್ತಮ ಪೌಷ್ಟಿಕತೆಯ ದೃಷ್ಟಿಯಿಂದ ನಾವು ಬಳಸುವ ಆಹಾರ ಪದಾರ್ಥಗಳನ್ನು ಇನ್ನು ಉತ್ತಮ ರೀತಿಯಲ್ಲಿ ಬೆಳೆಸಿಕೊಳ್ಳಲು ಅನೇಕ ವಿಧಗಳಿವೆ. ಅವುಗಳೆಂದರೆ ನಾವು ಯಾವುದೇ ಆಹಾರ ವಸ್ತುಗಳನ್ನು ಖರೀದಿಸುವಾಗ ಉತ್ತಮವಾದದ್ದನ್ನೇ ತೆಗೆದುಕೊಳ್ಳಬೇಕು. ಆಹಾರ ವಸ್ತುಗಳನ್ನು ವಿವೇಚನೆಯಿಂದ ಸಂಯೋಜಿಸಬೇಕು. ಅಡುಗೆ ಮನೆಯಲ್ಲಿ ಅವನ್ನು ಉಪಯೋಗಿಸುವಾಗ ಅವುಗಳಲ್ಲಿನ ಪೌಷ್ಟಿಕಾಂಶಗಳನ್ನು ಅನೇಕ ರೀತಿಯಲ್ಲಿ ಕಾಯ್ದಿಟ್ಟುಕೊಳ್ಳಬಹುದು. ಆಹಾರ ವಸ್ತುಗಳ ಪೌಷ್ಟಿಕ ಮೌಲ್ಯವನ್ನು ಹೆಚ್ಚಿಸಿ ಕೊಳ್ಳಬೇಕಾದರೆ ಅರೆಬೇಯಿಸುವಿಕೆಯಿಂದ ಹುರಿಯುವಿಕೆ

ಯಿಂದ, ಮೊಳಕೆ ಬರಿಸುವಿಕೆಯಿಂದ, ಹುದುಗುವಿಕೆಯಿಂದ ಹಾಗೂ ಸುಣ್ಣವನ್ನು ಅಡುಗೆ ಊಟಕ್ಕೆ ಸೇರಿಸಿಕೊಳ್ಳುವಿಕೆಯಿಂದ ಈ ಕ್ರಮಗಳನ್ನು ಅನುಸರಿಸಬಹುದು. ಇವುಗಳಿಂದ ಅನೇಕ ಪ್ರಯೋಜನ ಗಳನ್ನು ಪಡೆಯಬಹುದು.

ಎಂಟನೇ ಅಧ್ಯಾಯದಲ್ಲಿ ನ್ಯೂನ ಆಹಾರದಿಂದ ಉಂಟಾಗುವ ಅನಾರೋಗ್ಯದ ಬಗ್ಗೆ ತಿಳಿದು ಕೊಳ್ಳಬಹುದು. ಒಬ್ಬ ವ್ಯಕ್ತಿಗೆ ಅವಶ್ಯವಾದಷ್ಟು ಆಹಾರ ಸಿಗದಿದ್ದಾಗ ಅವನು ತೆಳ್ಳಗೆ ಹಾಗೂ ನಿಶ್ಯಕ್ತನಾಗುತ್ತಾನೆ. ಆದ್ದರಿಂದ ನಮ್ಮ ದೇಹದ ಅಂಗಾಂಗಗಳಿಗೆ ಪೂರಕವಾಗಿ ಶಕ್ತಿಯನ್ನು ಕೊಡುವಂತೆ ನಾವು ಆಹಾರವನ್ನು ಸೇವಿಸಬೇಕು. ನಾವು ನಿಶ್ಯಕ್ತರಾಗಲು ಪೋಷಕಾಂಶಗಳ ಕೊರತೆ ಕಾರಣವಾಗಿದೆ. ಇವುಗಳ ಕೊರತೆ ಯಿಂದ ಯಾವ್ಯಾವ ರೋಗಗಳು ಬರುತ್ತವೆ ಎಂಬುದನ್ನು ತಿಳಿಯಬಹುದು.

ಒಂಬತ್ತನೇ ಅಧ್ಯಾಯದಲ್ಲಿ ನಮ್ಮ ದೇಹದ ಅನಾರೋಗ್ಯದ ಸ್ಥಿತಿಗೆ ಕೆಲವು ಆಹಾರದ ಪೌಷ್ಟಿಕಾಂಶಗಳು ನೇರವಾಗಿ ಕಾರಣವೆನಿಸುತ್ತವೆ. ಆದನ್ನು ನಾವು ಸುಧಾರಿಸಬೇಕಾದರೆ ಅಂತಹ ಆಹಾರ ಪದಾರ್ಥಗಳನ್ನು ತಿನ್ನುವುದನ್ನು ಬಿಡಬೇಕಾಗುತ್ತದೆ. ಬಿಟ್ಟಾಗ ನಾವು ಆರೋಗ್ಯವಾಗಿರಲು ಸಾಧ್ಯ. ಇಲ್ಲದಿದ್ದರೆ ಅವನ್ನು ತಿನ್ನುವುದರಿಂದ ಮತ್ತೊಂದು ಕಾಯಿಲೆಗೆ ನಾವೇ ಕಾರಣರಾಗುತ್ತೇವೆ. ಯಾವ ಕಾಯಿಲೆಗೆ ಯಾವ ಆಹಾರವನ್ನು ತ್ಯಜಿಸಬೇಕು, ಯಾವುದನ್ನು ಸೇವಿಸಬೇಕು ಎಂಬುದರ ಬಗ್ಗೆ ಇಲ್ಲಿ ತಿಳಿಯಬಹುದು.

ಕೊನೆಯ ಅಧ್ಯಾಯದಲ್ಲಿ ನಾವು ನಮ್ಮ ಆರೋಗ್ಯದ ದೃಷ್ಟಿಯಿಂದ ಉತ್ತಮವಾದ ಆಹಾರವನ್ನು ಖರೀದಿಸಿ ತಿನ್ನುತ್ತಿರುತ್ತೇವೆ. ಆದರೆ ಆಹಾರ ಹಾಳಾಗಿದ್ದಲ್ಲಿ ಅಥವಾ ಸೋಂಕು ಪೀಡಿತವಾಗಿದ್ದಲ್ಲಿ ಅದನ್ನು ತಿಂದಾಗ ನಮಗೆ ಅನಾರೋಗ್ಯ ಉಂಟಾಗುತ್ತದೆ. ಇದಕ್ಕೆಲ್ಲಾ ಕಾರಣ ನೀರಿನ ಅಶುದ್ಧತೆ, ವೈಯುಕ್ತಿಕ ಶುಚಿತ್ವ ಇಲ್ಲದಿರುವುದು. ಕಸಕಡ್ಡಿಗಳನ್ನು ಎಲ್ಲೆಂದರಲ್ಲಿ, ಅಡಿಗೆ ಮನೆಯಲ್ಲಿ ಬಿಸಾಡುವುದು ಇತ್ಯಾದಿ. ಇದರಿಂದ ಯಾವ ರೋಗಗಳು ಬರುತ್ತವೆ? ಇದರಿಂದ ನಾವು ಹೇಗೆ ಶುದ್ಧವಾಗಿಟ್ಟು ಕೊಳ್ಳಬೇಕು ? ಅದರಿಂದಾಗುವ ಪ್ರಯೋಜನ ಇತ್ಯಾದಿ ವಿಷಯಗಳ ಬಗ್ಗೆ ತಿಳಿದುಕೊಳ್ಳಬಹುದು.

"ಈ ಪುಸ್ತಕದಲ್ಲಿ ಹೊಸದೇನೂ ಇಲ್ಲ. ಈ ದೇಶದ ಶ್ರೀಸಾಮಾನ್ಯನ ಆಸಕ್ತಿ ಮತ್ತು ಆತನಿಗಾಗುವ ಉಪಯುಕ್ತತೆಗಳನ್ನು ಗಮನದಲ್ಲಿರಿಸಿಕೊಂಡು ಬಹುತೇಕ ಭಾರತೀಯ ಪೋಷಣಾತಜ್ಞರು ಈಗಾಗಲೇ ತಿಳಿಸಿರುವ ವಿಷಯಗಳನ್ನು ಇಲ್ಲಿ ಸರಳವಾಗಿ ಮಂಡಿಸಲಾಗಿದೆ" ಎನ್ನುವ ಲೇಖಕ ಅಚ್ಚಯ್ಯನವರ ಮಾತು ಅಕ್ಷರಶಃ ನಿಜವಾಗಿದೆ. ಶೈಲಿ ಸರಳವಾಗಿದೆ. ಹೇಳುವ ರೀತಿ ಅಚ್ಚುಕಟ್ಟಾಗಿದೆ. ಎಲ್ಲಿಯೂ ಕ್ಲಿಷ್ಟತೆಯಿಲ್ಲ. ವಿಷಯ ಶಾಸ್ತ್ರಕ್ಕೆ ಸಂಬಂಧಪಟ್ಟದ್ದಾದರೂ ಸ್ಪಷ್ಟತೆ ಇದೆ. ಇದು ಜನಸಾಮಾನ್ಯರೆಲ್ಲರಿಗೂ ತುಂಬಾ ಉಪಯುಕ್ತವಾದಂತಹ ಗ್ರಂಥ. ಪ್ರತಿಯೊಬ್ಬರ ಮನೆಯಲ್ಲೂ ಇರಬಹುದಾದಂತಹ ಪುಸ್ತಕವಿದು.

ಎಂ.ಎ. ವಿಜಯಲಕ್ಷ್ಮಿ, ಅಕ್ಕಿಹೆಬ್ಬಾಳು
ಕೆ.ಆರ್. ಪೇಟೆ ತಾಲ್ಲೂಕು

Statement of ownership and other particulars about the monthl periodical "**PUSTAKA PRAPANCH**" as required to be publishe under rule 8 of the Registration of Newspapers (Central) Rule 1956.

FORM IV

Place of Publication	-Karnataka State Adult Education Counc 5/1 Vinoba Road, Manasagangothri, Mysore-6.
Periodicity	-Monthly
Printer's Name	-M.Krishnappa
Nationality & Address	- Indian Karnataka State Adult Education Council Printing Press 5/1 Vinoba Road, Manasa gangothri, Mysore-6.
Publisher's Name& Address	- R.L. Mangalore General Secretary Karnataka State Adult Education Council 5/1 Vinoba Road, Manasagangothri, Mysore-6.
Nationality	- Indian
Editor's Name	- R.Boraiah
Nationality	- Indian
Address	- Karnataka State Adult Education Counci 5/1 Vinoba Road, Manasagangothri, Mysore-6.

I,the General Secretary hereby declare that the particulars give above are true to the best of my knowledge and belief.

R.L. Mangalore
General Secretary
Karnataka State Adult Education Counc
Mysore-6.

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮುಂಚಯ್ಯ

ಕ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಆರ್. ಎಲ್. ಮಂಗಳೂರ್, ಪ್ರಧಾನ ಕಾರ್ಯದರ್ಶಿ

Reg. No KRNN-29 / WPP 6

Licence No. 21
Licenced to Post with Payment

ಲೇಖಕರಲ್ಲಿ ಮನವಿ

ಪುಸ್ತಕ ಪ್ರಪಂಚದಲ್ಲಿ ಪ್ರಕಟನೆಗಾಗಿ ಲೇಖನ, ಪ್ರಬಂಧ, ಕತೆಗಳನ್ನು ಸ್ವಾಗತಿಸಲಾಗಿದೆ. ಪುಸ್ತಕ ಪ್ರಪಂಚ ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು. ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳ ಪರಿಚಯ ಮಾಡಿಕೊಡುವುದು. ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕತೆಗಳು, ಕವಿತೆಗಳು, ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳನ್ನು ಪುಸ್ತಕ ಪ್ರಪಂಚಕ್ಕೆ ಕಳುಹಿಸಬಹುದು.

ಬರಹಗಳು ಸ್ವತಂತ್ರ ಅಥವಾ ಅನುವಾದಿತ ಕೃತಿಗಳಾಗಿರಬಹುದು. ಅನುವಾದಿತ ಕೃತಿಗಳಾದಲ್ಲಿ ಮೂಲ ಲೇಖಕರ ಹಾಗೂ ಪ್ರಕಾಶಕರ ಅನುಮತಿ ಪತ್ರವನ್ನು ಲಗತ್ತಿಸಿ ಕಳುಹಿಸಿಕೊಡಬೇಕು. ಲೇಖಕರ ಮತ್ತು ಪ್ರಕಾಶಕರ ವಿಳಾಸಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಬೇಕು.

ಲೇಖನಗಳು ೧೨೦೦ ಪದಗಳಿಗೆ ಮೀರದಂತೆ ಇರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆಯಬೇಕು. ಲೇಖನಗಳು ಸ್ವೀಕೃತವಾದಲ್ಲಿ ಯಥಾವಕಾಶ ಪ್ರಕಟಿಸಲಾಗುವುದು. ಪುಸ್ತಕ ಪ್ರಪಂಚವು ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಸಂಭಾವನೆಯನ್ನು ನೀಡಲಾಗುವುದು.

ಸಂಪಾದಕರು ಸ್ವೀಕೃತವಾದ ಲೇಖನಗಳಲ್ಲಿ ಸೂಕ್ತ ಕಂಡ ಬದಲಾವಣೆಗಳನ್ನು ಮಾಡಬಹುದು. ಲೇಖನಗಳು ಅಕಸ್ಮಾತ್ ಕಳೆದು ಹೋದಲ್ಲಿ ಸಂಪಾದಕರು ಹೊಣೆಗಾರರಲ್ಲ.

ಅಸ್ವೀಕೃತ ಬರಹಗಳು ಹಿಂದಿರುಗಬೇಕಾದರೆ ಲೇಖನಗಳ ಸಂಗಡವೇ ಅವಶ್ಯವಿರುವಷ್ಟು ಅಂಚೆ ಚೀಟಿ ಕಳುಹಿಸಿರಬೇಕು.

ಸಂಪಾದಕ

Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006